# ಕೊಡಗು ಸಂಗಾತಿ


ಜನವರಿ 1 ರಿಂದ 15, 2001 ಪಾಕ್ಷಿಕ ಪತ್ರಿಕೆ (ಪೆರಾರ್ದೆ 17-29, ಪೊನ್ನಿ 1-2)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಭಾಷೆಯಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 1 ಪುಟಗಳು : 24 ಬೆಲೆ ರೂ. : 6-00





ಲೇಖನ : ಒಳಪುಟಗಳಲ್ಲಿ

ವಿಶ್ವ ಚೆಸ್ ಸಾಮ್ರಾಜ್ಯದ ವಿಶ್ವ ಚಾಂಪಿಯನ್ ವಿಶ್ವನಾಥ್ ಆನಂದ್‌ರನ್ನು ಭಾರತದ ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಅಭಿನಂದಿಸುತ್ತಿರುವುದು

"ನಾಡಿನ ಜನತೆಗೆ ಯ ಹೊಸ ವರ್ಷದ ಶುಭಾಶಯಗಳು"

"ಕನ್ನಡ ನಾಡಿನ ಜನತೆಗೆ ಹೊಸ ವರ್ಷ 2001ರ ಶುಭಾಶಯಗಳು"

## ಕೊಡಗು ಸಂಗಾತಿ ಚಂದದಾರರಿಗೊಂದು ಸುವಾರ್ತೆ

## ಲಾಟರಿ ಯೋಜನೆ ಡ್ರಾ ದಿನಾಂಕ 8-4-2001ಕ್ಕೆ ಮುಂದೂಡಿಕೆ

ಕೊಡಗು ಸಂಗಾತಿ ಪತ್ರಿಕಾ ಅಭಿವೃದ್ಧಿ ಬಯಸಿ ಲಾಟರಿ ಯೋಜನೆಯನ್ನು ಈ ಹಿಂದೆ ಹಮ್ಮಿಕೊಂಡಿದ್ದು ಅದನ್ನು ದಿನಾಂಕ 8-4-2001ಕ್ಕೆ ಮುಂದೂಡಲಾಗಿದೆ. ಮಾನ್ಯ ಚಂದದಾರರು 31-3-2001ರ ಒಳಗಡೆ ಪತ್ರಿಕೆಯ ಚಂದವನ್ನು ತಪ್ಪದೇ ನವೀಕರಿಸಿಕೊಂಡವರ ಹೆಸರಿನಲ್ಲಿ ಮಾತ್ರ ಲಾಟರಿಯನ್ನು ಎತ್ತಲಾಗುವುದು. ನವೀಕರಣದ ವಾಯಿದೆ ದಿನಾಂಕವನ್ನು ಚಂದದಾರರ ವಿಳಾಸದ ಮೇಲ್ಭಾಗದಲ್ಲಿ ಕಾಣಿಸಿರುತ್ತೇವೆ.

<u>ಬಹುಮಾನಗಳು</u>

| | | | |
|---|---|---|---|
| 1ನೇ ಬಹುಮಾನ | : ¼ ಪವನ್ ಚಿನ್ನ | 2ನೇ ಬಹುಮಾನ | : 1½ ಲೀ ಕುಕ್ಕರ್ 1 |
| 3ನೇ ಬಹುಮಾನ | : ಸ್ಟೀಲ್ ಫ್ಲಾಸ್ಕ್ 1 | 4ನೇ ಬಹುಮಾನ | : ಮಿಲ್ಕ್ ಕುಕ್ಕರ್ 1 |
| 5ನೇ ಬಹುಮಾನ | : ದೋಸೆ ತವ 1 | 6ನೇ ಬಹುಮಾನ | : ಗೋಡೆ ಗಡಿಯಾರ 1 |
| 7ನೇ ಬಹುಮಾನ | : ಉತ್ತಮ ಪೆನ್ನು 1 | 8ನೇ ಬಹುಮಾನ | : ರೋನಾಲ್ಡ್ ಪೆನ್ನುಗಳು 1 ಡಜನ್ |
| 9ನೇ ಬಹುಮಾನ | : ರೋನಾಲ್ಡ್ ಪೆನ್ನುಗಳು ½ ಡಜನ್ | 10ನೇ ಬಹುಮಾನ | : ಒಂದು ಸಂಗಾತಿ ಮೊಮೆಂಟೊ. |

ಚಂದದಾರರು ಹಣವನ್ನು ಈ ಕೆಳಗಿನ ವಿಳಾಸಕ್ಕೆ ನಗದು, ಎಂ.ಓ., ಡಿ.ಡಿ. ಮೂಲಕ ಕಳುಹಿಸುವುದು. ಮೈಸೂರಿನ ಸ್ಥಳೀಯ ಚೆಕ್‌ಗಳನ್ನು ಸ್ವೀಕರಿಸಲಾಗುವುದು. ಹಿತೈಷಿಗಳು ನವೀಕರಿಸುವುದಲ್ಲದೆ ವಾರ್ಷಿಕ ಚಂದ, ಜೀವಾವಧಿ ಸದಸ್ಯತನ (Rs. 2000/-), ಜಾಹೀರಾತು, ಚಿರಸ್ಮರಣೆ ಇತ್ಯಾದಿಯನ್ನು ನೀಡಿ ಸಹಕರಿಸುವಂತೆ ಮನಪೂರ್ವಕವಾದ ಕಳಕಳಿಯ ಪ್ರಾರ್ಥನೆ.

ಒಬ್ಬೊಬ್ಬ ಚಂದದಾರರು ಒಂದೊಂದು ಸದಸ್ಯರನ್ನು ನೊಂದಾಯಿಸಿದಲ್ಲಿ ಪತ್ರಿಕೆ ಅಭಿವೃದ್ಧಿ ಖಂಡಿತ ಸಾಧ್ಯವೆಂದು ನಾವು ಭರವಸೆ ನೀಡುತ್ತೇವೆ. ಪತ್ರಿಕೆ ನಿಮ್ಮದು, ಪತ್ರಿಕೆ ನಿಮ್ಮ ಮಗು, ಮಗುವಿನ ಲಾಲನೆ ಪಾಲನೆ ಚಂದದಾರರಿಗೆ ಸೇರಿದ ಕರ್ತವ್ಯವಾಗಿದೆ.

**ಸಂಪಾದಕಿ ಮತ್ತು ಸಂಗಾತಿ ಬಳಗ**

**ವಿಳಾಸ :** ಸಂಪಾದಕಿ, ನಂ. 35, ಸವಿತಾ ನಿಲಯ,
1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ,
ಮೈಸೂರು - 570 012 ✆ : **0821 - 516771**



## ಶುಭಾಶಯಗಳು

ದಿನಾಂಕ 3-12-2000ದಂದು ಮೈಸೂರಿನ ಕಲಾಮಂದಿರದಲ್ಲಿ ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಆಶ್ರಯನಲ್ಲಿ ನಡೆದ "ಗೌಡ ಕಿಶೋರ" ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದು ತನ್ನ ಹೆತ್ತವರಿಗೂ, ಕುಟುಂಬಕ್ಕೂ, ಗ್ರಾಮಕ್ಕೂ, ವೀರರಾಜ ಪೇಟೆ ತಾಲೂಕಿಗೂ ಮತ್ತು ತನ್ನ ಸ್ನೇಹಿತರಿಗೂ ಹಾಗೂ ಬಂದು ಬಳಗಕ್ಕೂ ಕೀರ್ತಿ ತಂದ II ರುದ್ರಗುಪ್ಪೆ ಗ್ರಾಮದ ಮೂಡಗದ್ದೆ ವಸಂತನವರ ಮಗ ಸುಮನ್‌ಗೆ ನಮ್ಮೆಲ್ಲರ ಹಾರ್ದಿಕ ಶುಭಾಶಯಗಳು

ಪ್ರಕಟಣೆ :
**ಬಾರಿಕೇರ ಮನೋಜ್ ಕುಮಾರ್**
**ಮತ್ತು ಸಹೋದರರು**
ಇಗ್ಗುತಪ್ಪ ಕೋಲ್ಡ್ ಸ್ಟೋರೇಜ್,
ಖಾಸಗಿ ಬಸ್ ನಿಲ್ದಾಣ,
ವೀರರಾಜಪೇಟೆ, ದಕ್ಷಿಣ ಕೊಡಗು
✆ : 08274 - 56591

**2001,** ಜನವರಿ 1 ರಿಂದ 15ರ ತನಕ

ಒಳನೋಟ


| ಕನ್ನಡ ವಿಭಾಗ | ಲೇಖಕರು | ಪುಟಗಳು |
|---|---|---|
| ಪ್ರಾಥಮಿಕ ಪೂರ್ವ ಶಿಕ್ಷಣ | - ಸಂಪಾದಕೀಯ | 02 |
| ಪೀತ ಪತ್ರಿಕೆಗಳಿಗೆ ಕಡಿವಾಣ | -- ಸಂಗಾತಿ | 02 |
| ವಿಶ್ವ ಚೆಸ್ ಸಾಮ್ರಾಜ್ಯದ ವಿಶ್ವ ಚಾಂಪಿಯನ್ ಭಾರತದ ವಿಶ್ವನಾಥನ್ ಆನಂದ್ | - ಸಂಗಾತಿ | 03 |
| ವಿಟಮಿನ್‌ಗಳ ಕೊರತೆ | - ಪ್ರವೀಣ ಯನ್. ಎಸ್. | 04 |
| ಕನ್ನಡ ವ್ಯಾಕರಣದಲ್ಲಿ ಅರೆಭಾಷೆಯ ಸೊಗಡು | - ಬಿಟ್ಟೀರ ಚೋಂದಮ್ಮ ಶಂಭು | 05 |
| ಚೆಟ್ಟಿಮಾನಿಯಲ್ಲಿ ರಂಗಮಂದಿರದ ಉದ್ಘಾಟನೆ | - ಕುಯ್ಯಮುಡಿ ಸುನೀಲ್ | 06 |
| ಹವ್ಯಾಸ | - ಆಜಡ್ಕ ರಾಣಿ ಬಾಲಕೃಷ್ಣ | 09 |
| ಜೋಡಿ ಶಾಸನಗಳು | - ಚಂದ್ರಶೇಖರ ಮಂಡೆಕೋಲು | 10 |
| ವನಿತಾ ಲೋಕ | - ಗೃಹ ಸಂಗಾತಿ | 11 |
| ರಾಷ್ಟ್ರಮಟ್ಟದ ಕ್ರೀಡಾಳು ಮದೆಯ ತ್ಯಾಗರಾಜೇಂದ್ರ | - ಬಿ. ಆರ್. ಜೋಯಪ್ಪ | 12 |
| ವಯಸ್ಕ ಮಹಿಳೆಯರಿಗೆ ಏಳಿಗೆಯ ಸಮಯ ! | - ವಿಮಲಾ ಪಾಟೀಲ್ | 12 |
| "ತಲೆ ಕೆಳಗಾದ ಕೋವಿ" | - ಬಾರಿಯಂಡ ಜೋಯಪ್ಪ | 13 |
| ಗೌಡರು ನಡೆದು ಬಂದ ದಾರಿ | - ಪ್ರೊ. ಪೂಜಾರಿ ಮೊಣ್ಣಪ್ಪ | 14 |
| ಸಂಗಾತಿ ಭವಿಷ್ಯ | - ಜ್ಯೋತಿಷ್ ಗಿರೀಶ್ ಕುಮಾರ್ | 18 |
| ಮೈಸೂರಿನಲ್ಲಿ ಹುತ್ತರಿ ಆಚರಣೆ | - ಮಂಞ್ಞಾಪುರ ಗಣಪತಿ | 18 |
| ಸೇಬು ಮೇಲೋ, ಸೀಬೆ ಮೇಲೋ? 21ನೇಯ ಶತಮಾನದ ವಿಟಮಿನ್ನುಗಳು ! | - ಜಿ. ಅನಂತನಾರಾಯಣ ಸ್ವಾಮಿ | 19 |
| ಕುಷ್ಠರೋಗ ಗುಣವಾಗಬಲ್ಲ ರೋಗ | - ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು | 19 |
| **ಅರೆಭಾಷಿಕ ವಿಭಾಗ** | | |
| ಜೀವನಕೆ ಬೆಳ್ಕ್ | - ಪಟ್ಟಡ ಪ್ರಭಾಕರ | 02 |
| ವಾಂಟೆಡ್ ಮಿಸ್ಟರ್ ರಾಜು - ಧಾರಾವಾಹಿ - 24 | - ಶಂಕರನ ಬಸಪ್ಪ | 07 |
| ಪ್ರೊಫೆಸರ್ ಲಾಜಿಕ್ | - ಎಡಿಕೇರಿ ಸುದರ್ಶನ್ | 11 |



| | |
|---|---|
| ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ | **ಕೊಡಗು ಸಂಗಾತಿ,** 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771** |
| ಮಡಿಕೇರಿಯಲ್ಲಿ ಸಂಗಾತಿ ಕಛೇರಿ | ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047** |
| ಚಿಹ್ನೆ, ಹಸೆಮಣೆ/ಶುಭಾಶಯ ಕಾರ್ಡ್ಸ್ ಕ್ಯಾಸೆಟ್/ಕೀ ಚೈನ್ ಲಭ್ಯ | ಚೆರಿಯಮನೆ ರಮೇಶ್, C/o ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ, ಫೋನ್ : 08272/29620 |
| ಕುಶಾಲ ನಗರ | ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370 |
| ಬೆಂಗಳೂರು ಮಹಾನಗರ | ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822 |
| ಬೆಂಗಳೂರು ಮಹಾನಗರ | ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19,ಫೋನ್ : 080/6500946 |

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

# ಸಂಪಾದಕೀಯ : ಪ್ರಾಥಮಿಕ ಪೂರ್ವ ಶಿಕ್ಷಣ

*ಈಗಿನ ಸರ್ಕಾರ ಪ್ರಾಥಮಿಕ ಪೂರ್ವ ಶಿಕ್ಷಣ ತರಗತಿಗಳನ್ನು ಸ್ಥಾಪಿಸುವ ನಿರ್ಧಾರ ಸ್ವಾಗತಾರ್ಹ. ಸರ್ಕಾರ ಈಗಾಗಲೇ ಪ್ರತಿ ಗ್ರಾಮಗಳಲ್ಲಿ ಬಾಲವಾಡಿಗಳನ್ನು ತೆರೆದು ಹಲವಾರು ವರ್ಷಗಳಾದರೂ ಅವುಗಳಿಗೆ ತರಬೇತಿ ಹೊಂದಿದ ಉಪಾಧ್ಯಾಯರನ್ನಾಗಲೀ ಪ್ರಾಥಮಿಕ ಪೂರ್ವ ಹಂತದ ಮಕ್ಕಳಿಗೆ ನೂತನ ರೀತಿಯ "ಕಿಂಡರ್ ಗಾರ್ಟನ್" ಶಾಲೆಗಳಂತೆ ಮಗುವಿನ ಮನಸ್ಸಿನ ವಿಕಾಸಕ್ಕೆ ಬೇಕಾದ ಸಲಕರಣೆಗಳಿರುವಂತೆ ಸಲಕರಣೆಗಳನ್ನು ಒದಗಿಸದೆ ನಾಲ್ಕು ಗೋಡೆಗಳ ಮಧ್ಯೆ ಹಸುಳೆಗಳನ್ನು ಕೂಡಿ ಹಾಕಿ ಮನೆಯಲ್ಲಿ ತಾಯಿ ಮನೆಯ ಹೊರಗೆ ಕೆಲಸಕ್ಕೆ ಹೋದ ಸಮಯದಲ್ಲಿ ಮಗುವನ್ನು ನೋಡಿಕೊಳ್ಳುವ ಒಂದು ಸ್ಥಳವೆಂಬ ಪರಿಸ್ಥಿತಿಯಲ್ಲಿದೆ.*

*ಆರ್ಥಿಕ-ವ್ಯವಸ್ಥೆ ಇರುವ ಪೋಷಕರು ತನ್ನ ಊರಿನಲ್ಲಿರುವ ಬಾಲವಾಡಿಗೆ ಕಳುಹಿಸದೆ, ಮನೆಯಿಂದ ದೂರವಿರುವ ಇಂಗ್ಲೀಷ್ ಮಾಧ್ಯಮದ ಕಿಂಡರ್ ಗಾರ್ಟನ್ ಶಾಲೆಗಳಿಗೆ ರಿಕ್ಷಾ ಮಾಡಿಯೇ ಅಥವಾ ತಾಯಿಯೇ ಮಗುವನ್ನು ಬಸ್ಸಿನಲ್ಲಿ ಕರೆದುಕೊಂಡು ಹೋಗಿ ಮತ್ತು ಕರೆದುಕೊಂಡು ಬರುವ ಪರಿಸ್ಥಿತಿ ಇದು, ತಾಯಿಯ ದಿನವಿಡೀ ಕೆಲಸ ಕಾರ್ಯಗಳು ಹಾಳಾಗುವ ಪರಿಸ್ಥಿತಿ ಇದೆ. ಇದನ್ನು ತಪ್ಪಿಸಲು ಗ್ರಾಮದ ಬಾಲವಾಡಿಗಳಲ್ಲಿ ಇಂತಹ ಸೌಲಭ್ಯವನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಯಲ್ಲಿಯೂ ಕಲಿಯುವಂತೆ ಮಾಡಿದರೆ ಗ್ರಾಮದ ಸ್ಥಿತಿವಂತ ಜನರ ಮಕ್ಕಳೊಡನೆ ಸ್ಥಿತಿವಂತರಲ್ಲದ ಜನರ ಮಕ್ಕಳೂ ಕಲಿಯುವಂತಹ ಪರಿಸ್ಥಿತಿ ಬರುತ್ತದೆ. ಆದ್ದರಿಂದ ಒಂದು ಗ್ರಾಮದಲ್ಲಿ ಮಕ್ಕಳಿಗೆ ಬಡವ ಬಲ್ಲಿದರೆಂಬ ವ್ಯತ್ಯಾಸ ಇಲ್ಲದೆ ಒಂದೇ ಸಮಾನವಾದ ಬೆಳವಣಿಗೆ ಮಕ್ಕಳಲ್ಲಿ ಉಂಟಾಗುವುದೆಂದು ಸಂಗಾತಿಯ ಅಭಿಲಾಷೆ.*

## ಪೀತ ಪತ್ರಿಕೆಗಳಿಗೆ ಕಡಿವಾಣ

ಪ್ರಜಾಪ್ರಭುತ್ವದಲ್ಲಿ ಪತ್ರಿಕೆ ಬಲಿಷ್ಠ ಹಾಗೂ ಅವಶ್ಯಕ ಅಂಗ. ಇದಕ್ಕೆ ಸಾರ್ವಜನಿಕ ಹೊಣೆಗಾರಿಕೆಯಿದೆ. ಸಾರ್ವಜನಿಕ ಹಿತಾಸಕ್ತಿ ಅದರ ಮೂಲ ಉದ್ದೇಶವಾಗಿರಬೇಕು. ಸ್ವಹಿತ ನುಸುಳಬಾರದು. ಒಂದು ವ್ಯಕ್ತಿಯ, ಗುಂಪಿನ ಹಿತ ಪತ್ರಿಕೋದ್ಯಮವಾದಾಗ ಅದು ಪೀತ ಪತ್ರಿಕೋದ್ಯಮಕ್ಕೆ ದಾರಿಯಾಗುತ್ತದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಈ ರೀತಿಯ ಪತ್ರಿಕೋದ್ಯಮ ಸಮಾಜದ ಸ್ವಾಸ್ಥ್ಯವನ್ನು ಕೆಡಿಸುತ್ತಿದೆ. ಇದರ ನಿಯಂತ್ರಣ ಅಗತ್ಯ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಪೀತ ಪತ್ರಿಕೋದ್ಯಮದ ಹಾವಳಿಯನ್ನು ನಿಯಂತ್ರಿಸಲು ರಾಜ್ಯಮಟ್ಟದಲ್ಲಿ ಪತ್ರಿಕಾ ಮಂಡಳಿ ರಚಿಸಲು ಸಣ್ಣ ಮತ್ತು ಮಾಧ್ಯಮ ಪತ್ರಿಕೆಗಳ ಅಭಿವೃದ್ಧಿ ಸಲಹಾ ಸಮಿತಿಯ ಶಿಫಾರಸು ಸಕಾಲಿಕ ಹಾಗೂ ಅವಶ್ಯವಾಗಿದೆ.

ಪಾಶ್ಚಾತ್ಯ ಜಗತ್ತಿನಿಂದ ಭಾರತಕ್ಕೆ ಕಾಲಿಟ್ಟ ಈ ಪೀತ ಪತ್ರಿಕೋದ್ಯಮ ಇಂದು ಇಡೀ ಪತ್ರಿಕೋದ್ಯಮವನ್ನು ಸಂಶಯಿಸುವಂತೆ ಮಾಡಿದೆ. ಪತ್ರಿಕಾ ಸ್ವಾತಂತ್ರ್ಯವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಬಹುತೇಕ ಸ್ಥಳೀಯ ಮಟ್ಟದಲ್ಲಿ ಸ್ಥಾಪಿತ ಹಿತಾಸಕ್ತಿಗಳಿಂದ, ಸಂಘಟನೆಗಳಿಂದ ಹುಟ್ಟಿಕೊಳ್ಳುವ ಇಂತಹ ಪತ್ರಿಕೆಗಳು ಸಣ್ಣ ಮತ್ತು ಮಧ್ಯಮ ಗಾತ್ರದ ಪತ್ರಿಕೆಗಳ ಭವಿಷ್ಯಕ್ಕೆ ಮಾರಕವಾಗುತ್ತಿದೆ. ಸಣ್ಣ ಮತ್ತು ಮಾಧ್ಯಮ ಗಾತ್ರದ ಪತ್ರಿಕೆಗಳು ಆ ಪ್ರದೇಶದ ಅಭಿವೃದ್ಧಿಯಲ್ಲಿ ತಮ್ಮದೇ ಆದ ಕಾಣಿಕೆಯನ್ನು ನೀಡುತ್ತಿವೆ. ಸ್ಥಳೀಯ ಸಮಸ್ಯೆಗಳಿಗೆ, ಘಟನೆಗಳಿಗೆ ಕನ್ನಡಿಯಾಗುತ್ತಿವೆ. ದೊಡ್ಡ ಪತ್ರಿಕೆಗಳೊಂದಿಗೆ ಈ ಪತ್ರಿಕೆಗಳು ಬದುಕಿ ಬಾಳಬೇಕು. ಇವುಗಳೆಡೆಯಲ್ಲಿ ಹುಟ್ಟಿಕೊಳ್ಳುವ ಪೀತ ಪತ್ರಿಕೆಗಳು ಈ ಉದ್ದೇಶವನ್ನು ಹಾಳುಗೆಡುತ್ತವೆ. ಇಂತಹ ಪತ್ರಿಕೋದ್ಯಮಕ್ಕೆ ಕಡಿವಾಣ ಹಾಕುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ಇವುಗಳ ನಿಯಂತ್ರಣಕ್ಕೆ ರಾಜ್ಯಮಟ್ಟದಲ್ಲಿ ಪತ್ರಿಕಾ ಮಂಡಳಿ ಸ್ಥಾಪಿಸುವ ಸಮಿತಿಯ ಶಿಫಾರಸು ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಪತ್ರಿಕಾರಂಗದ ಪಾವಿತ್ರ್ಯತೆಯನ್ನು, ವಿಶ್ವಾಸಾರ್ಹತೆಯನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಇದು ಅತ್ಯಾವಶ್ಯಕ ಕೂಡಾ.

(ಪೀತ ಪತ್ರಿಕೆಯೆಂದರೆ ಹೊಣೆಗಾರಿಕೆ ಘನತೆಗಳಿಲ್ಲದ ಯಾವತ್ತೂ ಕೋಲಾಹಲವನ್ನುಂಟು ಮಾಡುವುದೇ ಮುಖ್ಯ ಗುರಿಯಾದ ಪತ್ರಿಕೆ ಎಂದರ್ಥ.)

— *ಸಂಗಾತಿ.*

## ಜೀವನಕೆ ಬೆಳ್ಕ್

ಹುಟ್ಟಿದ ಮನ್‌ಸ ಬದ್ಕಿ ಬಾಳ್ದೆ. ಬಾಳ್ವೆಗೆ ಒಂದ್ ವಳ್ಳ ಗುರಿ ಬೇಕ್. ದಿನಂಪ್ರತಿ ಒಂದೊಂದ್ ವಳ್ಳೆ ಆದರ್ಶನ ಗೊತ್ತ್ ಮಾಡಿಕಣಕ್ಕು. ಆದರ್ಶತ್ತೇಳಿರೆ ದುಡ್ಡ್ ಸಂಪಾದನೆ, ಅಧಿಕಾರ ಸಾದ್ನೆ ಇಂತ ವಿಚಾರಗ ನಮಿಗೆ ಗ್ಯಾನ ಬಂದದೆ. ಇದ್ ವಳ್ಳೆದೆ ಆದ್ರೂ ಇದ್ಕಿಂತ ವಳ್ಳೆದ್ ಉಟ್ಟು. ವಳ್ಳೆ ಗುಣ, ವಳ್ಳೆ ನೀತಿ, ವಳ್ಳೆ ನಡ್ತೆ ತನ್ನದಾಗಿ ಮಾಡಿಕಂಬದು ವಳ್ಳೆದ್. ಹಣವಂತ, ಯಾಗೋಳು ಸುಖ ಬೋಗಲಿ ಇರವು, ವಳ್ಳೆ ಹೆಸ್ರ್ ತಗಂಡ್ತಿಲ್ಲೆ. ಮ್ಯಾಲೆಗೆ ಏರ್‌ತ್ತಿಲ್ಲೆ. ಮನ್‌ಸನಾಗಿ ಹುಟ್ಟಿ ವಳ್ಳೆತನಲಿ ದೇವರ ಅಂತಸ್ತ್ ಪಡೆಯಕ್ಕ್‌ತ ಹೇಳ್ದವು ಬುದ್ಧ, ಯೇಸ್, ಮಹಮ್ಮದ್, ವಿವೇಕಾನಂದ, ಗಾಂಧಿ ಇಂತವು ಹೇಳ್ಯೊಳೊ. ನಮಿಗೆ ಪ್ರತಿದಿನ ಹೊಸದಿನಗ ಬರೋಕು. ಹೊಸ ದಿನತ್ತೇಳಿರೆ. ವಳ್ಳೆ ನೀತಿ, ನಡ್ತೆ ಬೆಳೆಯಕು. ಸುಖ ದುಃಖ ಇದ್ದೆ ಇದ್ದದೆ. ಆದ್ರೂ ತಪ್ಪಿ ಹಾಳ್ ದಾರಿ ಮೆಟ್ಲ್ ಹತ್ತಿಕಾಗದ್. ಪ್ರತಿ ದಿನ ನಾವ್ ತಪ್ಪ್ ಮಾಡದಂಗೆ ಬಾಳ್‌ನ ವಳ್ಳೆ ರೀತ್ಲಿ ಕಳಿವಂಗೆ ಶಕ್ತಿ ತರ್‌ಲಿ.

ಕೊಡವ ಭಾಷೆಯಲ್ಲಿ : ಚೇಂದ್ರಿಮಾಡ ಮುತ್ತಪ್ಪ.
ಅರೆಭಾಷೆಗೆ : ಪಟ್ಟಡ ಪ್ರಭಾಕರ್.

ಭಾರತದಲ್ಲಿ ಹರಿಯುವ ಬ್ರಹ್ಮಪುತ್ರ ನದಿಯ ಉದ್ದ **2900** ಕಿ. ಮೀ.

# ವಿಶ್ವ ಚೆಸ್ ಸಾಮ್ರಾಜ್ಯದ ವಿಶ್ವ ಚಾಂಪಿಯನ್ ಭಾರತದ ವಿಶ್ವನಾಥನ್ ಆನಂದ್ - *ಸಂಗಾತಿ*

ಭಾರತದಲ್ಲಿ ಚೆಸ್ ಕ್ರಾಂತಿಯ ಏಕೈಕ ಹರಿಕಾರ ವಿಶ್ವನಾಥನ್ ಆನಂದ್ ಇಂದು ವಿಶ್ವ ಚೆಸ್ ಸಾಮ್ರಾಜ್ಯದ ನೂತನ ರಾಜನಾಗಿದ್ದಾರೆ. ಟೆಹರಾನ್‌ನಲ್ಲಿ ನಡೆಯುತ್ತಿರುವ ಫಿಡೆ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಆರು ಪಂದ್ಯಗಳ ಫೈನಲ್‌ನ ನಾಲ್ಕನೇ ಪಂದ್ಯದಲ್ಲಿ ಸವಾಲಿಗ ಸ್ಪೇನ್‌ನ ಅಲೆಕ್ಸ್ ಶಿರೋವ್ ವಿರುದ್ಧ ಜಯಭೇರಿ ಬಾರಿಸಿ ಆನಂದ್ ಈ ಪಟ್ಟಕ್ಕೇರಿದರು.

ಎರಡು ಪಂದ್ಯಗಳು ಬಾಕಿ ಇರುವಂತೆ 64 ಕೋಣೆಗಳ ನಡುವಿನ ಬುದ್ಧಿಮತ್ತೆಯ ಈ ಆಟದಲ್ಲಿ ಶಿರೋವ್‌ರನ್ನು 3.5-0.5 ಅಂಕಗಳಿಂದ ಸುಲಭವಾಗಿ ವಿಶಿ ಸೋಲಿಸಿದರು. 1998ರಲ್ಲಿ ಫೈನಲ್ ತಲುಪಿದ್ದ ಆನಂದ್ ಅಂದು ರಷ್ಯಾದ ಅನಾ ತೋಲಿ ಕಾರ್ಪೋವ್‌ಗೆ ಮಣಿದಿದ್ದರು. ಆದರೆ ಈ ಬಾರಿ ಯಾವುದೇ ತಪ್ಪು ಮಾಡದೇ ಸಿಕ್ಕಿದ ಅವಕಾಶವನ್ನು ಸದುಪಯೋಗ ಪಡಿಸಿಕೊಂಡು ಅರ್ಹವಾಗಿ ಚಾಂಪಿಯನ್ ಪಟ್ಟ ಸಂಪಾದಿಸಿದರು.

ಚೆಸ್ ವಲಯದಲ್ಲಿ ವಿಶ್ವನಾಥನ್‌ಗೆ ವಿಶೇಷವಾದ ಗೌರವವಿದೆ. 'ವಿಶಿ ಮದ್ರಾಸಿನ ಹುಲಿ' ಎಂಬ ಅಡ್ಡ ಹೆಸರು ಹೊತ್ತ ಆನಂದ್ ತನ್ನ ಆರನೆ ವಯಸ್ಸಿನಲ್ಲಿಯೇ ತಾಯಿಯಿಂದ ಈ ಆಟವನ್ನು ಕಲಿತುಕೊಂಡರು. ಹೊಸದಿಲ್ಲಿಯಲ್ಲಿ ಕಳೆದ ವಾರ ನಡೆದಿದ್ದ ಸೆಮಿ ಫೈನಲ್ ಸೇರಿದಂತೆ ಐದು ಸುತ್ತುಗಳ ಪಂದ್ಯದಲ್ಲಿ ಅಜೇಯ ದಾಖಲೆಯನ್ನು ಹೊಂದಿದ್ದ ಆನಂದ್ ಈ ಪ್ರಶಸ್ತಿ ಗೆದ್ದುಕೊಂಡ ಏಷ್ಯಾದ ಮೊದಲ ಆಟಗಾರರಾಗಿದ್ದಾರೆ.

ಆನಂದ್ ತನ್ನ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆಯಿಂದ ಈ ಪಟ್ಟಕ್ಕೇರಲು ಸಾಧ್ಯವಾಗಿದೆ. 1997 ಮತ್ತು 1998ರಲ್ಲಿ ಸತತವಾಗಿ ಎರಡು ವರ್ಷ ಚೆಸ್ ಆಸ್ಕರ್ ಪ್ರಶಸ್ತಿ ಗೆದ್ದುಕೊಂಡ ಏಕೈಕ ಆಟಗಾರ ಈ ಆನಂದ್. 55 ದೇಶಗಳ ಪತ್ರಕರ್ತರು ಮತ ಚಲಾಯಿಸಿ ಆಸ್ಕರ್ ಪ್ರಶಸ್ತಿಗೆ ಆಟಗಾರರನ್ನು ಆಯ್ಕೆ ಮಾಡುತ್ತಾರೆ. ಅಮೆರಿಕದ ಬಾಬಿ ಫಿಷರ್ ಅವರನ್ನು ಹೊರತು ಪಡಿಸಿ ರಷ್ಯಾಕ್ಕೆ ಸೇರಿರದ ಆಟಗಾರನೋರ್ವ ಈ ಪ್ರಶಸ್ತಿ ಗೆದ್ದುಕೊಂಡಿರುವುದು ಆನಂದ್ ಮಾತ್ರ.

ತನ್ನ 16 ರ ಹರೆಯದಲ್ಲಿಯೇ ರಾಷ್ಟ್ರೀಯ ಜೂನಿಯರ್ ಚಾಂಪಿಯನ್ ಪ್ರಶಸ್ತಿ ಗೆದ್ದುಕೊಂಡ ಆನಂದ್ ಈ ಸಾಧನೆಗೈದ ಅತ್ಯಂತ ಕಿರಿಯ ಆಟಗಾರ ಎನಿಸಿಕೊಂಡರು. 1987ರಲ್ಲಿ ಈ ಸಾಧನೆಗೈದಿದ್ದರು. ವಿಶ್ವ ಜೂನಿಯರ್ ಚಾಂಪಿಯನ್ ಪ್ರಶಸ್ತಿ ಗೆದ್ದುಕೊಂಡ ಏಷ್ಯಾದ ಮೊದಲ ಆಟಗಾರ ಮತ್ತು ಗ್ರಾಂಡ್ ಮಾಸ್ಟರ್ ಪದವಿ ಪಡೆದುಕೊಂಡ ಭಾರತದ ಮೊದಲ ಆಟಗಾರನೆಂಬ ಕೀರ್ತಿ ಕೂಡ ನಮ್ಮ ಆನಂದ್ ಹೆಸರಿನಲ್ಲಿದೆ.

1991 ರಲ್ಲಿ ಇಟಲಿಯಲ್ಲಿ ನಡೆದ ರೆಗ್ಗಿಯೊ ಎಮಿಲಿಯ ಟೂರ್ನಿಯಲ್ಲಿ ವಿಶ್ವದ ಚೆಸ್ ದಂತಕಥೆಗಳಾದ ಗ್ಯಾರಿ ಕಾಸ್ಪರೋವ್ ಮತ್ತು ಕಾರ್ಪೋವ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡ ಹಿರಿಮೆ ಆನಂದ್ ಅವರದು. 1995ರಲ್ಲಿ ನ್ಯೂಯಾರ್ಕ್‌ನ ವಿಶ್ವ ಟ್ರೇಡ್ ಸೆಂಟರ್‌ನಲ್ಲಿ ನಡೆದ ಪಿಸಿಎ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕಾಸ್ಪರೋವ್ ವಿರುದ್ಧ ಸೋಲು ಅನುಭವಿಸಿದರು. ಆದರೂ ಕಾಸ್ಪರೋವ್ ಅವರಿಗೆ ಕಠಿಣ ಕ್ಷಣಗಳು ಎದುರಾಗುವಂತೆ ಆನಂದ್ ಮಾಡಿದ್ದರು.

ಸ್ವಿಜರ್‌ಲೆಂಡ್‌ನ ಲೌಸಾನೆಯಲ್ಲಿ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಸ್ಟಾರ್ ಆಟಗಾರ ಕಾರ್ಪೋವ್ ವಿರುದ್ಧ ಸೊಗಸಾದ ಆಟವನ್ನು ತೋರಿದ್ದರೂ, ಆನಂದ್ ಸೋತರು. ಕಾರ್ಪೋವ್ ವಿಶ್ವ ಚಾಂಪಿಯನ್ ಪಟ್ಟವನ್ನು ಉಳಿಸಿಕೊಂಡರು.

ಆನಂದ್ ಅವರು 1998ರಲ್ಲಿ ಹಲವಾರು ಏರುಪೇರಿನ ಫಲಿತಾಂಶಕ್ಕೆ ಕಾರಣರಾದರು ಮತ್ತು ಯಶಸ್ಸು ಅವರ ಬೆನ್ನ ಹಿಂದಿತ್ತು. 1999ರಲ್ಲಿ ಆನಂದ್‌ಗೆ ಜಯ ಕಠಿಣವಾಗಿತ್ತು. ಸೋಲುಗಳು ಎದುರಾದವು. ಆದರೆ ಪ್ರಸ್ತುತ ವರ್ಷ ಆನಂದ್ ಅವರ ಅದೃಷ್ಟದ ವರ್ಷವಾಗಿದೆ. ಯಶಸ್ಸಿನ ಮೇಲೆ ಯಶಸ್ಸು ಸಾಧಿಸಿ ವಿಶ್ವ ಚಾಂಪಿಯನ್ ಪಟ್ಟಕ್ಕೇರಿದ್ದಾರೆ.

ಚೀನಾದ ಶಿಯಾಂಗ್‌ನಲ್ಲಿ ನಡೆದ ವಿಶ್ವ ಕಪ್ ಚಾಂಪಿಯನ್‌ಷಿಪ್‌ನಲ್ಲಿ ವಿಶ್ವದ ಖ್ಯಾತ ಆಟಗಾರರನ್ನು ಹಿಮ್ಮೆಟ್ಟಿಸಿ ಪ್ರಶಸ್ತಿ ಗೆದ್ದಿರುವುದು ಆನಂದ್ ಅವರ ಸಾಧನೆಯ ಮೈಲುಗಲ್ಲುಗಳಲ್ಲಿ ಒಂದಾಗಿದೆ. ಪ್ರತಿಷ್ಠಿತ ಅರ್ಜುನ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ, ರಾಜೀವ್ ಗಾಂಧಿ ಖೇಲ್ ಪ್ರಶಸ್ತಿ, ಸೋವಿಯತ್ ಲ್ಯಾಂಡ್ ನೆಹರೂ ಪ್ರಶಸ್ತಿ ಸೇರಿದಂತೆ ಹಲವಾರು ಸುಪ್ರಸಿದ್ಧವಾದ ಪ್ರಶಸ್ತಿಗಳನ್ನು ತನ್ನ ಸಾಧನೆಗಾಗಿ ಆನಂದ್ ಪಡೆದುಕೊಂಡಿದ್ದಾರೆ.

### ಗೆದ್ದಿರುವ ಚೆಸ್ ಟೂರ್ನಿಗಳು

ಆನಂದ್ ಹಲವಾರು ಚೆಸ್ ಟೂರ್ನಿಗಳನ್ನು ಗೆದ್ದು ಕೊಂಡಿದ್ದಾರೆ. ಅವುಗಳಲ್ಲಿ ಕೆಲವು ಇಂತಿವೆ. 1998ರಲ್ಲಿ ಲಿನರಾಸ್ ಸೂಪರ್ ಟೂರ್ನಿ, 1994 ಮತ್ತು 1997ರಲ್ಲಿ ಮೆಲೋಡಿ ಅಂಬೇರ್ ಟೂರ್ನಿ, 1997ರಲ್ಲಿ ಕ್ರೆಡಿಟ್ ಸುಸ್ಸಿ ಮಾಸ್ಟರ್ಸ್ ಟೂರ್ನಿ, 1997ರಲ್ಲಿ ಡಾಸ್ ಹರ್ಮನ್ಸ್, 1987, 1998ರಲ್ಲಿ ವಿಜಿಕ್ ಆನ್ ಜೀ ಟೂರ್ನಿ, 1996 ಮತ್ತು 2000 ದಲ್ಲಿ ಡಾರ್ಟ್‌ಮಂಡ್ ಚೆಸ್ ಟೂರ್ನಿ ಮತ್ತು 1998ರಲ್ಲಿ ಟಿಲ್‌ಬರ್ಗ್ ಚೆಸ್ ಟೂರ್ನಿಗಳನ್ನು ಆನಂದ್ ಗೆದ್ದುಕೊಂಡಿದ್ದಾರೆ. 1998ರಲ್ಲಿ ಭಾಗವಹಿಸಿದ್ದ ಎಂಟು ಟೂರ್ನಿಗಳಲ್ಲಿ ಆರನ್ನು ಗೆದ್ದುಕೊಂಡ ಹಿರಿಮೆ ಕೂಡ ಆನಂದ್‌ಗಿದೆ.

ವೇಗದ ಚೆಸ್‌ನಲ್ಲಿ ಆನಂದ್ ಅವರದು ಎತ್ತಿದ ಕೈ. 1998 ಮತ್ತು 2000ದಲ್ಲಿ ಫ್ರಾಂಕ್‌ಫರ್ಟ್ ರ್‍ಯಾಪಿಡ್ ಚೆಸ್ ಚಾಂಪಿಯನ್‌ಷಿಪ್ ಗೆದ್ದುಕೊಂಡಿದ್ದ ಆನಂದ್ 1998 ಮತ್ತು 1999ರಲ್ಲಿ ಫ್ರಾಂಕ್‌ಫರ್ಟ್‌ನಲ್ಲಿ ನಡೆದಿದ್ದ ಚೆಸ್ ಪ್ರೋಗ್ರಾಂನಲ್ಲಿ ಕಂಪ್ಯೂಟರ್ ವಿರುದ್ಧ ಜಯ ಸಾಧಿಸಿದ್ದರು.

ಪ್ರತಿಷ್ಠಿತ ಅಡ್ವಾನ್ಸ್‌ಡ್ ಚೆಸ್ ಟೂರ್ನಿಯನ್ನು ಆನಂದ್ 1999 ಮತ್ತು 2000ನೇ ಸಾಲಿನಲ್ಲಿ ಗೆದ್ದಿದ್ದಾರೆ. ಈ ಪಂದ್ಯಗಳು

12ನೇ ಪುಟಕ್ಕೆ

# ವಿಟಮಿನ್‌ಗಳ ಕೊರತೆ

ನಾವು ಸೇವಿಸುವ ಆಹಾರವು ವಿಟಮಿನ್‌ಯುಕ್ತವಾಗಿರಬೇಕು. ದಿನನಿತ್ಯದ ಆಹಾರದಲ್ಲಿ ವಿಟಮಿನ್‌ಗಳು ಇರುತ್ತವೆ. ಆದರೆ ಎಲ್ಲ ವಿಟಮಿನ್‌ಗಳು ಒಂದೇ ಆಹಾರದಲ್ಲಿ ದೊರೆಯುವುದಿಲ್ಲ. ದೀರ್ಘಕಾಲ ಆಹಾರದ ಶೇಖರಣೆ ಹಾಗೂ ಆಹಾರವನ್ನುಸರಿಯಾದ ರೀತಿಯಲ್ಲಿ ತಯಾರಿಸದಿರುವುದು, ಸರಿಯಾದ ರೀತಿಯಲ್ಲಿ ಸೇವಿಸದಿರುವುದು ಇವುಗಳಿಂದ ಕೆಲವು ವಿಟಮಿನ್‌ಗಳು ನಾಶವಾಗುತ್ತವೆ. ವಿಟಮಿನ್ ಕೊರತೆಯಿಂದ ನಾನಾ ರೋಗಗಳು ಬರುತ್ತವೆ.

1920ರಲ್ಲಿಲಂಡನ್‌ನ ಸರ್ ಜಾಕ್‌ಡ್ರಮಂಡ್ ವಿಟಮಿನ್‌ಗಳನ್ನು ಎ, ಬಿ, ಸಿ, ಡಿ ಗುಂಪುಗಳಾಗಿ ವಿಂಗಡಿಸಿದನು. ಎ, ಡಿ,ಇ, ಕೆ ವಿಟಮಿನ್‌ಗಳು ಕೊಬ್ಬಿನಲ್ಲೂ, ಬಿ, ಸಿ, ವಿಟಮಿನ್‌ಗಳು ನೀರಿನಲ್ಲೂ ಕರಗಬಲ್ಲವು.

**ವಿಟಮಿನ್ 'ಎ'**

ಕಣ್ಣಿನ ದೃಷ್ಟಿಗೆ ಸತ್ವಾಂಶ 'ಎ' ಅಗತ್ಯವಾಗಿ ಬೇಕು. ಇದರ ಕೊರತೆಯಿಂದ ರಾತ್ರಿ ಕುರುಡುತನ ಕಾಣಿಸಿಕೊಂಡು ನಂತರ ಪೂರ್ತಿ ಕುರುಡುತನ ಬರಬಹುದು. ಹಸಿರು ಸೊಪ್ಪು, ತರಕಾರಿ, ಕ್ಯಾರೆಟ್, ಪಪಾಯಿ ಇತ್ಯಾದಿ ಕೆಂಪು ತರಕಾರಿಗಳಲ್ಲಿ, ಹಾಲು, ಮೊಟ್ಟೆ, ಮೀನು ಇವುಗಳಲ್ಲಿ 'ಎ' ಸತ್ವಾಂಶ ಹೆಚ್ಚಾಗಿರುತ್ತದೆ. ಗರ್ಭಿಣಿ ಸ್ತ್ರೀ ಯಥೇಚ್ಛವಾಗಿ ಹಸಿರು ತರಕಾರಿ ತಿನ್ನಬೇಕು. ಇದರಿಂದ ಜನಿಸುವ ಮಗುವಿನಲ್ಲಿ ಸಾಕಷ್ಟು ಸತ್ವಾಂಶ 'ಎ' ಇರುತ್ತದೆ. ಹುಟ್ಟಿದ ಕೂಡಲೇ ಬರುವ ಎದೆಹಾಲಿನಲ್ಲಿ (ಕೊಲೋಸ್ಟ್ರಂ) ಸಹ ವಿಟಮಿನ್ 'ಎ' ಹೆಚ್ಚಿದ್ದು, ಇದನ್ನು ತಪ್ಪದೇ ಮಗುವಿಗೆ ಉಣಿಸಬೇಕು. ಮಗುವಿಗೆ ನಾಲ್ಕು ತಿಂಗಳಾದೊಡನೆ ಎದೆಹಾಲಿನ ಜೊತೆಗೆ ಇತರ ಆಹಾರಗಳನ್ನು ಕೊಡಲು ಪ್ರಾರಂಭಿಸಬೇಕು.

**ವಿಟಮಿನ್ 'ಬಿ'**

ವಿಟಮಿನ್ 'ಬಿ' ಕೊರತೆಯಿಂದಾಗಿ ನಾಲಿಗೆ ಕೆಂಪಾಗುವುದು, ಖಾರ ತಿಂದರೆ ಉರಿಯುವುದು, ತುಟಿಗಳು ಒಡೆಯುವುದು, ಬಾಯಲ್ಲಿ ಹುಣ್ಣಾಗುವುದು, ಚರ್ಮಕ್ಕೆ ಸಂಬಂಧಿಸಿದ ಕೆಲವು ತೊಂದರೆಗಳು ಇತ್ಯಾದಿ ಕಾಣಿಸಿಕೊಳ್ಳಬಹುದು. ಕೆಲವೊಮ್ಮೆ ನರಗಳ ಬಲಹೀನತೆ, ಕಾಲು ಜೋವು ಹಿಡಿಯುವುದು, ಹಸಿವೆ ಕಮ್ಮಿಯಾಗುವುದು ಕಾಣಸಿಕೊಳ್ಳುತ್ತದೆ. ಧವಸಧಾನ್ಯಗಳಲ್ಲಿ ಬೇಳೆ, ಕಾಳು, ಹಸಿರು ತರಕಾರಿ, ಮಾಂಸ, ಯಕೃತ್, ಮೊಟ್ಟೆ, ಯೀಸ್ಟ್, ಬೀನ್ಸ್, ಹಾಲು, ಅಣಬೆಗಳಲ್ಲಿ ಸತ್ವಾಂಶ 'ಬಿ'ಹೆಚ್ಚಿಗೆ ಇರುತ್ತದೆ.

**ಸತ್ವಾಂಶ 'ಸಿ'**

ಡಾ. ಆಲ್ಬರ್ಟ್ ಗ್ಯೊರ್ಗಿ 1928ರಲ್ಲಿ ಇದನ್ನು ರಾಸಾಯನಿಕವಾಗಿ ಪ್ರತ್ಯೇಕಿಸಿದರು. ಇದರ ಕೊರತೆಯಿಂದ 'ಸ್ಕರ್ವಿ' (scurvy) ಎಂಬ ರೋಗ ಬರುತ್ತದೆ. ಹಲ್ಲಿನ ಸಂದುಗಳಲ್ಲಿ ರಕ್ತ ಬರುವುದು,ಕಾಲುಗಳ ಕೀಲುಗಳಲ್ಲಿ ನೋವು, ಊತ, ರಕ್ತಸ್ರಾವ - ಈ ರೋಗದ ಲಕ್ಷಣಗಳು. ಶಾಖದಿಂದ ವಿಟಮಿನ್ 'ಸಿ' ನಾಶವಾಗುವುದು. ನಿಂಬೆ, ಕಿತ್ತಳೆ, ನೆಲ್ಲಿಕಾಯಿ, ಪೇರಳೆ, ಚಕೋತ ಹಣ್ಣುಗಳಲ್ಲಿ ಹಸಿರು ಸೊಪ್ಪು, ತರಕಾರಿ, ಟೊಮಾಟೋಗಳಲ್ಲಿ ಸತ್ವಾಂಶ 'ಸಿ' ಜಾಸ್ತಿ ಇರುತ್ತದೆ.

**ವಿಟಮಿನ್ 'ಡಿ'**

ಇದರ ಆವಿಷ್ಕಾರ 1922ರಲ್ಲಿ ಆಯ್ತು. ವಿಟಮಿನ್ 'ಡಿ' ದೇಹದಲ್ಲಿ ಶೇಖರವಾಗಿರುವುದಿಲ್ಲ. ಆದ್ದರಿಂದ ದೇಹಕ್ಕೆ ಅಗತ್ಯವಾದಷ್ಟು 'ಡಿ' ಅಂಶವುಳ್ಳ ಆಹಾರ ಪದಾರ್ಥಗಳನ್ನು ಪ್ರತಿನಿತ್ಯ ಸೇವಿಸಬೇಕು. 'ಡಿ' ಸತ್ವಾಂಶ ಮತ್ತು 'ಕ್ಯಾಲ್ಸಿಯಂ' ಮೂಳೆಗಳ ಬೆಳವಣಿಗೆಗೆ ಅತಿಮುಖ್ಯವಾಗಿ ಬೇಕಾದವು. ಇವುಗಳ ಕೊರತೆಯಿಂದ ಮೆದುಮೂಳೆ ಅಥವಾ ರಿಕೆಟ್ಸ್ (Rickets) ರೋಗ ಬರುವುದು. ಮೂಳೆಗಳು ಟೊಳ್ಳಾಗಿ ಮಂಡಿ ಬಗ್ಗುತ್ತದೆ. ಮೂಳೆಗಳ ನ್ಯೂನತೆ ಬಂದು ಎದೆ ಕೃಶವಾಗುತ್ತದೆ. ಮಗುವು ನಿಲ್ಲಲು, ಒಡಲು ನಿಧಾನವಾಗಿ, ಬೆಳವಣಿಗೆ ತುಂಬಾ ಹಿಂದುಳಿಯುತ್ತದೆ.

ಕಾಡ್‌ಲಿವರ್ ಎಣ್ಣೆ, ಮೊಟ್ಟೆ, ಮೀನು, ಹಾಲು, ಯಕೃತ್‌ಗಳಲ್ಲಿ ವಿಟಮಿನ್ 'ಡಿ' ಹೆಚ್ಚಾಗಿ ಇರುತ್ತದೆ. ಸಂಜೆಯ ಸಮಯದ ಹಾಗೂ ಬೆಳಗಿನ ಸೂರ್ಯನ ಕಿರಣದಿಂದ (ಎಳೆ ಬಿಸಿಲು) ವಿಟಮಿನ್ 'ಡಿ' ದೇಹದಲ್ಲಿ ಉತ್ಪತ್ತಿಯಾಗುತ್ತದೆ. ಆದ್ದರಿಂದ ಗಾಳಿ ಬೆಳಕು ಇಲ್ಲದೆ ಕತ್ತಲೆ ಮನೆಯಲ್ಲಿ ವಾಸಿಸುವವರಲ್ಲಿ ವಿಟಮಿನ್ 'ಡಿ' ಕೊರತೆ ಹೆಚ್ಚಾಗಿ ಕಂಡುಬರುತ್ತದೆ.

**ವಿಟಮಿನ್ 'ಕೆ'**

1955ರಲ್ಲಿ ಡ್ಯಾಮ್ ಎಂಬ ವಿಜ್ಞಾನಿ ಇಂತಹ ಒಂದು ವಿಟಮಿನ್ ಇರಬಹುದೆಂದು ಶಂಕಿಸಿದನು. ರಕ್ತ ಹೆಪ್ಪುಗಟ್ಟುವಿಕೆಯಲ್ಲಿ ವಿಟಮಿನ್ 'ಕೆ' ಮುಖ್ಯವಾದ ಕಾರ್ಯ ವಹಿಸುತ್ತದೆ. ಆದ್ದರಿಂದ ಇದರ ಕೊರತೆಯಿಂದಾಗಿ ರಕ್ತಸ್ರಾವ ಕಾಣಿಸಿಕೊಳ್ಳಬಹುದು. ಸಸ್ಯಜನ್ಯ ಆಹಾರ ವಸ್ತುಗಳಲ್ಲಿ ಇದು ಸಾಕಷ್ಟು ಪ್ರಮಾಣದಲ್ಲಿ ಇರುತ್ತದೆ. ಹಸಿರು ಸೊಪ್ಪುಗಳು, ಟೊಮಾಟೋ, ಮೊಟ್ಟೆಯ ಹಳದಿ ಇತ್ಯಾದಿಗಳಲ್ಲಿ ವಿಟಮಿನ್ 'ಕೆ' ಜಾಸ್ತಿ ಇರುತ್ತದೆ.

**ಡಾ. ಪ್ರವೀಣ ಯನ್. ಎಸ್. M.D., D.N.B., ಕೇರಳ**

---

## ಸಕಲರಿಗೂ ಸಮಾನವಾದುದು

"ತಾನಾಗಿ ಬರುವುದು ಬಾಲ್ಯ,ತಾರುಣ್ಯ, ಮುಪ್ಪು,
ನಮ್ಮ ಸಂಗಡ ಬರುವುದು ಪಾಪ ಪುಣ್ಯ,
ತಾಳಲಾರದು ಆಸೆ, ದುಃಖ,
ಸಹಿಸಲಾರದುದು ಹಸಿವು, ದಾಹ,
ನಾಶವನ್ನು ತರುವುದು ಸಿಟ್ಟು, ಅಸೂಯೇ,
ಸಕಲರಿಗೂ ಸಮನಾದುದು "ಹುಟ್ಟು - ಸಾವು"

ಸಂಗ್ರಹ : ಕಟ್ರತನ ಸುಧಿ ಉಲ್ಲಾಸ ಬೆಂಗಳೂರು.

---

ಗಂಗಾ ನದಿಯ ಉದ್ದ 2525 ಕಿ. ಮೀ.

# ಕನ್ನಡ ವ್ಯಾಕರಣದಲ್ಲಿ ಅರೆಭಾಷೆಯ ಸೊಗಡು

ಪಂಚದ್ರಾವಿಡ ಭಾಷೆಗಳಲ್ಲಿ ಅತ್ಯಂತ ಮಹತ್ವಪೂರ್ಣ ಭಾಷೆ ಕನ್ನಡ. ಪ್ರಸಿದ್ಧವಾದ ದಕ್ಷಿಣ ಭಾರತದ ಸಂಗೀತವನ್ನು ಕರ್ನಾಟಕ ಸಂಗೀತವೆಂದು ಕರೆಯಲ್ಪಡುವುದೇ ಇದಕ್ಕೆ ಸಾಕ್ಷಿ. ಕನ್ನಡ,ತಮಿಳು, ಮಲಯಾಳ, ತುಳು ಮತ್ತು ತೆಲುಗು ಭಾಷೆಗಳು ಒಂದೇ ತಾಯಿಯ ಐದು ಮಕ್ಕಳಿದ್ದಂತೆ.

ಕನ್ನಡ ಭಾಷೆಗೆ ಸುಮಾರು ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಇತಿಹಾಸವಿದೆ. ಪ್ರಾಚೀನಕಾಲದ ಕನ್ನಡವನ್ನು ಈಗ ನಾವು ಹಳೆಗನ್ನಡ ಎಂದು ಕರೆಯುತ್ತೇವೆ. ಈ ಬಗ್ಗೆ ತಿಳಿಸಲು ಅನೇಕ ಪ್ರಸಿದ್ಧ ವಿದ್ವಾಂಸರು ವ್ಯಾಕರಣ ಗ್ರಂಥಗಳನ್ನು ರಚಿಸಿದ್ದಾರೆ. ಈಗ್ಗೆ ವಿದ್ವಾಂಸರು ಸುಮಾರು ಆರು ಸಾವಿರ ವರ್ಷದ ಚರಿತ್ರೆಯಿದೆಯೆಂದು ಸಾರಿದ್ದಾರೆ.

ಕ್ರಿ. ಶ. ಸುಮಾರು 1145 ರಲ್ಲಿದ್ದ ನಾಗವರ್ಮನೆಂಬವನು "ಕರ್ನಾಟಕ ಭಾಷಾಭೂಷಣ" ಮತ್ತು "ಕಾವ್ಯಾವಲೋಕನ ಗಳೆಂದು ಎರಡು ಗ್ರಂಥಗಳನ್ನು ರಚಿಸಿದನು. ಕಾವ್ಯಾಲೋಕನದ ಒಂದನೆಯ ಭಾಗವಾದ ಸಬ್ಧಸ್ಮೃತಿಯು ವ್ಯಾಕರಣ ಶಾಸ್ತ್ರಕ್ಕೆ ಸಂಬಂಧಿಸಿದ್ದು, ಸಂಧಿ, ನಾಮ, ಸಮಾಸ, ತದ್ಧಿತ, ಅಖ್ಯಾತಗಳೆಂದು ಐದು ಭಾಗಗಳಿದ್ದು, ಹಳೆಗನ್ನಡ ವ್ಯಾಕರಣ ವಿಷಯವನ್ನು ಬಹಳ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. "ಕರ್ನಾಟಕ ಭಾಷಾಭೂಷಣ" ಎಂಬ ಗ್ರಂಥವು ಸಂಸ್ಕೃತದಲ್ಲಿ ರಚಿತವಾಗಿದೆ. ಸಂಸ್ಕೃತ ಬಲ್ಲವರು ಈ ಪುಸ್ತಕದಿಂದ ಕನ್ನಡ ವ್ಯಾಕರಣ ತಿಳಿಯಬಹುದು. ಇದು ಕನ್ನಡಕ್ಕೂ ಸಂಸ್ಕೃತದಷ್ಟೆ ಮಹತ್ವವಿರುವುದನ್ನು ತೋರಿಸಿ ಕೊಟ್ಟಿದೆ.

ಕ್ರಿ. ಶ. ಸುಮಾರು 1260ರಲ್ಲಿದ್ದ ಕೇಶಿರಾಜನು, ಶಬ್ಧಮಣಿ ದರ್ಪಣ ಎಂಬ ಹೆಸರಿನ ಕನ್ನಡ ವ್ಯಾಕರಣ ಗ್ರಂಥ ರಚಿಸಿದನು. ಇದು ಸಮಗ್ರ ಹಳೆಗನ್ನಡ ಭಾಷೆಯ ಸ್ವರೂಪವನ್ನು ತಿಳಿಯಬೇಕೆನ್ನುವವರಿಗೆ ಉತ್ತಮ ಕೈಪಿಡಿಯಾಗಬಹುದು. ಇವನ ತಂದೆ ಮಲ್ಲಿಕಾರ್ಜುನ,ಸೋದರ ಮಾವ ಜನ್ನ ಇವರು ದೊಡ್ಡ ಕವಿಗಳು. ಇವನ ತಾತ (ತಾಯಿಯ ತಂದೆ) "ಕವಿಸುಮನೋಬಾಣ" ಎಂಬವನು ಮಹಾ ವಿದ್ವಾಂಸನಾಗಿದ್ದನು. ಇಂತಹ ಪರಂಪರೆಯಲ್ಲಿ ಜನಿಸಿದ ಕೇಶಿರಾಜನು ಮಹಾವಿದ್ವಾಂಸನೇ ಆಗಿದ್ದನು. ಇವನು ರಚಿಸಿದ "ಶಬ್ಧಮಣಿ ದರ್ಪಣ"ದಲ್ಲಿ ಎಂಟು ಅಧ್ಯಾಯಗಳಿದ್ದು ಕೊನೆಯಲ್ಲಿರುವ ಪ್ರಯೋಗ ಸಾರವೆಂಬ ಅಧ್ಯಾಯವು ಶಬ್ಧಾರ್ಥ ನಿರ್ಣಯವನ್ನು ತಿಳಿಯಲು ಸಹಾಯ ವಾಗುತ್ತದೆ. ಈ ವ್ಯಾಕರಣದ ಸೂತ್ರಗಳು ಕಂದ ಪದ್ಯದಲ್ಲಿದ್ದು, ಒಟ್ಟು 322 ಸೂತ್ರಗಳಿವೆ.

ಶ್ರೀ ವಾಗ್ದೇವಿಗೆ ಶಬ್ಧದಿ -1
ನಾದಾವಿಂದ್ರೀಯದ ವಿಷಯಮಂ ಶ್ರೋತ್ರದೊಳು -1
ದ್ಭಾವಿಪ ನಿರ್ಮಳ ಮೂರ್ತಿಗೇ -1
ಭಾವಂದ್ಯೆಗೆ ಶಾಸ್ತ್ರ ಮುಖದೊಳವನತನಪ್ಪೆಂ

-ಕೇಶಿರಾಜ

ಕ್ರಿ. ಶ. ಸುಮಾರು 1604ರಲ್ಲಿ "ಭಟ್ಟಾ ಕಳಂಕದೇವ" ಎಂಬಾತನು "ಶಬ್ಧಾನುಶಾಸನ" ಎಂಬ ಬಹಳ ಪ್ರೌಢವಾದ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ರಚಿಸಿದನು. ದ. ಕನ್ನಡ ಜಿಲ್ಲೆಯ ಹಾಡುವಳಿ (ಸಂಗೀತಪುರ) ಎಂಬ ಊರಿನ ಜೈನ ಮಠದ ಗುರುಗಳಾದ "ಅಕಳಂಕದೇವ" ಎಂಬಾತನು ಇವನ ಗುರುಗಳು. ಭಟ್ಟಾಕಳಂಕನು ಕನ್ನಡ ಮತ್ತು ಸಂಸ್ಕೃತದಲ್ಲಿ ಮಹಾವಿದ್ವಾಂಸನಾಗಿದ್ದನು. ಇವನು ಸಂಸ್ಕೃತದಲ್ಲಿ ವ್ಯಾಕರಣ ರಚಿಸಿ ಕನ್ನಡವು ಸಂಸ್ಕೃತಕ್ಕಿಂತ ಕಡಿಮೆ ಇಲ್ಲವೆಂದು ತೋರಿಸಿಕೊಟ್ಟಿರುವರು. ಇದು ಕನ್ನಡಿಗರಾದ ನಮಗೆ ಹೆಮ್ಮೆಯ ವಿಷಯ ಅಲ್ಲವೆ?

ಹಿಂದೆ ಪಾಣಿನಿ, ಪತಂಜಲಿ ಮಹರ್ಷಿಗಳು ಸಂಸ್ಕೃತ ಭಾಷೆಗಾಗಿ ಅಷ್ಟಾಧ್ಯಾಯಿ ಮತ್ತು ಮಹಾಬಾಷ್ಯ ಎಂಬ ಗ್ರಂಥಗಳನ್ನು ರಚಿಸಿದರು. ಅವುಗಳ ಹಾಗೆಯೆ ಭಟ್ಟಾಕಳಂಕನು ಕನ್ನಡದ "ಶಬ್ಧಾನುಶಾಸನ" ವ್ಯಾಕರಣದ ಸೂತ್ರಗಳನ್ನೂ ಮತ್ತವುಗಳಿಗೆ ಭಾಷ್ಯವನ್ನು ರಚಿಸಿದನು.

ಈಗ ಬಳಕೆಯಲ್ಲಿರುವ ಕನ್ನಡ ಭಾಷೆಯು ಪ್ರಾಚೀನ ಭಾಷೆಗಿಂತ ಬಹಳ ಮಟ್ಟಿಗೆ ಮಾರ್ಪಾಟಾಗಿದೆ. ಮೈಸೂರು ರಾಜ್ಯದ ವಿದ್ಯಾಶಾಖೆಯವರು ಹೈಸ್ಕೂಲ್ ವಿದ್ಯಾರ್ಥಿಗಳಿಗೆ ನೆರವಾಗಲೆಂದು ನೂತನ ವ್ಯಾಕರಣ ಪುಸ್ತಕವನ್ನು ರಚಿಸಲು ಸಮಿತಿಯೊಂದನ್ನು ನಿಯಮಿಸಿತು. ಆ ಸಮಿತಿಯು ಕ್ರಿ. ಶ. 1970ರಲ್ಲಿ ಹಳೆಗನ್ನಡದ ತಿರುಳಿನೊಂದಿಗೆ ಹೊಸಗನ್ನಡದ ವ್ಯಾಕರಣವನ್ನು ಬೆಳಕಿಗೆ ತಂದರು. ಈ ವ್ಯಾಕರಣ ಪುಸ್ತಕದಲ್ಲಿ ಸಂಸ್ಕೃತದಿಂದ ಕನ್ನಡಕ್ಕೆ ಬಂದಿರುವ ಹಲವಾರು (ಸಂಸ್ಕೃತದ ವಿಕೃತ) ಶಬ್ಧಗಳು ಅರೆಭಾಷೆಯಂತೆಯೇ ಇವೆ. ಅವುಗಳಲ್ಲಿ ಕೆಲವನ್ನು ನಿಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

| **ಸಂಸ್ಕೃತ** | **- ಕನ್ನಡ (ವಿಕೃತ)** | **ಸಂಸ್ಕೃತ** | **- ಕನ್ನಡ (ವಿಕೃತ)** |
|---|---|---|---|
| ತುಳಸಿ | - ತೊಳಚಿ, ತೊಳಸಿ | ಕುಸುಂಭ | - ಕುಸುಂಬೆ |
| ಅಮವಾಸ್ಯ | - ಅಮಾಸೆ | ತಟ | - ತಡ, ದಡ |
| ಧ್ವನಿ | - ದನಿ | ರಾಶಿ | - ರಾಸಿ |
| ಜ್ವರ | - ಜರ | ಭಾಷಾ | - ಬಾಸೆ |
| ರಾಕ್ಷಸ | - ರಕ್ಕಸ | ವೇಷ | - ವೇಸ |

ಇತ್ಯಾದಿಗಳು.

ಹಳೆಗನ್ನಡದ ಹಲವಾರು ಶಬ್ಧಗಳು ಕಾಲಕಾಲಕ್ಕೆ ಬದಲಾಗಿ ಹೊಸ ಕನ್ನಡವಾಗಿದೆ. ಅವುಗಳಲ್ಲಿ ಕೆಲವನ್ನು ನೋಡಿ, ಕ್, ಣ್, ಲ್, ನ್, ರ್, ಳ್, ವ್, ಅಂತ್ಯಕ್ಷರವಾಗುಳ್ಳ ವ್ಯಂಜನಾಕ್ಷರಕ್ಕೆ ಉಕಾರವೆಂಬ ಸ್ವರಾಕ್ಷರ ಸೇರಿದ ಬದಲಾವಣೆ.

| **ಹಳೆಗನ್ನಡ** | | **ಹೊಸಗನ್ನಡ** | **ಹಳೆಗನ್ನಡ** | | **ಹೊಸಗನ್ನಡ** |
|---|---|---|---|---|---|
| ನಾನ್ | - | ನಾನು | ನೀನ್ | - | ನೀನು |
| ಏನ್ | - | ಏನು | ತಿನ್ | - | ತಿನ್ನು |
| ಕೇಳ್ | - | ಕೇಳು | ಕಣ್ಣ್ | - | ಕಣ್ಣು |
| ಸೀನ್ | - | ಸೀನು | ಮಣ್ | - | ಮಣ್ಣು |

ಗೋದಾವರಿ ನದಿಯ ಉದ್ದ **1465** ಕಿ. ಮೀ.

| | | | |
|---|---|---|---|
| ಸೀಳ್ - | ಸೀಳು | ಅರಳ್ - | ಅರಳು |
| ಸೇರ್ - | ಸೇರು | ಉಗಳ್ - | ಉಗುಳು |
| ನಿಲ್ಲ್ - | ನಿಲ್ಲು | ಮುಳ್ಳ್ - | ಮುಳ್ಳು |
| ಕಲ್ಲ್ - | ಕಲ್ಲು | ನಾರ್ - | ನಾರು |
| ನೂಲ್ - | ನೂಲು | ಕಾರ್ - | ಕಾರು |
| ಸಿಡಿಲ್ - | ಸಿಡಿಲು | | |

ಅಲ್ಲದೆ ಹಲವಾರು ಅನುಸ್ವಾರಗಳು ಹೊಸಗನ್ನಡದಲ್ಲಿ ಇಲ್ಲವಾಗಿದೆ.

| ಹಳೆಗನ್ನಡ | ಹೊಸಗನ್ನಡ | ಹಳೆಗನ್ನಡ | ಹೊಸಗನ್ನಡ |
|---|---|---|---|
| ನಾಂದು - | ನಾದು | ನೊರಂಜು - | ನೊರಜು |
| ಬಣಂಬೆ - | ಬಣಬೆ | ಮೀಂಟು - | ಮೀಟು |
| ಸೇಂದು - | ಸೇದು | ಜಿನುಂಗು - | ಜಿನುಗು |
| ಬಣಂಜಿಗ - | ಬಣಜಿಗ | | |

ಇವೇ ಮೊದಲಾದವುಗಳು. ಇದೇ ರೀತಿ ಬಹಳಷ್ಟು ಉದಾಹರಣೆ ಇರುವುದು.

ಯಾವುದೇ ಒಂದು ಭಾಷೆಯನ್ನು ಕೂಲಂಕುಷವಾಗಿ ತಿಳಿಯಲು ಆ ಭಾಷೆಯ ವ್ಯಾಕರಣವನ್ನು ತಿಳಿದಾಗ ಮಾತ್ರ ಸಾಧ್ಯ. ವ್ಯಾಕರಣ ತಿಳಿಯದೆ ಪದಪ್ರಯೋಗ ಮಾಡುವುದರಿಂದ ಕಾಲಾನುಕ್ರಮದಲ್ಲಿ ಭಾಷೆಯ ಸ್ವರೂಪ ಕೆಡುತ್ತದೆ. ಹಾಗೆಯೇ ಮೂಲ ಕನ್ನಡವಾದ ಅರೆಭಾಷೆ (ಅರೆಭಾಷೆಯಲ್ಲ ಮೂಲ ಕನ್ನಡ) ಯನ್ನು ನಾವು ಎಂದಿಗೂ ಮರೆಯಬಾರದು. ಸಂಸ್ಕೃತಕ್ಕೆ ಸಮಾನವಾದ ಕನ್ನಡ ಭಾಷೆಯ ಮೂಲ ಭಾಷೆಯು ಇಂದಿಗೂ ಜನರ ಬಾಯಲ್ಲಿರುವುದು ನಮಗೆ ನಿಜವಾಗಿ ಹೆಮ್ಮೆಯ ವಿಷಯ. ಇದನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಕೈಯಲ್ಲಿದೆ ಹಾಗೂ ನಮ್ಮ ಕರ್ತವ್ಯವೂ ಸಹ ಹೌದು.

**ಜೈ ಗೌಡ ಮಾತೃಭಾಷೆ.**

ಸ್ಫೂರ್ತಿ : ಕನ್ನಡ ವ್ಯಾಕರಣ ಶಾಸ್ತ್ರಗಳು

**ಬಿಟ್ಟೀರ ಚೋಂದಮ್ಮ ಶಂಭು**

## ಸ್ವಪ್ನ ಸುಂದರಿ

ನಾ ಕಂಡೆ ಚಲುವೆಯ ಕಾಲೇಜಿನ ಆವರಣದಲ್ಲಿ ।
ನನ್ನ ಮನಸ್ಸಿನಲ್ಲಿ ಕೊಟ್ಟೆ ಸ್ಥಾನ ಸುಂದರಿಯರ ಪಟ್ಟಿಯಲ್ಲಿ ॥
ಅವಳ ಬಳಿ ಹೋಗಿ ಮಾಡಿಕೊಂಡೆ ಪರಿಚಯ।
ಹೇಳಿಕೊಂಡೆ ಮನಸ್ಸಿನ ಭಾವನೆಯ ।
ಮೊದಲ ನೋಟಕ್ಕೆ ಆದ ಪ್ರೀತಿಯ ॥
ನಂತರ ಸೋಕಿತು ಅವಳ ಕೈ ನನ್ನ ಕೆನ್ನೆಯ ।
ಬೆಚ್ಚಿಬಿದ್ದು ನಿದ್ರೆಯಿಂದ ಎದ್ದಾಗ ತಿಳಿಯಿತು
ನಾ ಕಂಡಿದ್ದು ಕನಸ್ಸಿನಲ್ಲಿ ಕನ್ಯೆಯ ॥
ಮುಂಜಾನೆ ಕಾಲೇಜಿಗೆ ಹೋದಾಗ
ನೇರವಾಗಿ ನಡೆದೆ ತರಗತಿಯ ಕೋಣೆಯೆಡೆ ।
ಮರೆತು ಸಹ ನೋಡಲಿಲ್ಲ ಕಾಲೇಜಿನ ಆವರಣದ ಕಡೆ ॥

**ಕೊಲ್ಯದ ಮನೋಜ್, ಬೆಂಗಳೂರು.**

# ಚೆಟ್ಟಿಮಾನಿಯಲ್ಲಿ ರಂಗಮಂದಿರದ ಉದ್ಘಾಟನೆ

ದಿನಾಂಕ 27-11-2000ದಲ್ಲಿ ಭಾಗಮಂಡಲ ನಾಡಿನ ಚೆಟ್ಟಿಮಾನಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ರಂಗ ಮಂದಿರದ ಉದ್ಘಾಟನೆಯನ್ನು ಕುಂದಚೇರಿ ಗ್ರಾಮದ ಕೆದಂಬಾಡಿ ಮನೆತನದ ಪಟ್ಟೆದಾರ ಶ್ರೀ ಕೆ. ಕೆ. ಸುಬ್ಬಯ್ಯನವರು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಚೆಟ್ಟಿಮಾನಿ ಮಂಡಲ ಪಂಚಾಯಿತಿಯ ಮಾಜಿ ಸದಸ್ಯರಾದ ಕೆದಂಬಾಡಿ ಜಿ. ರಘುನಾಥನವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಕೆ. ಪಿ. ಚಂದ್ರಕಲಾನವರು ಆಗಮಿಸಿದ್ದರು. ನಾಪೋಕ್ಲು ವ್ಯಾಪ್ತಿಯ ಕಾಫಿ ಬೆಳೆಗಾರರಾದ ಶ್ರೀ ಬಿದ್ದಾಟಂಡ ಟಿ. ಪ್ರದೀಪ್‌ನವರು, ಜಿಲ್ಲಾ ಪಂಚಾಯಿತಿ ಸದಸ್ಯರಾದ ಹೊಸೂರು ಸತೀಶ್‌ಕುಮಾರ್‌ನವರು, ಶ್ರೀಮತಿ ಕೋರನ ಗಂಗಮ್ಮ ಪೂಣಚ್ಚನವರು, ತಾಲೂಕು ಪಂಚಾಯಿತಿ ಸದಸ್ಯೆ ಶ್ರೀಮತಿ ಪೊನ್ನೇಟಿ ಶಾಂತಿಯವರು ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷ ಕೊಟ್ಟನ ಬಿ. ರಾಜುನವರು, ಕ್ಷೇತ್ರ ಶಿಕ್ಷಣಾಧಿಕಾರಿ ಶ್ರೀ ಜಿ. ಆರ್. ಬಸವರಾಜುನವರು, ಹಾಗೂ ರಂಗಮಂದಿರದ ನಿರ್ಮಾಪಕ ಕಂಟ್ರಾಕ್ಟರ್ ಬೆಂಗಳೂರಿನ ಕೆ. ವಿ. ಮೋಹನ್‌ರವರು ಸಹ ವೇದಿಕೆಯಲ್ಲಿ ಅತಿಥಿಗಳಾಗಿ ಹಾಜರಿದ್ದರು.

ಸಿಂಗತ್ತೂರು ಗ್ರಾಮದ ದಿ. ಕುಂಚಡ್ಕ ಸೋಮಪ್ಪ ಮತ್ತು ಅವರ ಧರ್ಮಪತ್ನಿ ದಿ. ಚಿಣಮ್ಮನವರ ಜ್ಞಾಪಕಾರ್ಥವಾಗಿ ಅವರ ಮಕ್ಕಳು ತಮ್ಮ ಮಾತಾಪಿತೃರ ಸವಿನೆನಪಿಗಾಗಿ ಚೆಟ್ಟಿಮಾನಿ ಸರ್ಕಾರಿ ಮಾದರಿ ಶಾಲೆಯ ಆವರಣದಲ್ಲಿ ರಂಗಮಂದಿರವನ್ನು ನಿರ್ಮಿಸಿ ಉದಾರವಾಗಿ ನೀಡಿರುತ್ತಾರೆ. ಇವರ ಸಮಾಜಸೇವಾ ಕಾರ್ಯತತ್ಪರತೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿ ಸನ್ಮಾನಿಸಲಾಯ್ತು.

ಸಭೆಯಲ್ಲಿ ಮೊದಲಿಗೆ ಪಾಣತ್ತಲೆ ವಿಶ್ವನಾಥನವರು ಸ್ವಾಗತವನ್ನು ಬಯಸಿದರು. ಚೆಟ್ಟಿಮಾನಿ ಶಾಲೆಯ ಮುಖ್ಯೋಪಾಧ್ಯಾಯಿನಿ ಚೊಕ್ಕಾಡಿ ಚೋಂದಮ್ಮನವರು ನೆರೆದ ಸರ್ವರನ್ನು ವಂದಿಸಿದರು. ಮಕ್ಕಳಿಂದ ಸಾಂಸ್ಕೃತಿಕ ಕಾರ್ಯ ಕ್ರಮವಿತ್ತು. ಮಧ್ಯಾಹ್ನಕ್ಕೆ ಊಟದ ವ್ಯವಸ್ಥೆಯನ್ನು ಸಹ ಗ್ರಾಮಸ್ಥರು ಹಮ್ಮಿಕೊಂಡಿದ್ದರು.

**ವರದಿ : ಕುಯ್ಯಮುಡಿ ಸುನೀಲ್, ಸಂಣಪುಲಿಕೋಟು.**

## "Sow" ಎಂದರೇನು?

ಲಗ್ನ ಪತ್ರಿಕೆಗಳಲ್ಲಿ ಮುದ್ರಿಸುವಾಗ ಹುಡುಗಿಯ ಹೆಸರಿನ ಮುಂದೆ "ಸೌಭಾಗ್ಯವತಿ" ಅನ್ನುವುದಕ್ಕೆ ಇಂಗ್ಲೀಷ್‌ನಲ್ಲಿ "Sow" ಎಂದು ಬರೆಯುತ್ತಾರೆ. ದುರದೃಷ್ಟಕ್ಕೆ ಆಂಗ್ಲ ನಿಘಂಟಿನಲ್ಲಿ ಇದರ ಅರ್ಥ "ಹೆಣ್ಣು ಹಂದಿ" ಎಂದು.

ಸಂಗ್ರಹ : **ಊರೋಳನ ಬೀನಾ ಸುಬ್ಬಯ್ಯ, ಅವಂದೂರು**

**ಕೃಷ್ಣಾ ನದಿಯ ಉದ್ದ 1400 ಕಿ. ಮೀ.**

# ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಲೇಖನ : ಶಂಕರನ ಬಸಪ್ಪ

**ಧಾರಾವಾಹಿ - 24**

> ಹಿಂದೆ ನಡದದ್.......
>
> ಮಿ. ರಾಜು ಮರ್ಕ್ವಾಡಿ ಸುರರಾಂನ ಪರಿಚಯ ಮಾಡಿಕಂಡ್ ಅಂವನ ಹತ್ರ ಸ್ವಲ್ಪ ಚಿನ್ನನ ಅಡ ಇಟ್ಟ್ ಹಣ ಮಾಡಿಕಂಡತ್. ಮಾರನೆ ದಿನ ನಮ್ಮೂರು ಜನನೇ ಆದ ಗಣಪತಿ ಅಜ್ಜನ ಅವರ ಸಂಸಾರ ಸಮೇತ ಕೆ. ಆರ್. ಸರ್ಕಲ್‌ಲಿ ಕಂಡತ್. ಅವುಕೆ ಬೇಕಾದ ಮದ್ವೆ ಜಂಬಾರಕ್ಕೆ ಬೇಕಾದಷ್ಟ್ ಬಟ್ಟೆ ಬರೆಗಳ ವ್ಯಾಪಾರ ಮಾಡಿ ಕಡಿಮೆಬೆಲೆಗೆ ಕೊಡ್ಸಿ ಹಂಗೇ ಸರಿಯಾದ ಕಮೀಷನ್ ಹೊಡ್ದಿತ್............
>
> ಮುಂದಕೆ...........

ಆ ದಿನ ಸೋಮವಾರ ಕಂಡದೆ. ಇಲ್ಲೇ ಜೈನ್ ಲಾಡ್ಜ್‌ನ ಸುತ್ತ ಮುತ್ತ ಇದ್ದ್ ಇದ್ದ್ ಮಿ. ರಾಜುಗೆ ಸ್ವಲ್ಪ ಬೇಜಾರಾಗಿತ್. ಹಂಗಾಗಿ ಇಂದ್ (out of the city) ಸ್ವಲ್ಪ ದೂರ ಹೋಗಿ ಎಲ್ಲಾದ್ರೂ ಒಳ್ಳೆ ಹೋಟೇಲ್‌ಲಿ ಆರಾಂ ಆಗಿ ಬೆಳಗಿನ ಉಪಹಾರ ಮಾಡಕಾಯ್ತಲ್ಲಾ? ತ್ತೇಳಿ ಗ್ಯಾನ ಮಾಡಿಕಂಡ್ ಹಂಗೇ ನಡಕಂಡ್ ಬಂದವ ಗಾಂಧಿಸರ್ಕಲ್ ಹತ್ರ ಅಲ್ಲೇ ನಿಂತಿದ್ದ ಒಂದು ಆಟೋ ಹಿಡ್ದ್ ಆ ಡ್ರೈವರ್‌ಗೆ ಹೇಳ್ತ್ ಏಯ್ ಆಟೋರಾಜ ನನ್ನ ಎಲ್ಲಾದ್ರೂ ದೂರದ ಒಳ್ಳೆ ಹೋಟೆಲ್‌ಗೆ ಕರ್ಕಂಡ್ ಹೋಗ್ ನಂಗೆ ಇಲೆಲ್ಲಾ ಬೆಳಗಿನ ನಾಷ್ಟಾ ಮಾಡಿಕೆ ಇಷ್ಟ ಆದ್‌ಲೇತ್ತೇಳ್ತ್. ಆ ಆಟೋರಾಜ ಇಂವ ಒಳ್ಳೆ ಕಮಂಗಿ ಗಿರಾಕಿ ಆತಲ್ಲಾ? ಇಂವನ ಎಲ್ಲಿ ಬುಡ್ವುತ್ತೇಳಿ ಒಂದ್ 30 ರೂಪಾಯಿ ಆಟೋ ಚಾರ್ಜ್ ವಸೂಲಿ ಮಾಡಕ್‌ತ್ತೇಳಿ ಅಂವ ನೆಟ್ಟಂಗೆ ಸಿ.ಐ.ಟಿ.ಬಿ. ಆಫೀಸ್ ಹಿಂದ್‌ಗಡೆ ಇರ್‍ವ "ಹೋಟೆಲ್ ರಮ್ಯ" ಕೆ ಕರ್ಕಂಡ್ ಬಂದ್ ಇಳ್ಸಿತ್. ಈ "ಹೋಟೆಲ್ ರಮ್ಯ"ಲಿ ಆರಾಂ ಇಲ್ಲೆ. ಇಲ್ಲಿದ್ದ್ ಏನ್ ವಿಶೇಷತ್ತೇಳಿರೆ ಈ ಹೋಟೆಲ್ ಕೋರ್ಟ್, ಕಛೇರಿ, ಯುನಿವರ್ಸಿಟಿ, ಕಾಲೇಜ್, ಸಿ.ಐ.ಟಿ.ಬಿ., ಡಿ.ಸಿ.ಆಫೀಸ್ ಹಿಂಗೆ ಎಲ್ಲಾ ಗೌರ್ನ್‌ಮೆಂಟ್ ಆಫೀಸ್‌ಗಳ ಮಧ್ಯ ಭಾಗದ ಜಾಗಲಿ ಉಟ್ಟು. ಇಲ್ಲಿಗೆ ಬರುವ ಗಿರಾಕಿಗಳೋ ಎಲ್ಲಾ ಕ್ಲಾಸ್ ಒನ್ ಆಫೀಸರ್ಸ್‌ಗಳೇ. ಎಲ್ಲಾ, ಕಾರ್, ಸ್ಕೂಟರ್‌ಗಳಲ್ಲೇ ಬರೋವು. ಬಂದವಕೆಲ್ಲಾ ಹೋಟೆಲ್ ಹೊರಗೆ "ಡ್ರೈವ್ ಇನ್" ಸಿಸ್ಟಮ್. ಅವು ಅವರ ಕಾರ್ ಒಳಗೆ ಕುದ್‌ಕಂಡೇ ಒಳ್ಳೆ ಒಳ್ಳೆ ತಿಂಡಿಗಳಿಗೆ ಆರ್ಡರ್ ಮಾಡತಿದ್ದೋ. ಆ ಸಪ್ಲೈಯರ್‌ಗ ಬಂದ್ ಸ್ಟ್ಯಾಂಡ್‌ನ ಕಾರ್ ಡೋರಿಗೆ ತೂಗ್ ಹಾಕಿರೆ ಆ ಸ್ಟ್ಯಾಂಡ್‌ಲಿ ಇವುಕೆ ತಿಂಬಕೆ ಬೇಕಾದ ಕಾಫಿ ತಿಂಡಿಗಳನ್ನ ನೀರ್‌ನ ಎಲ್ಲಾ ಮಡಗಕ್. ತಿಂದಾದ ಮೇಲೆ ಬಿಲ್‌ನ ಅಲ್ಲೇಕುದ್‌ಕಂಡಲ್ಲೇ ಕೊಡಕ್. ಈ ಡ್ಯೂಟಿಗೆ ಬೆಳಗ್ಗೆ ಹೊತ್ತ್ ಹೊಗುವಕ್ಕೆ ಬರುವೊಕ್ಕೆ ಇದ್ ಒಳ್ಳೆ ಅನುಕೂಲ ಆಗಿಟ್ಟು. ತಿಂಡಿ ಕೂಡ ಬಹಳ ಲಾಯ್‌ಕ್‌ಲಿ ಕ್ವಾಲಿಟಿ ತಿಂಡಿ ಮಾಡಿಕೊಡ್‌ತಿದ್ದೊ. ಹಂಗಾಗಿ ಈ ಮಿ. ರಾಜು ಹೋಟೆಲ್ ಒಳಗಡೆ ಹೋಗಿ ಒಂದ್ ಸೀಟಿಗಾಗಿ ಹುಡ್‌ಕಾಡಿ ಕಂಡ್ ಒಂದ್ ಕಡೆ ಹೋಗಿ ಕುದ್‌ಕಂಡತ್. ಅಷ್ಟರಲ್ಲಿ ಇವನ ಬೆನ್ನ ಹಿಂದೆನ ಸೀಟ್‌ಲಿ ಮೂರ ಜನ ಗಿರಾಕಿಗ ತಿಂಡಿ ತಿಂದ್ ಆಗಿತ್. ಕಾಫಿ ಕುಡ್‌ಕಂಡ್ ಸಿಗರೇಟ್ ಸೇದಿಕಂಡ್ ಆರಾಂ ಆಗಿ ಏನೋ ಮಾತಾಡಿಕಂಡ್ ಕುದ್ದಿದ್ದೊ,

ಪಕ್ಕಲೆ ಕುದ್ದಿದ್ದಂವ ಮಿ. ಜಯದೇವ್‌ತ. ಅವು ಅವರ ಮನೆ ಒಂದನ್ನ ಮಾರಾಟ ಮಾಡುದರ ಬಗ್ಗೆ ಮಿ. ಸುರೇಶ್ ರಿಯಲ್ ಎಸ್ಟೇಟ್ ದಳ್ಳಾಳಿಗೆ ಹೇಳ್ತಿದ್ದೊ. ಮಿ. ಸುರೇಶ್ ಆ ಮನೆನ ಹಿನ್‌ಕಲ್‌ಲಿ ಒಬ್ಬ ಪಾರ್ಟಿಗೆ ಬೇಕಾಗಿತ್ತ್ ತ್ತೇಳಿ ಕೇಳ್ತಿದ್ದೊ. ಆ ಪಾರ್ಟಿ ಆರ್ಮಿ ರಿಟೈರ್ಡ್ ಮೇಜರ್ ಸುಬ್ಬಯ್ಯತ. ಈಗ ಸದ್ಯಕ್ಕೆ ಹಿನಕಲ್ ಸಿನಿಮಾ ಟೆಂಟ್ ಹಿಂಭಾಗಲಿ ಒಂದ್ ಮನೇಲಿ ಬಾಡಿಗೆ ಮನೇಲಿ ಒಳೋಗಡ. ಅವುಕೆ ಒಂದ್ ಒಳ್ಳೆ ದೊಡ್ಡಮನೆ ಕೊಡ್ಸಿ ಕೊಡಿ ತಾ ಕಳ್ದವಾರ ಮಿ. ಸುರೇಶ್ ಹತ್ರ ಕೇಳಿಕಂಡಿದ್ದೊಗಡ. ಆದ್ರೇ ಮಿ. ಜಯದೇವ್ ನೀವು ನಿಮ್ಮ ಎಂಟು ಚದರ ಮನೆಗೆನೇ 6 ಲಕ್ಷ ಬೇಕು. ಅಂತ್ರಿಲ್ಲಾ? ಅವರಿಗೆ ಇದರ ಮೇಲೆ ಪೇಪರ್ ಕರ್ಚ್, ಎಗ್ರಿಮೆಂಟ್ ಕರ್ಚು ಹಿಂಗೆಲ್ಲಾ 75, 80 ಸಾವಿರ ಕರ್ಚು ಉಟ್ಟಲ್ಲಾ ಅದ್ರ ಎಲ್ಲಾ ನಾನ್ ಅವರ ಕೈಯಿಂದಲೇ ಕರ್ಚ್ ಮಾಡ್ಸಿನೆ ಮತ್ತೆ ನಿಮಗೆ ಒಟ್ಟಿಗೆ ಹಾರ್ಡ್‌ಕೇಸ್ ಕೊಡ್ಸಿನೆ. ಹಣಕ್ಕೆ ಏನ್ ತೊಂದರೆ ಇಲ್ಲೆ. ಆ ಪಾರ್ಟಿ ಒಳ್ಳೆಕಂಡೀಷನ್ ಮತ್ತೆ ಸಿಸ್ತಿನ ಮನುಸ್ಯ. ಎಲ್ಲಾ ವ್ಯವಹಾರನ ಪಕ್ಕಾ ಮಾಡಿಕೊಡೋಕು. ನಾಳೆ ನಾನ್ ಆ ಪಾರ್ಟಿನ ಕರ್ಕಂಡ್ ಬಂದ್ ನಿಮ್ಮ ಮನೆ ತೋರ್ಸಿನೆ. ಅಂದಂಗೆ ನಿಮ್ಮ ಮನೆ ಎಲ್ಲಿ ಬಂದದೆ ತಾ ಕೇಳ್ತ್. ಅದಕ್ಕೆ ಮಿ. ಜಯದೇವ್ ಹೇಳ್ತ್. ಅಲ್ಲೇ ಹೆಬ್ಬಾಳ್ ಫಸ್ಟ್ ಸ್ಟೇಜ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜಸ್ಟ್ ಹಿಂಭಾಗದ ಮನೆ ನಂ. 426, 60 × 40 ಸೈಟ್‌ಲಿ 30 × 35 ಮನೆ ಕಟ್ಟೊಳ್ರಿ. ಎದ್‌ರ್‌ಗಡೆ ಆರ್ಚ್ ಡಿಸೈನ್ಡ್ ಪಿಂಕ್ ಹೌಸ್. ಮೂರು ಬೆಡ್‌ರೂಂ, ಹಾಲ್, ಕಿಚನ್ ಬಾತ್‌ರೂಂ ಅಲ್ಲದೆ ಒಂದ್ ಕಾರ್ ಷೆಡ್ ಕೂಡಾ ಉಟ್ಟ್. ನೀವೇ ನೋಡಿ ಬೆಲೆ ಅಂದಾಜ್ ಮಾಡಿತ್ತೇಳ್ತ್. ಸರಿ ಮಿ. ಜಯದೇವ್ ನಂಗೆ ಎರಡ್ ದಿನ ಟೈ ಕೊಡಿ. ನಾನ್ ಈಗ ಬೆಂಗಳೂರಿಗೆ ಹೊರಟೊಳೆ. ಯಾವುದೋ ಅರ್ಜೆಂಟ್ ಕೆಲ್ಸ. ಉಟ್ಟ್‌ತ್ತೇಳಿ ರೀ. ವೇಯಿಟರ್ ಬಾರಯ್ಯಾ ಇಲ್ಲಿತ್ತೇಳಿ ಇವರ ತಿಂಡಿ ಕಾಫಿದ್ ಬಿಲ್‌ನ ಕೊಟ್ಟ್ ನಂತರ ಎಲ್ಲವೂ ಮೇಲೆದ್ದೊ.

ಮಿ. ರಾಜು ಎಸ್.ಬಿ.ಐ. ಹಿಂಭಾಗ 426 ಮಿ.ಜಯದೇವ್, ಟೆಂಟ್ ಹಿಂಭಾಗ, ಮಿ. ಸುಬ್ಬಯ್ಯ ಹಿನ್‌ಕಲ್‌ತ ತನ್ನಲ್ಲೇ ಗೊಣಗಿಕಂಡ್ ಕುದ್ದೇ ಇತ್ತ್. ಸಾರ್ ಏನ್ ಬೇಕು? ತ್ತೇಳಿ ಆ ವೆಯಿಟರ್ ಬಂದ್ ಕರೆಯಕಾಕನೇ ಇವಂಗೆ ಎಚ್ಚರ ಆದ್. ಗಲಿಬಿಲಿ ಆಗಿ ಹಾಂ ! ಒಂದ್ ಅರ್ಧ ಚಿಕನ್ ಪಲಾವ್ ತ್ತೇಳ್ತ್. ಅದಕ್ಕೆ ವೆಯಿಟರ್ ನ್ಯಗೆ ಆಡಿ ಆ ಹೋಟೇಲ್ದ್ ಮೆನು

ನರ್ಮದಾ ನದಿಯ ಉದ್ದ 1312 ಕಿ. ಮೀ.

ಕಾರ್ಡ್‌ನ ಮುಂದೆ ಹಿಡ್ದ್. ಇಲ್ಲಿ ಎಲ್ಲಾ ವೆಜಿಟೇರಿಯನ್ ಫುಡ್ ಮಾತ್ರ ಸಿಕ್ಕುದು. ಒಂದ್ ಮಸ್‌ರೂಂ ಪಲಾವ್ ತರ್‍ಲಾ? ತ್ತೇಳಿಕಂಡ್ ಹೋತ್. ಓ.ಕೆ., ಓ.ಕೆ. ಆಳ್‌ಂಬು ಪಲಾವ್ ತಾನೆ? ಹಾಂ ಅದನ್ನೆ ತಕ್ಕೊಂಬಾ ತ್ತೇಳಿ ಆರ್ಡರ್ ಕೊಡ್ತ್.

ಆ ಅಳ್‌ಂಬ್ ಮಸರೂಮ್ ಪಲಾವ್ ತುಂಬಾ ಟೇಸ್ಟೀ ಆಗಿತ್. ತಿಂಡಿ ತಿನ್‌ತಾ ತಿನ್‌ತಾ ಮಿ. ರಾಜು ಗೇನ ಮಾಡ್ತ್. ಮುಠಾಳ ಜನ ಅವು ಇವರ ಬ್ಯುಸಿನೆಸ್ ಸೀಕ್ರೆಟ್ ನೆಲ್ಲಾ ನನ್ನ ಕಿಮಿ ಮೇಲೆ ಹಾಕಿ ಹೋದಲ್ಲಾತ್ತೇಳಿ ನ್ಯಗೆ ಆಡಿಕಂಡ್ ತಿಂಡಿ ತಿಂದ್ ಮುಗ್ಸಿತ್.

ಮಿ. ರೀಜು ಒಂದ್ ಆಟೋ ಹತ್ತಿ ಹಿನ್‌ಕಲ್ಲಿಗೆ ಹೋಗಿ ಇಳ್ತ್. ಹಿನಕಲ್ ಗ್ರಾಮ ಪಂಚಾಯ್ತಿ ಠಾಣೆ ಆದ್ರೂನೂ ಕೂಡಾ ಈಗ ಅದ್ ಬಹಳ ಸುಧಾರ್‍ಸಿಕಂಡ್‌ಟ್ಟು ಎಲ್ಲಾ ಹೊರಗಡೆ ಜನ ಒಳ್ಳೊಳ್ಳೆ ಕೆಲ್ಸದವು. ವ್ಯಾಪಾರಸ್ತರಗ ಬಂದ್ ಸೇರಿ ಕಂಡೋಳೋ. ಹಳೇಕಾಲದ ಕುಂಬಾರ ಹೆಂಚಿನ ಮನೆಗೆಲ್ಲಾ ಅಡಂಗಿ ಹೋಗಿ ಈಗ ಅಲ್ಲೆಲಾ ಒಳ್ಳೊಳ್ಳೆ ವ್ಯಾಪಾರದ ಮಳಿಗೆಗೆ ಎರಡ್ ಮೂರ್ ಅಂತಸ್ತ್‌ಗಳ ಮನೆಗೆ ಎದ್‌ಬುಟ್ಟ್ ಸದ್ಯಕ್ಕೆ ರಸ್ತೆ ಅಡ್ಡ ದಾಟಿಕೇ ಕಷ್ಟ ಆದೆ. ಅಷ್ಟೊಂದು ಇಂಪ್ರೂಮೆಂಟ್ಸ್ ಆಗಿ ಹೋಗುಟ್, ಈ 10 ವರ್ಷದ ಈಚೆಗೆ ಹೊಸ ಹಿನ್‌ಕಲ್ ಆಗಿ ಹೋಗುಟ್ಟು. ರಾಜು ಹೋಗಿ ಮೆ. ಸುಬ್ಬಯ್ಯನ ಮನೆ ಕಾಲಿಂಗ್ ಬೆಲ್‌ನ ಒತ್ತಿತ್. ಅಷ್ಟೊತ್ತಿಗೆ ಒಳಗಡೆಂದ ದೊಡ್ಡ ಆಲೇಶೇಷನ್ ಡಾಗ್ ಬೊಗಳಿಕ್ಕೆ ಶುರು ಮಾಡ್ತ್. ಮೇಜರ್ ಸುಬ್ಬಯ್ಯನವು ಬಾಗ್ಲ್ ತೆಗ್ದ್ ಯಾರ್ ನೀವು? ತ್ತೇಳಿ ಕೇಳ್ರೊ. ನಾನು ಮಿ. ರಾಜುತ್ತೇಳಿ, ರಿಯಲ್ ಎಸ್ಟೇಟ್ ಮಿ. ಸುರೇಶ್‌ನವರ ಕೊಲಿಕ್ಸ್. ಅವು ಅರ್ಜೆಂಟಾಗಿ ಬೆಂಗಳೂರಿಗೆ ಹೊರಟುಹೋದೊ. ಅವು ನಿಮ್ಮ ಅಡ್ರಾಸ್‌ನ ನಂಗೆ ಕೊಟ್ ಆ ಹೆಬ್ಬಾಳ್‌ಲಿ ಇರುವ ಮನೇನ ಇಂದೇ ನಿಮಗೆ ತೋರ್‍ಸಿ ನಿಮಗೆ ಒಪ್ಪಿಗೆ ಆದ್ರೆ ಇಂದೇ ಅದರ ವ್ಯವಹಾರನ ಸೆಟ್ಲ್‌ಮೆಂಟ್ ಮಾಡಿಕೊಡಿತ ಹೇಳಿ ಹೋಗೊಳೊ. ನೀವು ನನ್ನ ಜೊತೆಗೆ ಬಂದ್ರೆ ನಿಮ್ಮನ ಆ ಮನೆ ತೋರ್‍ಸಿಕೆ ಈಗ್ಲೆ ಕರಕಂಡ್ ಹೋನೆ.ಮನೆ ನೋಡಿ ಆದ ಮ್ಯಾಲೆ ನಿಮಗೆ ಒಪ್ಪಿಗೆ ಆಗದಿದ್ರೇ ಅದೇ 1ನೇ ಸ್ಟೇಜ್‌ಲ್ಲಿ ಇನ್ನೊಂದು ಮನೆ ಸ್ವಲ್ಪ ದೊಡ್ಡದ್ ಉಟ್ ಅದ್ರ ತೋರ್‍ಸಿನೆ ಬನ್ನಿ ಪೊಯಿತ್ತೇಳ್ತ್. ಹೋ ನೀವು ಸುರೇಶ್‌ರವರ ಪಾರ್ಟ್‌ನರಾ? ಆತ್ ಸ್ವಲ್ಪ ಕುದ್‌ಕಣಿ. ನಾನ್ ಸ್ವಲ್ಪ ಗಡ್ಡ ಚವರ ಮಾಡಿಕಂಡ್ ಹೊರಡೊಕು. ಹೇ ರಾಣಿ, ಒಂದ್ ಗ್ಲಾಸ್ ಕಾಫಿ ತಕೆಂಡ್ ಬಾ ಮಗಳೇತ್ತೇಳಿ ಅಲ್ಲೆ ಸೋಫಾದ ಮೇಲೆ ಕುದ್ರಿಸಿತ್. ಮಿ. ರಾಜು ಅದ್ ಇದ್ ನ್ಯೂಸ್ ಪೇಪರ್‌ನ ಮೊಗ್‌ಚಿ ಹಾಕಂಡ್ ಇರ್‍ಕಾಕನ ಮೆ. ಸುಬ್ಬಯ್ಯನವು ಹೊರಟ್ ರೆಡಿ ಆಗಿ ಬಂದ್ ನಿಂತೊ. ಇಬ್ಬರೂ ಒಟ್ಟಿಗೆ ಒಂದ್ ಆಟೋ ಹಿಡ್ದ್ ಹೆಬ್ಬಾಳ್ ಎಸ್.ಬಿ.ಐ. ಬ್ಯಾಂಕ್ ಹತ್ರ ಇಳ್ದೊ. ಅಂಕಲ್ ನೀವು ಸ್ವಲ್ಪ ಇಲ್ಲೇ ಐದು ನಿಮಿಷ ಇರಿ ತಾ ಹೇಳಿ ನಿಲ್ಸಿತ್. ಮಿ. ಜಯದೇವ್ ಮನೆಲಿ ಒಳೋ? ಇಲ್ಲೇನಾ? ನೋಡಿಕಂಡ್ ಬನ್ನೆತ್ತೇಳಿ ಇಂವ ಬ್ಯಾಂಕ್ ಹಿಂಭಾಗದ ಮನೆ ನಂ. 426 ರ ಕಾಲಿಂಗ್ ಬೆಲ್ ಒತ್ತಿತ್. ಮಿ. ಜಯದೇವ್ ಎಲ್ಲಿಗೊ ಹೊರಡಿಕೆ ರೆಡಿ ಆಗುತಿದ್ದೋ ಕಂಡದೆ ಹಾಂ ! ಯಾರು ನೀವೂ?ತ್ತೇಳಿ ಕೇಳ್ರೊ. ನಾನು ಮಿ. ರಾಜು ತ್ತಾ ಹೇಳಿ ಅವರ ಕೈ ಸೇಕ್‌ಹ್ಯಾಂಡ್ ಮಾಡಿ ನಮ್ಮ ಅಣ್ಣ ಮಿ. ಸುರೇಶ್ ಬೆಳಿಗ್ಗೆ ನಿಮ್ಮ ಹತ್ರ ಮಾತಾಡಿದ್ರಂತಲ್ಲಾ ಎಲ್ಲಾ ನನ್ನ ಹತ್ರ ಹೇಳಿಹೋಗೊಳ್. ಪಾರ್ಟಿನೂ ನಾನ್ ಕರ್‍ಕೊಂಡು ಬಂದೊಳೆ ನಿಮ್ಮ ಮನೆ ಡಾಕ್ಯುಮೆಂಟ್ಸ್ ಎಲ್ಲಾ ಸರಿ ಉಟ್ಟಲ್ಲಾ? ಮತ್ತೆ 6 ಲಕ್ಷಕ್ಕೆ ಹೆಚ್ಚು ಕಡಿಮೆ ವ್ಯಾಪಾರ ಮಾಡಿನೆ ನನ್ನ ಕಮಿಷನ್ 2% ಆದೆ. ಅದ್ ನಿಮ್ಮದ್. ಪಾರ್ಟಿದ್ ಆಫೀಸ್ ಕರ್ಚ್ ಮತ್ತೆ ಪೇಪರ್‌ಗಳ ಕರ್ಚ್‌ಗ. ಎಲ್ಲಾನೂ ನನ್ನ ಅಣ್ಣ ನಿಮ್ಮ ಹತ್ರ ಹೇಳಿಟ್ಟಲ್ಲಾ? ಹಾಂ ಸರಿ ಪಾರ್ಟಿ ಇಲ್ಲೇ ಬಂದೊಳೊ ಕರ್‌ಕಂಡ್ ಬನ್ನೆ. ಅವು ಫಸ್ಟ್ ನಿಮ್ಮ ಮನೆ ನೋಡ್ಲಿತ್ತೇಳಿ ಹೊರಟತ್.

ನೋಡಿ ಮಿ. ಇವರು ಮೆ. ಸುಬ್ಬಯ್ಯಂತ ನಮ್ಮೂರು ಕಡೆಯವರೆ, ತ್ತೇಳಿ ಪರಿಚಯ ಮಾಡಿ ಇವರು ಮಿ. ಜಯದೇವ್ ಅಂತ. ಈ ಮನೆಯ ಮಾಲೀಕರು. ಸ್ವಲ್ಪ ಮನೆ ಒಳಗಡೆ ಎಲ್ಲಾ ನೋಡಕಲ್ಲಾ? ತಾ ಕೇಳ್ತ್. ಓ.ಕೆ. ಷೋರ್ ಬನ್ನಿ ಒಳಗೆ ತ್ತೇಳಿ ಮಿ. ಜಯದೇವ್ ಕರ್‍ಕಂಡ್ ಹೋತ್. ಹಾಲಿಗೆ ರೂಂಗಳಿಗೆಲ್ಲಾ ಒಳ್ಳೆ ಡಿಸೈನ್ಡ್ ಡೆಕೋಲಂ ಟೈಲ್ಸ್ ಹಾಸಿದ್ದೊ. ವಿಶಾಲವಾದ ಹಾಲ್. ಒಂದೇ ಬದಿಗೆ ಮೂರು ವಿಶಾಲವಾದ ಬೆಡ್‌ರೂಂಗ ಇದ್ದೊ. ಕಿಚನ್ ರೂಂ ಡೈನಿಂಗ್ ಹಾಲ್ ಅದರ ಹಕ್ಕಲೆ ದೇವರ ಕೋಣೆ ವೋರ್ಡ ನೈಸ್ಡ್ ಬಾತ್‌ರೂಂ ಎಲ್ಲಾ ತುಂಬಾ ಡಿಸೇಂಟಾಗಿ ಉಟ್ಟು. ನೋಡಿ ಮೆ. ಸುಬ್ಬಯ್ಯನವರೇ ಈ ಮನೆನ ನಾನು ನನ್ನ ಸ್ವಂತಕ್ಕೋಸ್ಕರ ಕಟ್ಟಿಸಿಕೊಂಡಿದ್ದೆ. ಆದ್ರೇ ನೋಡಿ ನನ್ನ ಹಾಳಾದ ಹಲವು ಮುಗಿಯದ ತಾಪತ್ರಯಂದಾಗಿ ಈ ಮನೆನ ಸೇಲ್ ಮಾಡಿಕೆ ಹೊರೊಟೊಳೆ. ಅಲ್ದೆ ನೋಡಿ ಮನೆ ಡಾಕ್ಯುಮೆಂಟ್ಸ್ ಎಲ್ಲಾ ಪಕ್ಕಾ ಉಟ್ಟು. ಹತ್ತ್ ಚದರದ ಮನೆ, ಕಾರ್ ಷೆಡ್ ಕೂಡಾ ಸಪರೇಟಾಗಿ ಉಟ್ಟು ನಂಗೆ ಏಳು ಲಕ್ಷಕೆ ಆಫರ್ ಬಂದರೆ ಕೊಟ್ಟುಬುಟ್ಟನೆ. ನೆನ್ನೆ ದಿನ ಒಬ್ಬ ಮಾರ್‍ವಾಡಿ ಬಂದ್ ನೋಡಿಕಂಡ್ ಹೋಗುಟ್ಟು. ಆದ್ರೇ ನೀವು ನಮ್ಮ ರಾಜುಗೆ ಸ್ನೇಹಿತರ್‌ಗಡ ಹಂಗಾಗಿ ಈ ಮನೆನ ತೋರ್‍ಸಿದೆ ತ್ತೇಳ್ತ್.

ಆಗ ಮಿ. ರಾಜು ಅಂಕಲ್ ಒಂದ್ ನಿಮಿಷ ಇತ್ತ ಬನ್ನಿತ್ತೇಳಿ ಒಂದ್ ಸೈಡಿಗೆ ಕರ್‍ಕೊಂಡ್ ಹೋತ್ ಅಂಕಲ್ ಹೆಂಗೆ ನಿಮ್ಮ ಮನ್ಸಿಗೆ ಈ ಮನೆ ಹಿಡ್ಸಿತ್ತಾ ಇಲ್ಲೆನಾ ತಾ ಹೇಳಿ. ಅವು ಹೇಳ್ದ ಬೆಲೆ ಈ ಹೆಬ್ಬಾಳ್ ಫಸ್ಟ್ ಸ್ಟೇಜ್‌ಲಿ ಜಾಸ್ತಿ ಏನೂ ಅಲ್ಲ. ಈ ಮನೆ ಹೆಬ್ಬಾಳ್, ವಿಜಯನಗರಕ್ಕೆ ಮೇಯಿನ್ ರೋಡ್ ಪಕ್ಕಲಿ ಇರ್‍ದುರಂದ, ಈ ಮನೆಗೆ ದಿನಕ್ಕೊಂದು ಬೆಲೆ ಏರುತಾ ಇದ್ದದೆ. ಆದ್ರುಂದ ಹೇಳಿ ನಾನ್ ಅವರ ರೇಟ್‌ಲಿ ಸ್ವಲ್ಪಹೆಚ್ಚ್ ಕಮ್ಮಿ ಮಾಡ್ಸಿ ಕೊಟ್ಟನೆ. ನೀವು ಒಪ್ಪಿಕೊಂಡರೆ ಇಂದೇ ಈ ವ್ಯವಹಾರನ ಮುಗ್ಸಿಕೊಟ್ಟನೆ. ಈ ಮಣ್ಣು, ಹೆಣ್ಣು ಒಲಿಯಕಾಕನ ಕಣ್ಣ್ ಮುಚ್ಚಿಕಾಗದ್ ತಾ ಹೇಳ್ತ್.

ಸುಬ್ಬಯ್ಯ ಅಂಕಲ್‌ಗೆ ಈ ಮನೆ ನೋಡಿ ಬಹಳ ಖುಷಿ

20ನೇ ಪುಟಕ್ಕೆ

# ಹವ್ಯಾಸ

ಮನುಷ್ಯನಾದವನಿಗೆ ಯಾವ ರೀತಿಯಲ್ಲಿ ಜೀವನ ಮಾಡಬೇಕೆಂದು ಯೋಚಿಸಿದಾಗ ಅದರಲ್ಲಿ ಹಲವಾರು ರೀತಿಯಲ್ಲಿ ಜೀವನ ಮಾಡಲು ಅವಕಾಶಗಳು ಸಿಕ್ಕುತ್ತವೆ.ಆದರೆ ಗಂಡಸರಿಗೆ "ಉದ್ಯೋಗಂ ಪುರುಷ ಲಕ್ಷಣಂ" ಅಂಥ ಕವಿ ಹೇಳುತ್ತಾರೆ. ಆದರೆ ಆ ಉದ್ಯೋಗ ಸಿಕ್ಕಬೇಕಾದರೆ ಹಲವಾರು ತೊಡಕುಗಳು ಮತ್ತು ಸಮಸ್ಯೆಗಳು ಬಂದೊದಗುತ್ತವೆ. ಶ್ರಮ ಪಟ್ಟು ಉದ್ಯೋಗವನ್ನುಕಲ್ಪಿಸಿಕೊಳ್ಳಲೇಬೇಕೆಂದು ಪಟ್ಟು ಹಿಡಿದು ಫಲ ಸಿಕ್ಕಿದಾಗ ಅವರ ಮನಸ್ಸಿನ ಅಳಲನ್ನು ತೋಡಿಕೊಳ್ಳಲು ಯಾರಿಂದಲೂಸಾಧ್ಯವಾಗದಿದ್ದಾಗ? ಹಾಗು ಜನರೊಡನೆ ಮಾತು ಕತೆಯಲ್ಲಿ ಬೆರೆತಾಗ ಯೋಚನೇ ಎಲ್ಲೋ ಒಂದು ಕಡೆ ಅಳುಕು. ಹಾಗು ಬೇಸರ ಬೇಸರ ಮುಖದ ಕಾಂತಿ ಕುಗ್ಗಿ ಬಲಹೀನ ವಾಗುವುದು. ಅಂತಹ ಪರಿಸ್ಥಿತಿಯಲ್ಲಿ ಬಿಳಿಯ ಹಾಳೆ ಮತ್ತು ಲೇಖನಿ ಹಿಡಿದುಕುಳಿತ ಅಂದರೆ! ನಮ್ಮ ಮನಸ್ಸಿನ ಮನೋಭಾವನೆಗಳನ್ನು ಬಿಚ್ಚು ಮನಸ್ಸಿನಿಂದ ಬರೆದು ನಮ್ಮ ಅಳಲನ್ನು ತೋಡಿಕೊಳ್ಳುವ ಸಂದರ್ಭ ಎಂದು ಹೇಳಬಹುದು.

ನಾನು ಏನು? ಬರೆದೆ ಎಂದು ಮುಖ್ಯವಲ್ಲ ಸುಲಭವಾಗಿ ಜನರ ಮನಸ್ಸನ್ನು ಪ್ರತಿಬಿಂಬಿಸುವ ಒಂದು ಕಲೆಯೇ ಲೇಖನ. ಆಗು ಹೋಗುಗಳನ್ನು ಬರೆದು ಜನರ ಮನಸ್ಸಿಗೆ ಮನ ದಟ್ಟವಾಗುವಂತೆ ಬರೆಯುವುದೇ ಲೇಖನ ಎಂದು ಹೇಳಬಹುದು. ಲೇಖನಿ ಒಂದು ಹರಿತವಾದ ಆಯುಧ ಎಂದುಜನರಿಗೆ ಮನದಟ್ಟವಾದ ವಿಷಯ.

ಲೇಖನ ಬರೆಯುವುದು ಒಂದು ಹವ್ಯಾಸವಾಗಿ ಇಟ್ಟು ಕೊಂಡರೆ ಮನಸ್ಸಿಗೆ ಏನೂ? ಒಂದು ತರಹದ ಆತ್ಮತೃಪ್ತಿ. ನಾವು ಹೇಳದಿದ್ದರು ಓದಿ ತಿಳಿದುಕೊಳ್ಳುವ ಜನರು ಹಲವಾರು. ಅಂತಹದರಲ್ಲಿಲೇಖನ ಬರೆಯುವುದು ಒಂದು ಕಲೆ ಎಂದು ಹೇಳಬಹುದು. ಹಾಗು ಲೇಖಕ, ಲೇಖಕಿಯರು ಬರೆದಂತಹ ಪುಸ್ತಕಗಳನ್ನು ಓದಿ ಜೀರ್ಣಿಸಿ ಕೊಳ್ಳುವಂತರಾಗಬೇಕು. ಜ್ಞಾನ ಇದ್ದರೆ ಸಾಲದು ಸಂಸ್ಕೃತಿಯು ಒಳಗೊಂಡಿರಬೇಕು. ಬರೆಯುವ ಲೇಖನದಲ್ಲಿ ಕೆಲವೊಮ್ಮೆ ಲೋಪದೋಷಗಳು ಕಂಡಲ್ಲಿ ಅವುಗಳನ್ನು ತಿದ್ದಿ ಸರಿಪಡಿಸಿ ತಿಳುವಳಿಕೆ ಹೇಳುವಂತರಾಗಬೇಕು. "ಎಡವಿ ಬಿದ್ದರೇನೆ? ಕೈ ಹಿಡಿದು ಎಬ್ಬಿಸಲು ಸಾಧ್ಯ?" ಹಾಗೆಯೇ ಲೇಖನ ಬರೆಯುವುದು ಕೂಡ. ಅದರಲ್ಲಿ ಲೋಪದೋಷಗಳು ಇದ್ದರೆ ಅದನ್ನು ತಿದ್ದಿ ಅವರೊಡನೆ ಸ್ಪಂದಿಸಿ, ಸಹಕರಿಸಿ, ಪ್ರೋತ್ಸಾಹಿಸಬೇಕು.

ಅದರಲ್ಲಿ ಈಗಿನ ಮಕ್ಕಳಿಂದ ನಾವು ಕಲಿಯಬೇಕಾಗಿರುವ ವಿಷಯಗಳು ಹಲವಾರು ಇದೆ. ಅವರನ್ನು ಕಟ್ಟುಪಾಡುಗಳಲ್ಲಿ ಬಂಧಿಸಬಾರದು. ಏಕೆಂದರೆ, ಈವಾಗ ಎಲ್ಲಾ ತರಹದ ಸೌಲಭ್ಯಗಳನ್ನು ನಾವು ಟಿ.ವಿ.ಯಲ್ಲಿ ನೋಡುತ್ತೇವೆ. ಹಾಗು ಮಕ್ಕಳು ತಿಳಿದುಕೊಳ್ಳುತ್ತಾರೆ. ಕರೆಗಳಲ್ಲಿ ನೋಡಿ ಏನೋ ಇದೆ. Spice ಅಂತೆ, ಈ ಮೇಲ್ ಅಂತೆ ಮತ್ತೆ ಕಂಪ್ಯೂಟರ್ ಇಂಟರ್‌ನೆಟ್ ಅಂತೆ, ಫ್ಯಾಕ್ಸ್ ಅಂತೆ ಅಬ್ಬಬ್ಬಾ ಏನೇನೋ. ಹಾಗಿರುವಾಗ ನಾವು ಕೂಡ ಮಕ್ಕಳೊಡನೆ ಬೆರೆತು ಸ್ವಲ್ಪ ತಿಳಿದುಕೊಳ್ಳುವುದರಲ್ಲಿ ಹಿರಿಯರಾದ ನಮ್ಮಿಂದ ತಪ್ಪೇನು ಅಲ್ಲವಲ್ಲಾ.

**ಆಜಡ್ಕ ರಾಣಿ ಬಾಲಕೃಷ್ಣ, ಕುಶಾಲನಗರ**

---

**ಕಾವೇರಿ ಸ್ತುತಿ :** ರಾಗ : ಕಾವಡಿ ಚಿಂದು

ಶರಣು ಶರಣಮ್ಮ ನಿನಗೆ ಕಾವೇರಮ್ಮಾ
ಕರುಣದಿಂದಲಿ ನೋಡು ಕಾವೇರಮ್ಮಾ
ಹದಿನೆಂಟು ಗೋತ್ರಜರು ಕಾವೇರಮ್ಮಾ
ನಿನಗೆ ವಂದಿಸಿ ಬೇಡುವೆವು ಕಾವೇರಮ್ಮಾ ||ಶರಣು||

ತುಲಾ ಸಂಕ್ರಮಣದ ಜಾತ್ರೆಯಲ್ಲಿ
ತೀರ್ಥ ಸ್ನಾನಕೆಂದು ಬಂದೆವಮ್ಮಾ
ಜ್ಞಾನ ಭಕ್ತಿ ನೀಡು ನಮಗೆ ಕಾವೇರಮ್ಮಾ
ಭಕ್ತಿಯಿಂದ ಬೇಡುವೆವು ಕಾವೇರಮ್ಮಾ ||ಶರಣು||

ಕುಂಡಿಗೆಯಲಿ ಬಿದ್ದವಳೆ ಕಾವೇರಮ್ಮಾ
ಮತ್ತೆ ನದಿಯಾಗಿ ಎದ್ದವಳೆ ಕಾವೇರಮ್ಮಾ
ನಿನ್ನ ಸಮಾನರಿಲ್ಲ ಕಾವೇರಮ್ಮಾ
ಭವದ ಬಂಧನ ಬಿಡಿಸು ಕಾವೇರಮ್ಮಾ ||ಶರಣು||

ಬ್ರಹ್ಮಗಿರಿ ವಾಸಿನಿಯೆ ಕಾವೇರಮ್ಮಾ
ತಲಕಾವೇರಿಯಲ್ಲಿ ಸಿದ್ಧಿ ಪಡೆದೆಯಮ್ಮಾ
ಮಂಡಲಾಕಾರವಾಗಿ ಭಾಗವಾದೆ
ಮತ್ತೆ ಸಂಗಮಿಸಿ ತ್ರಿವೇಣಿಯಾದೆ ||ಶರಣು||

ಉಪಾಸಿಸುವೆ ಆದಿಶಕ್ತಿಯ ಕಾವೇರಮ್ಮಾ
ಲೋಪಾಮುದ್ರೆ ಎಂಬ ಮುದ್ರೆಯಿಂದ
ಮೂರು ಲೋಕದೊಡತಿಯ ಭಕ್ತಳೆಂದು
ಪತಿ ಅಗಸ್ತ್ಯಗೆ ಲಲಿತೆ ಒಲಿದಳಮ್ಮಾ ||ಶರಣು||

ಹಣ್ಣು ಕಾಯಿ ನೈವೇದ್ಯ ತಂದಿಹೆವು
ಮರುಗ ಮಲ್ಲಿಗೆ ಮಾಲೆ ನೀಡುವೆವು
ಜೋಡು ಗಾಯಿ ಈಡು ಗಾಯಿ ಒಡೆಯುವೆವು
ಕರ್ಪೂರದಾರತಿ ಬೆಳಗುವೆವು ||ಶರಣು||

ನಿಷ್ಠೆಯಿಂದ ಪೂಜಿಪೆವು ಕಾವೇರಮ್ಮಾ
ಭಕ್ತಿಯಿಂದ ಮಣಿಯುವೆವು ಕಾವೇರಮ್ಮಾ
ಇಷ್ಟ ಪ್ರಸಾದನ ಕರುಣಿಸಮ್ಮಾ
ಮುಕ್ತಿಯ ನೀಡು ನಮಗೆ ಕಾವೇರಮ್ಮಾ ||ಶರಣು||

**ಕೊಡಗು ಸಂಗಾತಿ, ಪಾಕ್ಷಿಕನ್ನ ತಕ್ಕಂಡೊದಕು**

---

ಭೀಮಾ ನದಿಯ ಉದ್ದ 867 ಕಿ. ಮೀ.

# ಜೋಡಿ ಶಾಸನಗಳು

ಈಗಾಗಲೇ ಪ್ರಚಾರದಲ್ಲಿರುವ ಸುಳ್ಯ ತಾಲೂಕಿನ ಬಳ್ಪದ ದುರ್ಗಾಪರಮೇಶ್ವರಿ ದೇವಸ್ಥಾನದ ಸಮೀಪ ಎರಡು ಶಿಲಾ ಶಾಸನಗಳು ಕಂಡು ಬಂದಿದ್ದು, ಮೈಸೂರಿನ ಪುರಾತತ್ವ ಶೋಧ ಇಲಾಖೆಯವರು 1931ರಲ್ಲೇ ಇದನ್ನು ವರದಿ ಮಾಡಿದ್ದರು. (ನಂಬ್ರ 347-348). ಇದರ ಪೂರ್ಣ ಪಾಠವನ್ನು ಸಂಬಂಧಪಟ್ಟ ಇಲಾಖೆಗೆ ಹೋಗಿ ತಂದಿರುತ್ತೇನೆ. ನಡುಗನ್ನಡ ಭಾಷೆ ಹಾಗೂ ಲಿಪಿಯಲ್ಲಿ ಕೆತ್ತಲಾದ ಈ ಶಾಸನಗಳು ವಿಜಯನಗರದರಸ ಅಳಿಯ ರಾಮರಾಯನ ಕಾಲದವುಗಳು. ಈ ಸಾರ್ವಭೌಮನ ಆದೇಶದಂತೆ, ಮಂಗಳೂರು ರಾಜ್ಯವನ್ನು ಕೆಳದಿಯ ಸದಾಶಿವ ನಾಯಕನು ಆಳುತ್ತಿದ್ದಾಗ, ಇವನ ಕೈ ಕೆಳಗಿನ ಕಡಬ ಸೀಮೆಗೆ ಸೇರಿದ ಬಳ್ಪ ಗ್ರಾಮವನ್ನು ಕುಕ್ಕೆ ಸುಬ್ರಮಣ್ಯಕ್ಕೆ ದಾನವಾಗಿ ನೀಡಿದುದನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.

ಇವುಗಳಲ್ಲಿ ಸ್ವಲ್ಪ ಸುಸ್ಥಿತಿಯಲ್ಲಿರುವ ಒಂದನೆ ಶಾಸನ ಕಾಣಿಯೂರು ಮಠ (ಸಂಪ್ಯಾಡಿ) ಸಮೀಪದ ಬಾಕಿಮಾರು ಗದ್ದೆಯಲ್ಲಿದೆ. ಈ ಜಾಗದಲ್ಲಿ ಬಹು ಹಿಂದೆ ಕಂಬಳಗಳು ನಡೆಯುತ್ತಿತ್ತೆಂದೂ, ಈ ಕಲ್ಲನ್ನು ಊರವರು ದೇವರ ಕಲ್ಲೆಂದು ಭಾವಿಸಿದ್ದರೆಂದೂ ಸ್ಥಳೀಯರು ಹೇಳಿದರು. ಈ ಶಾಸನದ ಮೇಲ್ಗಡೆ ಮಧ್ಯಭಾಗದಲ್ಲಿ ನವಿಲಿನ ಚಿತ್ರ ಮತ್ತು ಅದರ ಎಡ ಬಲಗಳಲ್ಲಿ ಸೂರ್ಯಚಂದ್ರರ ಕೆತ್ತನೆಗಳಿವೆ.

ಇದನ್ನು ಶಕವರ್ಷ 1484ರ ದುಂದುಭಿ ಸಂವತ್ಸರದಲ್ಲಿ (6ನೆಯ ಸೋಮವಾರ ಏ. 1562 ವಿಜಯನಗರ ಸಾಮ್ರಾಟ ಅಳಿಯ ರಾಮರಾಯ ಕುಕ್ಕೆ ದೇವಳಕ್ಕೆ ಬಳ್ಪ ಗ್ರಾಮವನ್ನು ನೈವೇದ್ಯ ಇತ್ಯಾದಿ ಕಾರ್ಯಗಳಿಗೆ ವಿನಿಯೋಗಿಸುವಂತೆ ದಾನವಾಗಿ ನೀಡಿದನು.

ಮೊದಲನೆ ಶಾಸನವು ಶಿವನ ಸ್ತುತಿಯೊಂದಿಗೆ ಸಾಂಪ್ರದಾಯಿಕ ರೀತಿಯಲ್ಲಿ ಆರಂಭವಾಗುತ್ತದೆ.

ಶಕವರ್ಷ 1484ರ ದುಂದುಭಿ ಸಂವತ್ಸರ ದಲ್ಲಿ (6ನೇ ಸೋಮವಾರ ಏ. 1562) ವಿಜಯನಗರದ ಸಾಮ್ರಾಟ ಶ್ರೀ ಮನ್ಮಹಾಮಂಡಲೇಶ್ವರ ಆಳಿಯ ರಾಮರಾಯನ ಕೈ ಕೆಳಗಿನ ಮಂಗಳೂರು ರಾಜ್ಯವನ್ನುಕೆಳದಿಯ ಸದಾಶಿವರಾಯ ನಾಯಕನು ಆಳುತ್ತಿದ್ದಾಗ ಪ್ರಸಿದ್ಧ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಬಳ್ಪ ಗ್ರಾಮವನ್ನು ನೈವೇದ್ಯ ಇತ್ಯಾದಿ ಕಾರ್ಯಗಳಿಗೆ ವಿನಿಯೋಗಿಸುವಂತೆ ದಾನವಾಗಿ ನೀಡಿದನು. 'ಕುಕ್ಕೆ' ಸುಬ್ರಹ್ಮಣ್ಯ ದೇವರ ಅಮೃತಪಡಿಗೆ ಮಂಗಳೂರುರಾಜ್ಯದ ಕಡಬ ಸೀಮೆಗೆ ಸೇರಿದ ಬಳ್ಪ ಗ್ರಾಮವನ್ನು ಅಕ್ಷ ತದಿಗೆಯ ಪುಣ್ಯ ಕಾಲದಲ್ಲಿ ಕುಕ್ಕೆಯ ದೇವರಿಗೆ ಶಿವಾರ್ಪಣವಾಗಿ ಸಮರ್ಪಿಸಿದೆ' ಎಂಬುದಾಗಿ ಶಾಸನದಲ್ಲಿ ಕೆತ್ತಲ್ಪಟ್ಟಿದೆ.

ಅಳಿಯ ರಾಮರಾಯನು 142 ಕಾಟಿ ಗದ್ಯಾಣ, 153 ಮೂಡೆ ಭತ್ತ ಇನ್ನೂ ಕೆಲವು ದ್ರವ್ಯಗಳನ್ನು ಕುಕ್ಕೆ ದೇವಳದ ಅಮೃತ ಪಡಿಗೆ ಸಮರ್ಪಿಸುವಂತೆ ಆಜ್ಞಾಪಿಸಿದನು. ಇದನ್ನು ದೇವಸ್ಥಾನದಲ್ಲಿ ನೈವೇದ್ಯ ದೀಪಕ್ಕೆ ಎಣ್ಣೆ ಹಾಗೂ ಈ ಕಾರ್ಯಗಳಿಗೆ ಬೇಕಾಗುವ ಬ್ರಾಹ್ಮಣರಿಗಾಗಿ ಉಪಯೋಗಿಸುವಂತೆ ವ್ಯವಸ್ಥೆ ಮಾಡಿದನು. ಈ ವ್ಯವಸ್ಥೆಯನ್ನು ಆಚಂದ್ರಾರ್ಕವಾಗಿ ನಡೆಸಿ ಕೊಂಡು ಬರಬೇಕು. ತಪ್ಪಿದರೆ ತಂದೆ ತಾಯಿಗಳನ್ನು ಗೋವು ಬ್ರಾಹ್ಮಣರನ್ನು ಕಾಶಿಯಲ್ಲಿ ಕೊಂದ ಪಾಪ ತಟ್ಟುತ್ತದೆ ಎಂಬುದು ಬಾಕಿಮಾರು ಗದ್ದೆಯಲ್ಲಿನ ಮರದ ಕೆಳಗಿರುವ ಈ ಶಾಸನದಲ್ಲಿ ಬರೆದಿದೆ.

ಇದರಲ್ಲಿ ಕೆಳದಿಯ ಸದಾಶಿವ ನಾಯಕನನ್ನು 'ಯಡವ ಮುರಾರಿ ಕೋಟೆ ಕೊಳಹಳ ಕೆಳದಿಯ ಚೌಡಗೌಡರ ಮಕ್ಕಳು' ಎಂದು ವರ್ಣಿಸಲಾಗಿದೆ.

ಎರಡನೆಯ ಶಾಸನ ತುಂಬ ಹಾಳಾಗಿರುವುದರಿಂದ ಅದರ ಪೂರ್ಣ ಪಾಠವನ್ನಿಲ್ಲಿ ಕೊಟ್ಟಿಲ್ಲ. ಇದೂ ಗಣೇಶನ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಪ್ರಮಾಧಿಚ ಸಂವತ್ಸರದ ಚೈತ್ರ ಮಾಸದಲ್ಲಿ ಶ್ರೀಮತ್ ದೇವರಾಯ ಒಡೆಯ ಇದನ್ನು ಕೆತ್ತಿಸಿದ್ದಾನೆ.ಇದರಲ್ಲಿ ಅಸ್ಪಷ್ಟವಾದ ಒಟ್ಟು 28 ಸಾಲುಗಳಿವೆ. ಇಲ್ಲೂ ದೇವಸ್ಥಾನಕ್ಕೆ ದಾನ ಕೊಟ್ಟುದುದನ್ನು ಉಲ್ಲೇಖಿಸಲಾಗಿದೆ. ಈ ಶಾಸನ ಬಹುತೇಕ ನಾಶಗೊಂಡಿದೆ.

ಬೀದಿಗುಡ್ಡೆಯೆಂಬಲ್ಲಿನ ಗ್ರಾಮಸ್ಥರನ್ನು ಸಂಪರ್ಕಿಸಿದಾಗ, ಈಗಲೂ ಕೂಡ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಕೆ ಬಳ್ಪ ಗ್ರಾಮಸ್ಥರು ಭತ್ತ ಇತ್ಯಾದಿಗಳನ್ನು ಕಾಲ ಕಾಲಕ್ಕೆ ಸಲ್ಲಿಸುತ್ತಿದ್ದಾರೆಂಬ ವಿಷಯ ಗಮನಕ್ಕೆ ಬಂತು. ಈಗಲೂ ಈ ಗ್ರಾಮದವರು ಕುಕ್ಕೆ ಸುಬ್ರಹ್ಮಣ್ಯದ ಜಾತ್ರೆ ಸಂದರ್ಭಗಳಲ್ಲಿ ತಮ್ಮಿಂದಾದ ಕೆಲಸಗಳನ್ನು ಮಾಡುತ್ತಿದ್ದಾರೆಂದು ಅವರು ಹೇಳಿದರು.

ಇಲ್ಲಿನ ದೇವಸ್ಥಾನದ ಗರ್ಭಗೃಹ 10-12ನೇ ಶತಮಾನದಲ್ಲಿ ಹೊಯ್ಸಳರು ನಿರ್ಮಿಸಿದ್ದಾಗಿದೆ ಮತ್ತು ಸುತ್ತು ಪೌಳಿಗಳು, ನಂತರದ ವಿಜಯನಗರದರಸರ ಕಾಲದವುಗಳು ಎಂಬುದಾಗಿ ಈ ದೇವಳದ ಆಡಳಿತ ಮೊಕ್ತೇಸರ ಶೀವತ್ಸ ಹೇಳುತ್ತಾರೆ. ದಿ. ಗುರುರಾಜ ಭಟ್ ಇವುಗಳ ಬಗೆಗೆ ಸಂಶೋಧನೆ ನಡೆಸಿದ್ದರು. ಅವರ ಪ್ರಕಾರದ ಇಲ್ಲಿನ ಮೂಲ ವಿಗ್ರಹ ಒಂಭತ್ತನೇ ಶತಮಾನದ್ದು (ಹಿಸ್ಟರಿ ಆಫ್‌ತುಳುವಾಸ್)

ಈ ದೇವಸ್ಥಾನಗಳ ಬಗೆಗೆ ಇವೆರಡೂ ಶಾಸನಗಳಲ್ಲೂ ಉಲ್ಲೇಖಿಸಿಲ್ಲ. ಇಲ್ಲಿ ಇನ್ನೂ ಶಾಸನಗಳಿರಬಹುದೆಂದು ನಂಬಲಾಗಿದೆ. ಇಲ್ಲಿನ ದೇವಾಲಯಗಳನ್ನು ಕಂಡಗಾ ಈ ಪರಿಸರ ಬಹು ಹಿಂದೆ ಪ್ರಮುಖ ಸಾಂಸ್ಕೃತಿಕ ಕೇಂದ್ರವಾಗಿದ್ದಿರಬಹುದು ಅನಿಸುತ್ತದೆ. ಆದರೆ ಪ್ರಕೃತ ಈ ದೇಗುಲಗಳು, ಶಾಸನಗಳು ಗಾಳಿ ಮಳೆಗೆ ನಾಶವಾಗುತ್ತಿವೆ. ಇವನ್ನು ಸಂರಕ್ಷಿಸಬೇಕಾದುದು ಇಂದಿನ ಅಗತ್ಯತೆಯಾಗಿದೆ.

ಒಟ್ಟಾಗಿ ಇಂದು ಪುಟ್ಟ ಹಳ್ಳಿಯಂತೆ ಕಾಣುವ ಬಳ್ಪದ (ದಿ. ಗುರುರಾಜ ಭಟ್‌ರ ಪ್ರಕಾರ ಅಡ್ಡ ಬಲಿಪ[ಹುಲಿ]ಗಳಿದ್ದ ಸ್ಥಳ) ಖ್ಯಾತಿಯು ಬಹು ಹಿಂದೆ ದೂರದ ವಿಜಯನಗರದರಸ ಇತಿಹಾಸ ಪ್ರಸಿದ್ಧನಾದ ಅಳಿಯ ರಾಮರಾಯನಿಗೂ ತಲುಪಿತ್ತು ಎನ್ನಬಹುದು.

ಚಂದ್ರಶೇಖರ ಮಂಡೆಕೋಲು.

ಮಹಾನದಿ ನದಿಯ ಉದ್ದ 858 ಕಿ. ಮೀ.

## ಪ್ರೊಫೆಸರ್‌ದ್ ಲಾಜಿಕ್ :

ಒಂದ್ ಸಲ ಕಾಲೇಜ್‌ಲಿ ಫಿಲಾಸಫಿ ಕ್ಲಾಸ್ ನಡಿಯುತ್ತಿತ್ತ್. ಪ್ರೊಫೆಸರ್‌ಕೇಶವ ಭಟ್ಟ ದೇವರ ಅಸ್ತಿತ್ವದಬಗ್ಗೆ ಸೀರಿಯಸ್ ಆಗಿ ಚರ್ಚೆ ನಡಿಸ್ತಾ ಇತ್ತ್. ಪ್ರೊಫೆಸರ್ ದೇವ್ರ್ ಇಲ್ಲೆತಾ ಸಾಧಿಸಿಕೆ ಟ್ರೈ ಮಾಡ್ತಾ ಇತ್ತ್. ಹೈದಂಗ ಒಪ್ಪ್‌ತಿಲ್ಲೆ. ಪಿರಿಯಡ್ ಮುಗೀತಾ ಬಂದ್ರೂನೂ ತರ್ಕ ಮುಗ್ದಿತ್ಲೆ. ಆಗ ಪ್ರೊಫೆಸರ್‌ಗೆ ಸಡನ್ ಆಗಿ ಒಂದ್ ಐಡಿಯಾ ಹೊಳ್ತ್. "ಈ ಕ್ಲಾಸ್‌ಲಿ ಯಾವನಾದ್ರ್ ದೇವರ್ನ ನೋಡಿಯೊಳ್ರಾ?" ತ ಅಂವ ಕೇಳ್ತ್. ಯಾರೂ ಮಾತಾಡ್ತೆ.

"ಯಾರಾದ್ರ್ ಒಬ್ಬ ದೇವ್ರ್ ಮಾತಾಡ್ದನ್ನ ಕೇಳಿಯೊಳ್ರಾ?" ಮತ್ತೆ ನಿಶ್ಯಬ್ಧ.

"ಯಾರಾದ್ರ್ ಒಬ್ಬ ದೇವರ್ನ ಮುಟ್ಟಿಯೊಳ್ರಾ?" ಮೂರ್ನೆ ಸಲ ಯಾರೂ ಮಾತಾಡದೇ ಇರ್ಕನ ಪ್ರೊಫೆಸರ್ ಹೊಟ್ಟೆ ಸವರಿಕಂಡ್ "ಹಿ..... ಹಿ.... ಅದಿಕ್ಕೇ ದೇವರ್ ಇಲ್ಲೆತ ನಾನ್ ಸಾಧಿಸಿನೆ" ತ್ಹೇಳಿ ಮುಗ್ಸಿ, ಗೆದ್ದವನಂಗೆ ಮೋರೆ ಹಾಕಿಕಂಡ್ ಪೋಸ್ ಕೊಟ್ಟತ್.

ಅಷ್ಟರ್ಲಿ ಒಂದ್ ಹೈದ ಎದ್ದ್‌ನಿತ್ತ್ ಮಾತಾಡಿಕೆ permission ಕೇಳ್ತ್. ಪ್ರೊಫೆಸರ್ "yes" ತೇಳಿ ತಲೆ ಆಡ್ಸಿತ್.

"ಫ್ರೆಂಡ್ಸ್ ನೀವ್ ಯಾರಾದ್ರ್ ಪ್ರೊಫೆಸರ್‌ದ್ ಬ್ರೈನ್‌ನ ನೋಡಿಯೊಳ್ರಾ?" ಯಾರೂ ಮಾತಾಡ್ತೆ.

"ಯಾರಾದ್ರ್ ಪ್ರೊಫೆಸರ್‌ದ್ ಬ್ರೈನ್‌ನ ಮುಟ್ಟಿಯೊಳ್ರಾ?" ನಿಶ್ಯಬ್ಧ.

"ಯಾರಾದ್ರ್ ಪ್ರೊಫೆಸರ್‌ದ್ ಬ್ರೈನ್ ಮಾತಾಡ್ದನ್ನ ಕೇಳಿಯೊಳ್ರಾ?" ಇಷ್ಟೊತ್ತಿಗೆ ಕುದ್ದ ಮಕ್ಕ ಕಷ್ಟಲಿ ನಗೆ ತಡ್ಕಂಡ್ ಪ್ರೊಫೆಸರ್‌ದ್ ಮೋರೆನ ನೋಡಿಕಂಡ್ ಹಲ್ಲ್ ಬಿರಿಯಕೆ ಶುರು ಮಾಡ್ವೊ. ಯಾರೂ ಮಾತಾಡದೆ ಇರ್ಕನ ಹೈದ ಹೇಳ್ತ್, "ಅದಿಕ್ಕೆ ಪ್ರೊಫೆಸರ್‌ದ್ ಲಾಜಿಕ್ ಪ್ರಕಾರ ಅವ್ಕೆ ಬ್ರೈನ್ ಇಲ್ಲೇತೇಳಿ ಸಾಧಿಸಕಲೆ !"

(ಆ ಸ್ಟುಡೆಂಟ್‌ಗೆ ತರ್ಕಶಾಸ್ತ್ರಲಿ highest Marks ಸಿಕ್ಕಿತ್ ಗಡ)

**ಎಡಿಕೇರಿ ಸುದರ್ಶನ್, ಬೆಂಗಳೂರು.**

---

## ವನಿತಾ ಲೋಕ : ಗೃಹ ಸಂಗಾತಿ

### ಟೊಮೆಟೊ ಸಾಸ್ ನಂ. 1

**ಬೇಕಾಗುವ ಸಾಮಾನು :** 10 ಗಾತ್ರದ ಟೊಮೆಟೊ, ½ ಟೀ ಚ. ಮೆಣಸಿನ ಪುಡಿ, 1 ಟೀ ಚ. ಸಕ್ಕರೆ, ½ ನಿಂಬೆಹಣ್ಣು, ರುಚಿಗೆ ಬೇಕಾಗುವಷ್ಟು ಉಪ್ಪು.

**ವಿಧಾನ :** ಟೊಮೆಟೊಗಳನ್ನು ತೊಳೆದು ಹಬೆಯ ಮೇಲಿಟ್ಟು ಬೇಯಿಸಿ. ತಣಿದ ನಂತರ ಸಿಪ್ಪೆ ತೆಗೆದು ಹಾಕಿ ಮಿಕ್ಸರಿನಲ್ಲಿ ನುಣ್ಣಗೆ ರುಬ್ಬಿ, ಆಮೇಲೆ ಪಾತ್ರೆಗೆ ಹಾಕಿ. ಉಪ್ಪು, ಸಕ್ಕರೆ, ಮೆಣಸಿನ ಪುಡಿ, ನಿಂಬೆರಸ ಅವನ್ನೆಲ್ಲಾ ಬೆರಸಿರಿ, ಒಲೆಯ ಮೇಲಿಟ್ಟು ತುಸು ಗಟ್ಟಿಯಾಗುವವರೆಗೆ ಕೈ ಬಿಡದೆ ಮಗುಚಿ ಕೆಳಗಿಳಿಸಿ, ಬ್ರೆಡ್ ದೋಸೆ, ಕಟ್ಲೆಟ್ ಇತ್ಯಾದಿಗಳ ಜೊತೆಗೆ ಇದನ್ನು ತಿನ್ನಬಹುದು

### ಟೊಮೆಟೊ ಸಾಸ್ ನಂ. 2

**ಬೇಕಾಗುವ ಸಾಮಾನು :** 1 ಕಿ. ಗ್ರಾಂ. ಗಾತ್ರದ ಟೊಮೆಟೊ, (ಸಿಪ್ಪೆ ಸುಲಿದು ಕತ್ತರಿಸಿ ಹೋಳು ಮಾಡಿದ್ದು) 2 ಈರುಳ್ಳಿ (ನುಣ್ಣಗೆ ಹೆಚ್ಚಿ), ½ ಕಪ್ ಸಕ್ಕರೆ, ½ ಪಾಯ್ಟ್ ಸಿರ್ಕ (ವಿನೆಗರ್), 1 ಊ. ಚ. ಮಸಾಲೆಯ ಜೀನಸುಗಳು, 3 ಲವಂಗ, 1 ಟೀ ಚ. ಕರಿಮೆಣಸಿನ ಕಾಳು, 1 ಟೀ ಚ. ಉಪ್ಪು, 1 ಊ. ಚ. ಧಾನ್ಯದ ಹಿಟ್ಟು.

**ವಿಧಾನ :** ಮಸಾಲೆಯ ಜೀನಸುಗಳನ್ನು ಒಂದು ಬಟ್ಟೆಯೊಳಗೆ ಹಾಕಿ ಕಟ್ಟಿ ಇಟ್ಟುಕೊಳ್ಳಿ. ಧಾನ್ಯದ ಹಿಟ್ಟನ್ನು ಸ್ವಲ್ಪ ಸಿರ್ಕದೊಡನೆ (ವಿನೆಗರ್) ಸೇರಿಸಿ ಮಿಶ್ರ ಮಾಡಿ, ಎಲ್ಲಾ ಜೀನಸುಗಳನ್ನು ಮತ್ತು ಮಸಾಲೆಯನ್ನು ಕಟ್ಟಿಟ್ಟ ಬಟ್ಟೆ ಸಹಿತ ಒಂದು ಪಾತ್ರೆಯಲ್ಲಿ ಹಾಕಿ ಸೌಮ್ಯವಾದ ಉರಿಯ ಮೇಲೆ ಕುದಿಸಿ ಈಗ ಉರಿಯನ್ನು ತಗ್ಗಿಸಿ ತಾಸಿನ ಕಾಲ ನಿಧಾನವಾಗಿ ಬೇಯಿಸಿ, ಆಮೇಲೆ ಅದರೊಳಗಿಂದ ಮಸಾಲೆ ಜೀನಸುಗಳ ಬಟ್ಟೆಯ ಬಟ್ಟೆಯ ಕಟ್ಟನ್ನು ಹೊರತೆಗೆದು ಈಗ ಸಾಸ್ ರಸವನ್ನು ಸೋಸಿ ತಣ್ಣಗಾದ ನಂತರ ಬಾಟಲಿಯೊಳಗೆ ಹಾಕಿ ಇಟ್ಟುಕೊಳ್ಳಿ.

### ವೆನಿಲ್ಲಾ ಸಾಸ್

**ಬೇಕಾಗುವ ಸಾಮಾನು :** 500 ಗ್ರಾಂ. ಸಕ್ಕರೆ, 75 ಗ್ರಾಂ. ಧಾನ್ಯದ ಹಿಟ್ಟು, ½ ಟೀ ಚ. ಉಪ್ಪು, 1¾ ಲೀ. ಕುದಿಯುವ ನೀರು, 2 ಊ. ಚ. ವೆನಿಲ್ಲಾ, 2 ಊ. ಚ. ಬೆಣ್ಣೆ.

**ವಿಧಾನ :** ಸಕ್ಕರೆ, ಧಾನ್ಯದ ಹಿಟ್ಟು ಮತ್ತು ಉಪ್ಪು ಇವುಗಳನ್ನು ಒಟ್ಟಿಗೆ ಸೇರಿಸಿ ಮಿಶ್ರಮಾಡಿ, ಅದಕ್ಕೆ ಕುದಿಯುವ ನೀರು ಸೇರಿಸಿ ಅದು ಸ್ವಚ್ಛವಾಗುವ ತನಕ ಬೇಯಿಸಿ. ಈ ವೆನಿಲ್ಲಾ ಮತ್ತು ಬೆಣ್ಣೆ ಸೇರಿಸಿ ಬಿಸಿಯಿರುವಾಗಲೇ ಬಡಿಸಿ.

### ವಿನೈಗ್ರೆಟ್ ಸಾಸ್

**ಬೇಕಾಗುವ ಸಾಮಾನು :** 2 ಊ. ಚ. ನಿರ್ಕ, 4 ಊ. ಚ. ಓಲಿವ್ ಎಣ್ಣೆ ಅಥವಾ ಸಲಾದ್ ಎಣ್ಣೆ, 1 ನಿಂಬೆರಸ, 1 ಟೀ. ಚ. ಪುಡಿ ಮಾಡಿದ ಸಕ್ಕರೆ, ರುಚಿಗೆ ಬೇಕಾಗುವಷ್ಟು ಉಪ್ಪು.

**ವಿಧಾನ :** ಮೇಲೆ ಹೇಳಿದ ಎಲ್ಲಾ ಸಾಮಾನುಗಳನ್ನು ಒಟ್ಟಿಗೆ ಸೇರಿಸಿ ಬೆರಸಿ ಜಾಡಿಯೊಳಗೆ ಅಥವಾ ಗಾಜಿನ ಬಾಟಲಿಯೊಳಗೆ ಹಾಕಿ ಗಾಳಿ ತೂರದಂತೆ ಮುಚ್ಚಳವಿಟ್ಟು ಫ್ರಿಡ್ಜ್‌ನೊಳಗೆ ಇಟ್ಟುಕೊಳ್ಳಿ, ಉಪಯೋಗಿಸಲಿಕ್ಕೆ ಬೇಕಾಗುವಾಗ ಈ ಮಿಶ್ರಣವನ್ನು ಚೆನ್ನಾಗಿ ಕುಲುಕಿಸಬೇಕು.

# ರಾಷ್ಟ್ರಮಟ್ಟದ ಕ್ರೀಡಾಳು ಮದೆಯ ತ್ಯಾಗರಾಜೇಂದ್ರ

ಮದೆನಾಡಿನ ಹುದೇರಿ ರಾಜೇಂದ್ರನವರ ಮಕ್ಕಳಾದ ಕುಮಾರ ತ್ಯಾಗ ಮತ್ತು ಕುಮಾರಿ ಗಾನ ಇಬ್ಬರೂ ಕ್ರೀಡಾ ಪಟುಗಳೇ. ಅಣ್ಣ-ತಂಗಿ ಹಲವಾರು ಸ್ಪರ್ಧೆಗಳಲ್ಲಿ ಬಹುಮಾನಿತರಾಗಿ ಅವರ ಮನೆಯ ಕಪಾಟಿನ ತುಂಬಾ ಬಹುಮಾನಗಳನ್ನು ತುಂಬಿದ್ದಾರೆ. ಗಾನ ಕೆಸರು ಗದ್ದೆ ಓಟಗಾರ್ತಿ. ಅಲ್ಲದೆ ಬಾಸ್ಕೆಟ್ ಬಾಲ್ ಆಟಗಾರ್ತಿ. ಈಕೆ ಮಂಗಳೂರಿನಲ್ಲಿ ದ್ವಿತೀಯ ಬಿ.ಎ. ತರಗತಿಯ ವಿದ್ಯಾರ್ಥಿನಿ.

ಅಣ್ಣ ತ್ಯಾಗ ಕೆಸರುಗದ್ದೆ ಓಟದ ರಾಜ! ಕೊಡಗಿನ ಕಗ್ಗೋಡ್ಲುವಿನ ರಾಜ್ಯಮಟ್ಟದ ಕೆಸರುಗದ್ದೆ ಓಟದಲ್ಲಿ ಸತತವಾಗಿ ನಾಲ್ಕು ಬಾರಿ ಪ್ರಥಮ ಸ್ಥಾನ ಗಳಿಸಿ ಕೊಡಗಿಗೆ ಗರಿ ಮೂಡಿಸಿದಾತ. ಈತ ಬೆಂಗಳೂರಿನ ಕೃಷಿ ವಿ.ವಿ.ಯ ಬಿ.ಎಸ್.ಸಿ.ಯ 5ನೇ ಸೆಮಿಸ್ಟರ್‌ನ ವಿದ್ಯಾರ್ಥಿ.

ನವೆಂಬರ್ ತಿಂಗಳ ಕೊನೇ ವಾರದಲ್ಲಿ ಹೈದರಾಬಾದ್‌ನಲ್ಲಿ ನಡೆದ ಅಂತರ ವಿ.ವಿ.ಯ ರಾಷ್ಟ್ರಮಟ್ಟದ ನಾಲ್ಕುನೂರು ಮಿ. ಓಟದಲ್ಲಿ ಪ್ರಥಮ ಸ್ಥಾನ ಹಾಗೂ ಇನ್ನೂರು ಮಿ. ಓಟದಲ್ಲಿ ದ್ವಿತೀಯ ಸ್ಥಾನ ಪಡೆದ ಕನ್ನಡ ನಾಡಿನ ಹೆಮ್ಮೆಯ ಕುವರ. ಚಿನ್ನ ಹಾಗೂ ಬೆಳ್ಳಿ ಪದಕವನ್ನು ಕೊರಳಲ್ಲಿ ಧರಿಸಿ ಕೊಡಗಿನ ಕೀರ್ತಿಯನ್ನು ಬೆಳಗಿದ ತ್ಯಾಗನಿಗೆ ಕೊಡಗಿನ ಜನತೆಯ ಅಭಿನಂದನೆಗಳು.

ಬಿ. ಆರ್. ಜೋಯಪ್ಪ, ಮದೆ.

---

3ನೇ ಪುಟದಿಂದ

ಸ್ಪೇನ್‌ನ ಲಿಯೋನ್‌ನಲ್ಲಿ ನಡೆದಿದ್ದವು. 1999ರಲ್ಲಿ ಆನಂದ್ ಕಾರ್ಪೋವ್‌ರನ್ನು 5-1ರಿಂದ ಹಾಗೂ 2000ದಲ್ಲಿ ಜುಡಿತ್ ಪೋಲ್ಗರ್ ಮತ್ತು ಅಲೆಕ್ಸ್ ಶಿರೋವ್ ಅವರನ್ನು ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿದ್ದರು.

**ಐತಿಹಾಸಿಕ ಸಾಧನೆ : ನಾರಾಯಣನ್**

ವಿಶ್ವನಾಥನ್ ಆನಂದ್ ವಿಶ್ವ ಚೆಸ್ ಪ್ರಶಸ್ತಿ ಗೆದ್ದುಕೊಂಡಿರುವುದು ಐತಿಹಾಸಿಕ ಸಾಧನೆ ಎಂದು ರಾಷ್ಟ್ರಪತಿ ಕೆ. ಆರ್. ನಾರಾಯಣನ್ ಬಣ್ಣಿಸಿದ್ದಾರೆ.

ಇಡೀ ರಾಷ್ಟ್ರವೇ ಹೆಮ್ಮೆ ಪಡುವಂತಹ ಸಾಧನೆಯನ್ನು ಆನಂದ್ ಮಾಡಿದ್ದಾರೆ. ಇದು ಐತಿಹಾಸಿಕ ಮತ್ತು ಬಣ್ಣಿಸಲು ಅಸಾಧ್ಯವಾದ ಸಾಧನೆ. ಇದೇ ರೀತಿಯ ಸಾಧನೆಯನ್ನು ಆನಂದ್ ಮುಂದುವರಿಸಲಿ ಎಂದು ನಾರಾಯಣನ್ ತಮ್ಮ ಅಭಿನಂದನಾ ಸಂದೇಶದಲ್ಲಿ ಹಾರೈಸಿದ್ದಾರೆ.

**ಹೆಮ್ಮೆ ಪಡುವಂತೆ ಮಾಡಿದ್ದಾರೆ : ವಾಜಪೇಯಿ**

ವಿಶ್ವ ಚೆಸ್ ಚಾಂಪಿಯನ್ ಪ್ರಶಸ್ತಿ ಗೆದ್ದುಕೊಂಡಿರುವ ವಿಶ್ವನಾಥನ್ ಆನಂದ್ ಅವರನ್ನು ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅಭಿನಂದಿಸಿದ್ದು, ದೇಶ ಹೆಮ್ಮೆ ಪಡುವಂತ ಸಾಧನೆಯನ್ನು ಅವರು ಮಾಡಿದ್ದಾರೆ ಎಂದು ಹೊಗಳಿದ್ದಾರೆ.

**ಆನಂದ್‌ಗೆ ಸನ್ಮಾನ**

**ಚೆನ್ನೈ ವರದಿ :** ವಿಶ್ವ ಚಾಂಪಿಯನ್ ಆಗಿ ಮೂಡಿ ಬಂದ ಏಷ್ಯಾದ ಮೊದಲ ಚೆಸ್ ಪಟು ವಿಶ್ವನಾಥನ್ ಆನಂದ್ ಅವರನ್ನು ತಮಿಳುನಾಡು ಸರಕಾರ ಶೀಘ್ರದಲ್ಲಿಯೇ ಸನ್ಮಾನಿಸಲಿದೆ. ಪ್ರಸ್ತುತ ಟೆಹರಾನ್‌ನಲ್ಲಿರುವ ಆನಂದ್ ಅವರೊಂದಿಗೆ ದೂರವಾಣಿ ಮೂಲಕ ಸಂಭಾಷಣೆ ನಡೆಸಿದ ತಮಿಳುನಾಡು ಮುಖ್ಯಮಂತ್ರಿ ಎಂ. ಕರುಣಾನಿಧಿ ಅವರು ಅಭಿನಂದನೆ ಸಲ್ಲಿಸಿದರು.

---

## ರೂಬ್ - ರೂಬ್

**ಸಂಧ್ಯಾ ಪಿ. ವಿ., ಪುತ್ತೂರು**

ಪ್ರ : ಸಂಗಾತಿಯು ಕೇವಲ ಸರಳ ವಿಷಯಗಳಿಗೆ ಮಹತ್ವ ನೀಡದೆ ಕೆಲವು ಸ್ವಾರಸ್ಯಕರವಾದ ಬರಹ, ಕಥೆ, ಕವನಗಳನ್ನು ಆಯ್ದು ಪ್ರಕಟಿಸಿ ಪುಟಗಳ ಸಂಖ್ಯೆಯನ್ನು ಹೆಚ್ಚಿಸಲು ಸಾಧ್ಯವಿಲ್ಲವೆ?

ಉ : ಸ್ವಾರಸ್ಯಕರವಾದ ಚಿಂತಿತ, ವಿಮರ್ಶಿತ ಮತ್ತು ಜನಾಂಗಕ್ಕೆ ಸಂಬಂಧಿಸಿದ ಲೇಖನಗಳಿಗೆ ಖಂಡಿತ ಹೆಚ್ಚು ಒತ್ತು ಕೊಡುತ್ತೇವೆ. ಹಾಗೆಯೇ ಪುಟಗಳ ಹೆಚ್ಚಿಸುವಿಕೆಗೆ ಖರ್ಚಿನ ಬಗ್ಗೆ ಸಹ ಗಮನ ಹರಿಸುವುದಲ್ಲದೆ ಚಂದದಾರರ ನವೀಕರಣ ಬಗ್ಗೆ ಸಹ ಚಿಂತಿಸಬೇಕಾಗಿದೆ.

**ಬಾಚರಣಿಯಂಡ ಅಪ್ಪಣ್ಣ, ಕುಶಾಲನಗರ**

ಪ್ರ : ಪುಸ್ತಕನ ನೀವು ಹೇಗೆ ನಿಭಾಯಿಸಿರೆ?

20ನೇ ಪುಟಕ್ಕೆ

## ಪ್ರಸಾದ

ಪ್ರಸಾದವು ದೇವರ ಕರುಣೆ
ಪ್ರಸಾದವು ಆತ್ಮಶುದ್ಧಿಯಸಾಧನ
ಶಾಂತಿಯನ್ನು ಯಾವುದು ಕೊಡುವುದೋ ಅದೇ ಪ್ರಸಾದ
ಪ್ರಸಾದವು ಆಧ್ಯಾತ್ಮಿಕತೆ ಹಾಗೂ ದೀರ್ಘಾಯಸ್ಸು ನೀಡುತ್ತದೆ.
ಕುಂಕುಮವು ಶಕ್ತಿ ದೇವತೆಯ ಪ್ರಸಾದ
ವಿಭೂತಿಯು ಶಿವನ ಪ್ರಸಾದ
ತುಳಸಿಯು ವಿಷ್ಣುವಿನ ಪ್ರಸಾದ
ಇಂತ ಪ್ರಸಾದ ರೂಪವಾದ ವಸ್ತುಗಳನ್ನು ಎಲ್ಲ ಕಾರ್ಯಕ್ರಮಗಳಲ್ಲಿ ಕೊಡುತ್ತಾರೆ.
ಪ್ರಸಾದವನ್ನು ತುಂಬಾ ಶ್ರದ್ಧೆ ಹಾಗೂ ನಂಬಿಕೆಯಿಂದ ಸ್ವೀಕರಿಸಬೇಕು.
ಶ್ರದ್ಧಾವಂತ ಸಾಧಕನಿಗೆ ಪ್ರಸಾದದಿಂದ ಚಮತ್ಕಾರಿಕವಾದ ಅನುಭವ ಸಿದ್ಧಿಸುತ್ತದೆ

ಕುಯ್ಯಮುಡಿ ರಾಮಪ್ಪ, ಮೈಸೂರು

# "ತಲೆ ಕೆಳಗಾದ ಕೋವಿ"

– ಬಾರಿಯಂಡ ಜೋಯಪ್ಪ

ಬಿಸಿಲ ಝಳಕ್ಕೆ ಬಣಗುಡುತ್ತಿದ್ದ ನೆಲ ಮುಂಗಾರಿನ ಮಳೆಗೆ ತಂಪಾಗುತ್ತಿದೆ. ನೆಲದಿಂದ ಗರಿಕೆ ಮೂಡುತ್ತಾ ಹಸಿರಾಡುತ್ತಿದೆ. ಮರಗಿಡಗಳಿಂದ ಚಿಗುರು ಇಣುಕುತ್ತಿದೆ. ಗೊಟ್ಟೆಹಣ್ಣು ಗೊಂಚಲು ಗೊಂಚಲಾಗಿ ಮೈದುಂಬಿ ಹಾರುವ ಹಕ್ಕಿಗಳನ್ನು ಕರೆಯುತ್ತಿದೆ. ಜೇನು ನೊಣಗಳು ಮತ್ತಿ ಮರದ ಹೂವಿನ ಮೇಲೆ ಹಾರಾಡುತ್ತಿವೆ. ಇಂಥ ಕಾಡಿನ ನಡುವೆ ಬೋಪಯ್ಯನ ಮನೆ.

ಆ ಮನೆಯಲ್ಲಿ ವಾರಕ್ಕೊಮ್ಮೆ ಕಾಡುಪ್ರಾಣಿಯ ಮಾಂಸ ತಪ್ಪುವುದಿಲ್ಲ. ಬೇಟೆಗಾರ ಬೋಪಯ್ಯನ ಬೇಟೆಯ ಚೂಲು ಅಂಥದು. ಅವನ ನಳಿಕೆಯ ಕೋವಿಯ ಒಂದೇ ಗುಂಡಿಗೆ ಎರಡು ಹಂದಿಗಳು ಬೀಳಬಹುದೇ ಹೊರತು ಅದರ ಗುಂಡು ಗುರಿ ತಪ್ಪಿದ್ದು ಎಂದೂ ಇಲ್ಲ. ಅವನು ಅಪ್ಪಿ ತಪ್ಪಿಯೂ ಬೇರೆಯವರೊಂದಿಗೆ ಬೇಟೆಗೆ ಹೋಗಲಾರ. ಒಬ್ಬನೇ ಬೇಟೆಗೆ ಹೋಗಿ ಹಂದಿಯೋ ಕಡವೆಯೋ ಸಿಕ್ಕರೆ ಕೆಡವಿ, ಮನೆಗೆ ಬಂದು ಹೆಂಡತಿಯನ್ನು ಕರೆದೊಯ್ಯುತ್ತಿದ್ದ. ಇಬ್ಬರೂ ಬಂದು ತಾವು ಹೊರಬಹುದಾದಷ್ಟು ಮಾಂಸವನ್ನು ಮಾತ್ರ ಹೊತ್ತು ತರುತ್ತಿದ್ದರು. ಉಳಿದದ್ದು ಅಲ್ಲೇ ಕೊಳೆತು ಹೋಗುತ್ತಿತ್ತು.

ಆ ಮಳೆ ಬಿದ್ದ ರಾತ್ರಿಯ ಮಾರನೆಯ ಬೆಳಿಗ್ಗೆ ಬಿಸಿ ಕಾಫಿಯನ್ನು ಏರಿಸುತ್ತಾ ಇವತ್ತು ಒಂದು ಕಡವೆಯನ್ನು ಪಲ್ಟಿ ಮಾಡುತ್ತೇನೆ ಎಂದು ಆ ಕಪ್ಪು ದೊಗಳೆ ಪ್ಯಾಂಟಿನ ಜೇಬೊಳಗೆ ನಾಲ್ಕೈದು ತೋಟಾಗಳನ್ನು ಇಳಿಬಿಟ್ಟು, ಆ ದದ್ದು ಖಾಕಿ ಷರಟಿನೊಳಗೆ ಒಂದು ಚಾಕನ್ನು ಕೂರಿಸಿಕೊಂಡು, ತನ್ನ ಆ ಜತೆಗಾರ ಕೋವಿಯನ್ನು ಹೆಗಲ ಮೇಲಿರಿಸಿ, ಅಂಗಳದಲ್ಲಿ ನಿಂತು ಸುತ್ತಲೂ ನೋಡಿದ. ಆ ಹೊತ್ತಿನಲ್ಲಿ ಅವರ ಎರಡು ಮಕ್ಕಳೂ ಹೊದಿಕೆಯೊಳಗೆ ಸುರಟಿ ಮಲಗಿದ್ದರು.

ಬೇಟೆಗಾರ ಬೋಪಯ್ಯ ಕಾಡು ಹಾದಿಯ ಹಿಡಿದು ನಡೆದ. ಹಿಂದಿನ ರಾತ್ರಿಯ ಮಳೆಗೆ ಕಾಡಿನ ತರಗೆಲ್ಲ ಮೆತ್ತಗಾಗಿ ಎಲ್ಲಿ ನೆಡೆದಾಡಿದಾರೂ ಕಾಲ ಸಪ್ಪಳ ಏಳುವುದಿಲ್ಲ. ಆ ಕಾಡೊಳಗೆ ನೆಲ ನೋಡುತ್ತಾ ಅದರೊಳಗೆ ಕಾಡು ಪ್ರಾಣಿಯ ಹೆಜ್ಜೆಗಳ ಹುಡುಕುತ್ತಾ ಬೋಪಯ್ಯ ಬಹು ದೂರ ಸಾಗಿದ್ದಾನೆ. ಒಂದು ಹಂದಿ 'ಗೊಗ್' ಎಂದು ಜಿಗಿಯಿತು. ಅದರತ್ತ ಕೋವಿಯನ್ನು ನೀಡುವಷ್ಟರಲ್ಲಿ ಅದು ಕಣ್ಮರೆಯಾಯಿತು. "ತಥ್ ಇದರ ಮನೆ ಹಾಳಾಗ!". ಇನ್ನೂ ಮುಂದೆ ಹೋದ. ತಡಸಲ ಮರದ ಬುಡದಲ್ಲಿ ನಿಂತ. ಸುತ್ತಾ ಒಂದು ಕಳ್ಳ ನೋಟ ಹಾಕಿದ. ಎರಡು ಕೋಳಿಗಳು ನಡುವೆ ಒಂದೊಂದು ಮಾರು ದೂರ ಬಿಟ್ಟುಕೊಂಡು ಈ ಕಡೆಗೇ ಬರುತ್ತಿವೆ. ಎರಡೂ ಒಟ್ಟಿಗಿರಬಾರದಿತ್ತಾ? ಒಂದೇ ಈಡಿಗೆ ಎರಡು ಕೋಳಿ ಹೊಡೆಯಬಹುದಿತ್ತಲ್ಲಾ! ಎಂದು ಕೊಳ್ಳುತ್ತಾ ಮಿಸುಕದೆ ಕೂತ. ಕೈಮೇಲೆ ಕೂತ ಸೊಳ್ಳೆ ರಕ್ತ ಹೀರಿ ಆ ಕೈಮೇಲೆ ಮಾಗಿದ ಹಣ್ಣಿನಂತಾದವು. ಹಾರಲಾರದೆ ಹಾರಿ ಪಕ್ಕದ ಎಲೆ ಮೇಲಕ್ಕೆ ಹೋದವು. ಇದ್ದಕ್ಕಿದ ಹಾಗೆ ಎಲ್ಲೋ ಹುಂಜ ಕೂಗಿತು. "ಕ್ಕೆಕ್ಕೆಕೆಕೆ" ಎನ್ನುತ್ತಾ ಕೋಳಿಗಳು ಹಾರಿ ಹೋದವು. ದರಿದ್ರ ಕೋಳಿಗಳಿಗೇನು ಬಂತು ಕೇಡು! ಸೊಳ್ಳೆ ಆಗ ಕಡಿದ ಜಾಗವನ್ನು ಈಗ ಪರಪರನೆ ಕೆರೆದುಕೊಂಡು ಬೋಪಯ್ಯ ಎದ್ದು ನಿಂತ.

ಮುಂದೆ ಹೋದ. ಬಲಕ್ಕೆ ತಿರುಗಿದ. ಮುಂದೆ ಸಣ್ಣ ಬಯಲು. ಬಯಲಿನ ಆಚೆ ಒಂದು ಕುಂಬಳ ಮರ. ಅದರ ಒಂದು ಕೊಂಬೆ ಆ ಬಯಲಿಗೆ ಬಾಗಿ ಅದರ ಹಳದಿ ಹೂಗಳು ಚಿಗುರಿದ ಗರಿಕೆಯ ಮೇಲೆ ಹರಡಿವೆ ಆ ಹೂಗಳ ತಿನ್ನಲು ಯಾವುದಾದರೂ ಪ್ರಾಣಿ ಬಂದೀತು ಎಂದು ಲೆಕ್ಕ ಹಾಕಿ ಆ ಬಯಲಿನ ಒತ್ತಿನಲ್ಲಿರುವ ಪೊದೆಯ ಮರೆಯಲ್ಲಿ ಬೋಪಯ್ಯ ಕುಳಿತುಕೊಂಡ.

'ದಡಕ್'

ಏನೋ ಓಡಿ ಬಂದು ನಿಂತ ಹಾಗೆ. ಅಪಾಯದ ಸಮಯದಲ್ಲಿ ಮಾತ್ರ ಹಾಗೆ ಕೂಗುತ್ತ ಹಾರುವ ಗುಗ್ಗಲ ಹಕ್ಕಿಗಳು ಅಂಥ ಧ್ವನಿ ಮಾಡಿ ಹಾರಿದುವು. ಏನಿರಬಹುದು? ಖಂಡಿತ ಯಾವುದೋ ಮೃಗ. ಬೋಪಯ್ಯನ ಶರೀರವಿಡೀ ಕಿವಿಗಳಾದವು. ಕಣ್ಣುಗಳಾದವು. ಓ! ಅದು ಜಿಂಕೆ. ಬೇಟೆ ಸಿಕ್ಕಿತಲ್ಲಾ ಎಂದು ಅಂಗೈಯಲ್ಲಿ ಕೋವಿಯ ಪಾತಿಯನ್ನು ಹಿಡಿದು, ಎದೆಗೆ ಕೋವಿಯ ಚಟ್ಟೆಯನ್ನು ಒತ್ತಿಕೊಂಡು ಬೇಟೆ ಕೊತ್ತಿಯನ್ನುಎಳೆದು ನಿಲ್ಲಿಸಿ ಬಲಗೈಯ ತೋರುಬೆರಳನ್ನು 'ಟ್ರಿಗರು' ಒತ್ತಲು ನಿಲ್ಲಿಸಿ, ಇನ್ನೇನು ಗುಂಡು ಹಾರಿಸಬೇಕು ಅಷ್ಟರಲ್ಲಿ ಬೋಪಯ್ಯನ ಯೋಚನೆ ಬದಲಾಯಿತು, ಎದುರಿಗಿರುವುದು ಜಿಂಕೆಯ ಮರಿ. ಅದರತಾಯಿ ಅಲ್ಲೆ ಎಲ್ಲೊ ಇರಬೇಕಲ್ಲ? ಅದು ಈ ಮರಿಯ ಜತೆ ಸೇರಬಹುದು. ಇಲ್ಲ ಎಂದರೆ ಕೊನೆ ಪಕ್ಷ ದೂರದಲ್ಲೆ ಮೆಲ್ಲೆ ದಾಟಬಹುದು. ಹಾಗೆಂದು ಕಾದರೆ ಕೋಳಿ ಕೈ ಕೊಟ್ಟ ಹಾಗಾದರೆ ಎಂದು ಅನಿಸಿ ಮತ್ತೆ ಯೋಚನೆ ಬದಲಾಯಿತು.

ಮರಿ ಜಿಂಕೆ ನೆಲ ಮೂಸುತ್ತಿತ್ತು. ಅಪಾಯ ತಿಳಿಯದೆ ಹಾಗೆ ಒಂದೆರಡು ಹೆಜ್ಜೆ ಮುಂದಕ್ಕೆ ಬಂತು. ತನ್ನ ಮೈಯನ್ನು ನೆಕ್ಕಿಕೊಂಡಿತು. ಮತ್ತೆ ಗರಿಕೆಯನ್ನು ಕಚ್ಚಿತು. ಬೋಪಯ್ಯ ಒಳ್ಳೆಯ ಆಯಕ್ಕೆ ನೋಡಿ, ಕೈಪಾರೆಗೆ ಗುರಿ ಇಟ್ಟು ಗುಂಡು ಹಾರಿಸಿದ. ಆ ಸದ್ದಿಗೆ ನಡುಗುತ್ತಿದ್ದ ಕಾಡೊಳಗೆ ಮರಿ ಜಿಂಕೆ ನೆಲಕ್ಕುರುಳಿತು. ಆ ಮರಿ ಬೀಳುವುದಕ್ಕೂ ತಾಯಿ ಜಿಂಕೆ ಬಯಲಿಗೆ ಬರುವುದಕ್ಕೂ ಸರಿಯಾಯಿತು. ಬೋಪಯ್ಯ ಚುರುಕಿಂದ ಕೋವಿಯನ್ನು ಮುರಿದು ಮತ್ತೊಂದು ತೋಟ ತುಂಬಿ ಆ ಕ್ಷಣದೊಳಗೇ ಮತ್ತೊಂದು ಗುಂಡು ಹಾರಿಸಿದ. ತಾಯಿ ಜಿಂಕೆಯೂ ನೆಲಕ್ಕೆ ಬಿತ್ತು.

ತಾಯಿಗೂ ಮರಿಗೂ ಹತ್ತು ಅಡಿ ದೂರವಿರಬಹುದು. ದಿಬ್ಬದ ಕಡೆ ಮರಿ ಒದ್ದಾಡುತ್ತಿದೆ, ಸತ್ತಿಲ್ಲ.ತಾಯಿ ಜಿಂಕೆಯೂ ಸತ್ತಿಲ್ಲ, ಒದ್ದಾಡುತ್ತಿದೆ. ಸ್ವಲ್ಪ ಹೊತ್ತಿನಲ್ಲಿ ಮರಿ ಜಿಂಕೆಯ ಒದ್ದಾಟವು ನಿಂತು ಹೋಯಿತು. ಆದರೆ ತಾಯಿಜಿಂಕೆಯ ಒದ್ದಟ ನಿಲ್ಲಲಿಲ್ಲ.

20ನೇ ಪುಟಕ್ಕೆ

# ಗೌಡರು ನಡೆದು ಬಂದ ದಾರಿ

ಲೇಖಕರು : ಪ್ರೊ. ಪೂಜಾರಿ ಮೊಣ್ಣಪ್ಪ

ಗೌಡರು ದ್ರಾವಿಡ ಪಂಗಡಕ್ಕೆ ಸೇರಿದವರೆಂಬುದಕ್ಕೆ ಚರಿತ್ರೆಯ ಆಧಾರಗಳಿವೆ. ಇಡ್‌ಗಳ ತಲ್‌ಸ್ಟನ್ ಮತ್ತು ಕೆ.ರಂಗಚಾರಿಯವರು (1997) ಬರೆದ **Castes and Tribes of southern India** ಎಂಬ ಗ್ರಂಥದಲ್ಲಿ ಹೀಗೆ ಬರೆದಿರುತ್ತಾರೆ. **'The Gowda or Goudu are the large caste of canarese cultivators and cattle breads". Gowda and Goudu Mr. H. A Stuart writes or really distincts castes. The former is being canarese and the late uriya. Each name is however spelt in both ways. The names are I presume etymologically the same. The orginaly derived from sanskrit go a cow but Dr. Gutav oppert contands that the root of Gouda is a dravidian word meaning mountain among the canarese in less extent among uriyas. Also the word used in honoric sense a custom which is difficult to account for Dr. Oppert's philosophy is correct. Goudas, Mr. Stuart writes was further also called Haluvokalu Makkalu (Chidrens of Milk class) are very numerically represented in south canara district. They have celebrate caste system of caste Government. In every village there are two heads one the grama gowda and other one village Guthu gowda. Above there Kattemaneyava.**

**ಅನುವಾದ :**

ಗೌಡರು ಅಥವಾ ಗೌಡೂ ತುಂಬಾ ಸಂಖ್ಯೆಯ ಕನ್ನಡ ವ್ಯವಸಾಯಗಾರರು ಹಾಗೂ ಪಶು ಸಂಗೋಪಕರು.ಗೌಡ ಗೌಡೂ ನಿಜವಾಗಿ ಬೇರೆ ಬೇರೆ ಜಾತಿಯವರು. ಗೌಡರು ಕನ್ನಡಿಗರು ಗೌಡೂ ಉರಿಯ ಭಾಷೆಯನ್ನಾಡುವವರು. ಎರಡೂ ಹೆಸರುಗಳನ್ನು ಎರಡೂ ರೀತಿಯಲ್ಲೂ ಉಚ್ಚರಿಸಬಹುದು. ಈ ಎರಡೂ ಹೆಸರುಗಳೂ ಶಬ್ದಗಳ ಅರ್ಥಶಾಸ್ತ್ರದ ಪ್ರಕಾರ ಒಂದೇ ಆಗಿದೆ.

ಸಾಮಾನ್ಯವಾಗಿ ಇವು ಸಂಸ್ಕೃತ ಪದ ಗೋ -ಹಸು ಎಂಬ ಪದದಿಂದ ಬಂದದ್ದು ಎಂಬುದಾಗಿ ಶ್ರೀ ಹೆಚ್. ಸ್ಟುವರ್ಟ್ ಹೇಳುತ್ತಾರೆ. ಆದರೆ ಡಾ. ಗೋಟವ್ ಅಪ್ಪೋರ್ಟರವರ ತತ್ವದಂತೆ ಗೌಡ ಎಂಬುದು ಸರಿಯಾಗಿದೆ. ಸ್ಟೂವರ್ಟ್‌ರವರು ಈ ಗೌಡರನ್ನು ಹಾಲು ಒಕ್ಕಲು ಮಕ್ಕಳು ಎಂಬುದಾಗಿ ಕರೆಯುತ್ತಾರೆ ಎಂದು ಹೇಳುತ್ತಾರೆ.

(ಶೃಂಗೇರಿ ಜಗದ್ಗುರುಗಳು 1913ರಲ್ಲಿ ಕೊಟ್ಟ ನಿರೂಪದಲ್ಲೂ ಹಾಲುವೊಕ್ಕಲು ಮಕ್ಕಳು ಯಾನೆ ಗೌಡರು ಎಂದು ನಿರೂಪಿಸಲಾಗಿದೆ.) ಅಂದರೆ ಹಾಲಿನ ಪಂಗಡದ ಮಕ್ಕಳು ಇವರ ಸಂಖ್ಯೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದೆ. ಪ್ರತಿ ಗ್ರಾಮದಲ್ಲಿ ಇಬ್ಬರು ಮುಖ್ಯಸ್ಥರು ಇರುತ್ತಾರೆ. ಇವರಿಗೆ ಗ್ರಾಮ ಗೌಡ ಮತ್ತು ಗೊತ್ತು ಗೌಡ ಎಂಬುದಾಗಿ ಕರೆಯುತ್ತಾರೆ. ಮಾಗಣನೆಗೆ ಒಬ್ಬ ಮುಖ್ಯಸ್ಥನಿದ್ದು ಅವನನ್ನು ಮಾಗಣೆಗೌಡ ಎಂಬುದಾಗಿ ಕರೆಯುತ್ತಾರೆ. ಅವರ ಮೇಲೆ ಕಟ್ಟೆಮನೆಯವ ಎಂಬುದಾಗಿರುತ್ತದೆ.

ದ್ರಾವಿಡರು ಭರತ ಖಂಡಕ್ಕೆ ಸುಮಾರು 7000 ವರ್ಷದ ಹಿಂದೆ ಬಂದಿರಬಹುದೆಂದು ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ಭೂ ಮಧ್ಯ ಸಮುದ್ರದ ಸುತ್ತ ಮುತ್ತಲಿನ ಜನರಿಗೂ ದ್ರಾವಿಡರಿಗೂ ತುಂಬಾ ಸಾಮ್ಯವಿದೆ ಎಂದು ಯುರೋಪಿಯನ್ ವಿದ್ವಾಂಸರ ಅಭಿಪ್ರಾಯ. ಈ ದ್ರಾವಿಡರಲ್ಲಿ ನಂದಿಧ್ವಜರು, ವೆಳ್ಳರು, ಗೌಡ, ಗೌಳರು, ಹಟ್ಟಿಕಾರರ ಪಂಗಡಕ್ಕೆ ಸೇರಿದವರೆಂದೂ ಇವರಲ್ಲಿ ಕುರು(೦) ಮತ್ತು ತರುವಸರೆಂಬ ಪಂಗಡಕ್ಕೆ ಗೌಡ, ಗೌಳರು ಸೇರಿದ್ದಾರೆಂದು ಹೇಳುತ್ತಾರೆ. ಋಗ್ವೇದ ಹಾಗೂ ಪುರಾಣಗಳಲ್ಲಿ ತರ್ವಸರು ಹೆಸರನ್ನು ಹೇಳುತ್ತಾರೆ.

ಆದ್ದರಿಂದ ಯುರೋಪಿನ ವಿದ್ವಾಂಸರು ಗೌಡಗೌಳರು ದ್ರಾವಿಡ ಜನಾಂಗಕ್ಕೆ ಸೇರಿದವರೆಂದೂ ಇವರು ಹಟ್ಟಿಕಾರ ಪಂಗಡಕ್ಕೆ ಸೇರಿದವರೆಂದು ಹಟ್ಟಿಕಾರರಲ್ಲಿ ವೆಳ್ಳರು, ನಂದಿಧ್ವಜರು ಮೂಲವಂಶಜರು. ಇವರನ್ನು ಪುರಾಣದಲ್ಲಿ ಹಾಗೂ ಋಗ್ ವೇದದಲ್ಲಿ ತರ್ವಸರು ಎಂದು ಕರೆದಿದ್ದಾರೆ ಎಂದು ಇತಿಹಾಸಜ್ಞರು ಹೇಳುತ್ತಾರೆ. ವಸು ಎಂದರೆ ಧನ ಎಂದರ್ಥ. ತರ್ವಿನ ವಸು ಎಂದರೆ ಧನ ಉಳ್ಳ ಜನಾಂಗದವರೆಂದು ಅರ್ಥ. ಹಟ್ಟಿಕಾರರ ಒಂದು ಶಾಖೆ ಗೋವಳರಾಗಿ ದೇಶ ಪೃಥ್ವಿಪಾಲಕರೆಂದು ಹೇಳುತ್ತಾರೆ. ಧನಗಾರಿಕೆ ಯುಗದಲ್ಲಿ ಗೋಪನು ಭೂಪನಾದನು.

ಗೋವನ್ನು ಸಾಕಿ ಹಾಲು ಉತ್ಪಾದಿಸುವುದರಿಂದ ಇವರು ಗೋಪರಾದರು. ಶ್ರೀ ಹೆಚ್. ಎ. ಟ್ರಸ್ಟಿರಿ ಪ್ರಕಾರ ಇವರು ಗೋವಿಗೆ ಸಂಬಂಧ ಇರುವುದರಿಂದ ಗೌಡರಾದರೆಂದು ಆದುದರಿಂದ ಇವರ ಜಾತಿಯ ಹೆಸರು ಹಾಲು ಒಕ್ಕಲು ಮಕ್ಕಳೆಂದಾಯಿತು ಎನ್ನುತ್ತಾರೆ.

ಡಾ. ರಾಮಪ್ರಸಾದ ಚಂದಾರವರ ಅಭಿಪ್ರಾಯದಂತೆ ಯದುತರ್ವಸರು ಭೂಮಧ್ಯ ಸಮುದ್ರದ ಹತ್ತಿರ ಇರುವ ಪ್ರದೇಶದಿಂದ ಭಾರತಕ್ಕೆ ಸಮುದ್ರದ ಮಾರ್ಗವಾಗಿ ಸಿಂಧೂನದೀ ಕಣಿವೆಗೆ ಬಂದು ಹರಪ್ಪಾ ಮತ್ತು ಮಹೆಂಜದಾರೋ ಪ್ರದೇಶದಲ್ಲಿ ಅರೆ ಉನ್ನತ ನಾಗರೀಕತೆಯನ್ನು ಪಡೆದಿದ್ದರೆಂಬುದು ಹೇಳುತ್ತಾರೆ. ಚರಿತ್ರೆ ಪ್ರಸಿದ್ಧಿ ಎಲ್ಲರಿಗೂ ತಿಳಿದ ವಿಷಯ. ಈ ರೀತಿ ನಾಗರೀಕತೆಯನ್ನು ಪಡೆದ ಈ ಸ್ಥಳದಲ್ಲಿ ನಟರಾಜ ಪ್ರತಿಮೆ 1916ರಲ್ಲಿ ಜಾನ್ ಮಾರ್ಷಲ್‌ರವರ ನೇತೃತ್ವದಲ್ಲಿ ಸದ್ರಿ

ಜಾಗವನ್ನು ಸಂಶೋಧಿಸಿದಾಗ ಕಂಡು ಹಿಡಿದು ಹರಪ್ಪಾ ಮಹೆಂಜಾದಾರೋ ಜನರು ನಟರಾಜನನ್ನು ಪೂಜಿಸುತ್ತಿದ್ದರೆಂಬುದಕ್ಕೆ ಅಲ್ಲಿ ಸಿಕ್ಕಿದ ನಟರಾಜ ವಿಗ್ರಹವೇ ಸಾಕ್ಷಿ. ಇದೂ ಅಲ್ಲದೆ ಅಲ್ಲಿನ ಕಟ್ಟಿದ ಗೋಡೆಗಳಲ್ಲಿ ಗೋವಿನ ಚಿತ್ರಗಳಿರುವುದರಿಂದ ಇವರು ಗೋಪಾಲಕರೆನ್ನುವುಕ್ಕೆ ಸಾಕ್ಷಿಯಾಗಿದೆ. ಆದರೆ ಈ ಜನರಿಗೆ ಆಪತ್ತು ಕಾದಿತ್ತು. ಇವರಿದ್ದ ಸ್ಥಳಕ್ಕೆ ಆರ್ಯರು ಧಾಳಿ ಮಾಡಿ ಯುದ್ಧ ಮಾಡಿ ಕೆಲವರು ಸತ್ತರು ಉಳಿದವರು ಯಮುನಾನದಿ ಕಡೆಗೆ ಹೋದರು. ಅಲ್ಲಿಯೂ ಇವರನ್ನು ಆರ್ಯರು ಬೆನ್ನಟ್ಟಿ ಇವರನ್ನು ಅಲ್ಲಿಂದಲೂ ಓಡಿಸಿದ್ದರಿಂದ ಗಂಗಾ ನದೀ ತೀರಕ್ಕೆ ಹೋಗಿ ನೆಲಸಿದರು. ಅಲ್ಲಿಗೂ ಆರ್ಯರು ಬಂದಾಗ ಆರ್ಯರಲ್ಲಿ ಪರಿವರ್ತನೆ ಪ್ರಾರಂಭವಾಗಿ ದ್ರಾವಿಡರೊಡನೆ ವಿವಾಹ ಸಂಬಂಧ ಪ್ರಾರಂಭವಾಯಿತು. ಇದೇ ಸಮಯ ಆರ್ಯ ದ್ರಾವಿಡರ ಮಿಲನದಿಂದಾಗಿ ಹಿಂದೂ ಮತದ ಉದಯವಾಯಿತೆನ್ನಬಹುದು. ಆರ್ಯರ ದೇವತೆಗಳಾದ ಸೂರ್ಯ, ಅಗ್ನಿ, ನೀರು, ಚಂದ್ರ ಹಾಗೂ ದ್ರಾವಿಡರ ದೇವತೆಗಳಾದ ಸರ್ಪ ಹಾಗೂ ಲಿಂಗ ಶಿವನ ಅವತಾರದಲ್ಲಿ ಕಾಣುವಂತಾಯಿತು. ಶಿವನ ಹಣೆಗಣ್ಣು ಅಗ್ನಿ ಯಾದರೆ ಆರ್ಯರ ದೇವತೆಯಾದ ಚಂದ್ರ ಮತ್ತು ಗಂಗೆ ಶಿವನ ಜಡೆಯಲ್ಲೂ ತಲೆ ಮೇಲೆ ಚಂದ್ರನೂ ದ್ರಾವಿಡ ದೇವತೆಯಾದ ಸರ್ಪ ಶಿವನ ಕತ್ತಿನ ಮೇಲೂ ಲಿಂಗ ಶಿವನ ಎದೆಯಲ್ಲಿ ಕಾಣುವಂತಾಯಿತು.

ಇದಾದ ಕೆಲವು ಶತಮಾನಗಳಲ್ಲಿ ಈ ತರ್ವಸರು ಬಂಗಾಳದ ಕಡೆ ಸರಿದು ಬಂಗಾಳದಲ್ಲಿ ನೆಲಸಿದರು. ಆಗ ಆ ದೇಶವನ್ನು ಗೌಡ ದೇಶವೆಂದು ಕರೆಯುತ್ತಿದ್ದರು. ಗೂಡ್ ಅಂದರೆ ಬೆಲ್ಲ. ಗೂಡ್ ದೇಶ ಗೌಡದೇಶವಾಯಿತೆಂದು ಬಲ್ಲವರು ಹೇಳುತ್ತಾರೆ. ಹರ್ಷವರ್ಧನನ ಅಣ್ಣ ಪ್ರಭಾಕರ ವರ್ಧನನನ್ನು ಗೌಡರಾಜನಾದ ಶಶಾಂಕನು ಯುದ್ಧದಲ್ಲಿ ಕೊಂದನೆಂದು ಚರಿತ್ರೆಯಲ್ಲಿ ಪ್ರತೀತಿ ಇದೆ. ಗೌಡ ದೇಶದಿಂದ ಬಂದವರೆಲ್ಲರೂ ಗೌಡರೆಂದು ಕರೆಯಲ್ಪಟ್ಟರು. ಆದರೆ ಈ ಗೌಡರನ್ನು ಅವರ ಗ್ರಹಚಾರ ಬೆನ್ನಟ್ಟುತ್ತಾ ಇತ್ತು. ಗೌಡ ದೇಶದಲ್ಲಿ ಬೌದ್ಧ ಮತದ ಪ್ರಾಬಲ್ಯ ಬೆಳೆಯುತ್ತಾ ಇತ್ತು. ಆದ್ದರಿಂದ ಅಲ್ಲಿದ್ದವರು ತಾವು ಬೌದ್ಧ ಮತ ಅವಲಂಬಿಗಳಾಗಬೇಕಾಗುತ್ತದೆ ಎಂದು ಬೆದರಿ ಕೆಲವರು ದೇವಗಿರಿ ಕಡೆಗೂ ಇನ್ನೂ ಕೆಲವರು ಒರಿಸ್ಸಾದ ಕಡೆಗೂ ಬಂದಿರಬೇಕು. ಒರಿಸ್ಸಾದ ಗಂಜಾಮ್ ಜಿಲ್ಲೆಯಲ್ಲಿ ಗೌಡಲು ಎಂಬ ಪಂಗಡದವರಿದ್ದರೆಂದೂ ಅವರ ಕಸುಬು ಹಾಲು ಉತ್ಪಾದನೆ ಎಂದೂ ವ್ಯವಸಾಯವೂ ಅವರ ಕಸುಬು ಎಂದೂ ಇವರು ಬಲಾಢ್ಯವಾಗಿದ್ದು ಸಂಪತ್ತಿನಿಂದ ಕೂಡಿದ ಜನಾಂಗದವರೆಂದು ಇಡ್‌ಗರ್ ಬರ್‌ಸ್ಟ್ ಮತ್ತು ಕೆ. ರಂಗಾಚಾರಿಯವರು ಬರೆದ ದಕ್ಷಿಣ ಭಾರತದ ಜಾತಿ ಮತ್ತು ಪರಿಶಿಷ್ಟ ವರ್ಗವೆಂಬ ಗ್ರಂಥದಲ್ಲಿ ಬರೆದಿದ್ದಾರೆ. ಇವರ ಕಸುಬು ಗೌಡರ ಕಸುಬನ್ನೆ ಅನುಸರಿಸುತ್ತಿದ್ದಾರೆ. ಆದರೆ ಇವರು ಒರಿಯಾ ಭಾಷೆಯನ್ನಾಡುತ್ತಾರೆ. ಗೌಡರು ಕನ್ನಡ ವನ್ನಾಡುತ್ತಾರೆ. ಆದುದರಿಂದ ಇವರ ಜಾತಿ ಬೇರೆಯಾಗಿರಬೇಕೆಂದು ಊಹಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಈ ಎರಡು ಪಂಗಡದವರು ಬೇರೆ ಭಾಷೆಯಾಡುವುದರಿಂದ ಬೇರೆ ಜಾತಿ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಕಾರಣವೇನೆಂದರೆ ಹಳೇ ಮೈಸೂರಿನ ಮರಸು ಒಕ್ಕಲಿಗರು ಒಂದೇ ಜಾತಿ ಆದರೂ ಒಂದು ಪಂಗಡದವರು ಕನ್ನಡ ಮಾತಾಡುತ್ತಾರೆ. ಇನ್ನೊಂದು ಪಂಗಡದವರು ತೆಲುಗು ಭಾಷೆ ಮಾತಾಡುತ್ತಾರೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡರು ಕೆಲವರು ಅರೆಭಾಷೆಯನ್ನು ಇನ್ನು ಕೆಲವರು ತುಳು ಭಾಷೆಯನ್ನು ಆಡುತ್ತಾರೆ. ಇವರು ಬೇರೆ ಬೇರೆ ಭಾಷೆಯನ್ನು ಆಡುವುದರಿಂದ ಇವರು ಬೇರೆ ಬೇರೆ ಜಾತಿಯವರೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಗೌಡರ ಸಂತತಿಯವರು ಒರಿಸ್ಸಾದ ಗಂಜಾಮ್ ಜಿಲ್ಲೆಯಲ್ಲಿ ಇದ್ದಾರೆಂದು ಹೇಳಬಹುದು.

ಇನ್ನೊಂದು ಶಾಖೆಯವರು ದೇವಗಿರಿಗೆ ಹೋಗಿ ನೆಲಸಿದಾಗ ಅಲ್ಲಿ ರಾಮಚಂದ್ರ ಎಂಬ ರಾಜವಾಳುತ್ತಿದ್ದನೆಂದೂ ಅವನು ಹಾಲಿಗೆ ಸಂಬಂಧಪಟ್ಟ ಮತದವನೆಂದೂ ತಿಳಿದು ಬರುತ್ತದೆ. ರಾಮಚಂದ್ರನನ್ನು ಮಹಮದ್ ಬಿನ್ ತೊಗಲಕ್‌ನ ಸೇನಾಧಿಪತಿ ಮಲ್ಲಿಕಾಫರನು ಸೋಲಿಸಿ ಕೊಂದು ಹಾಕಿದುದರಿಂದ ಈ ಗೌಡರು ಮುಸಲ್ಮಾನ ವಶದಲ್ಲಿ ದೇವಗಿರಿಯಲ್ಲಿ ಉಳಿದರೆ ತಾವೂ ಮುಸಲ್ಮಾನರಾಗಬಹುದೆಂಬ ಭಯದಿಂದ ಅಲ್ಲಿಂದ ಈಗಾಗಲೇ ವಿಜಯನಗರವನ್ನು ಕಟ್ಟಲು ಶ್ರಮ ಪಡುತ್ತಿದ್ದ ಹಾಲಿನ ಸಂಬಂಧವಿದ್ದ ಹಕ್ಕಬುಕ್ಕರ ರಾಜ್ಯಕ್ಕೆ ಬಂದು ನೆಲೆಸಿದರು. ಇಲ್ಲಿ ಇವರು ತಾಳಿಕೋಟೆ ಯುದ್ಧ ನಡೆದು ವಿಜಯನಗರದ ಅರಸರು ಬಹಮನೀ ಸುಲ್ತಾನರಿಂದ ಸೋಲಿಸಲ್ಪಡುವವರೆಗೆ ಅಲ್ಲಿಯೇ ಇದ್ದರು ಎಂದು ತಿಳಿದು ಬರುತ್ತದೆ.

ಈ ಸಮಯದಲ್ಲಿಯೇ ಈ ಗೌಡರು ವಿದ್ಯಾರಣ್ಯರ ಮೂಲಕ ಶೃಂಗೇರಿ ಮಠದ ಸಂಪರ್ಕಪಡೆದರು. ಅದೇ ರೀತಿ ಇಲ್ಲಿದ್ದಾಗಲೇ ಇವರು ಶಿವನನ್ನು ಪೂಜಿಸುತ್ತಿದ್ದವರು ವಿಜಯ ನಗರದ ರಾಜರ ಮನೆದೇವರಾದ ಶ್ರೀ ವೆಂಕಟರಮಣ ಸ್ವಾಮಿಯನ್ನು ಪೂಜಿಸಿ ವೆಂಕಟರಮಣ ಸ್ವಾಮಿಯ ಮುಡುಪನ್ನು ಮನೆಗಳಲ್ಲಿ ತಂದಿಟ್ಟು ಹರಿ ಸೇವೆಯನ್ನು ಮಾಡಲು ಪ್ರಾರಂಭಿಸಿದರು ಎಂದು ತಿಳಿಯುತ್ತದೆ. ಶ್ರೀ ಶೃಂಗೇರಿ ಮಠದ ಸಂಪರ್ಕ ಪಡೆದುದರಿಂದ ತಮ್ಮ ಜಾತಿ ಪದ್ಧತಿಗಳ ಕಟ್ಟು ಪಾಡುಗಳನ್ನು ಶೃಂಗೇರಿ ಜಗದ್ಗುರುಗಳ ನಿರ್ದೇಶನದ ಮೇಲೆ ರೂಪಿಸಿದರೆನ್ನಬಹುದು. ಅದೇ ರೀತಿ ಶೃಂಗೇರಿಯ ಶಾರದಾಂಬೆ (ಸಬ್ಬಮ್ಮ) ದೇವರಿಗೆ ಮದುವೆಯಲ್ಲಿ ಹರಕೆ ಹಣ ಕಟ್ಟುವ ಪದ್ಧತಿ ಪ್ರಾರಂಭವಾಯಿತೆನ್ನ ಬಹುದು.

ತಾಳಿಕೋಟೆ ಯುದ್ಧ ನಂತರ ತಾವು ವಿಜಯನಗರದ ಹತ್ತಿರ ತಮ್ಮ ವಾಸವನ್ನು ಮುಂದುವರೆಸಿದರೆ ತಾವು ಬಹಮನಿ ಸುಲ್ತಾನರ ಬಲತ್ಕಾರದಿಂದ ಮುಸಲ್ಮಾನರಾಗಬಹುದೆಂಬ ಹೆದರಿಕೆಯಿಂದ ತಮ್ಮ ರಾಜರನ್ನು ಕೇಳಿದಾಗ ನೀವು ನನ್ನ ಸ್ನೇಹಿತರೂ, ಸಾಮಂತರೂ ಆಗಿರುವ ಇಕ್ಕೇರಿ ವಂಶದ ರಾಜರಲ್ಲಿಗೆ ಹೋಗಿ ನೆಲೆಸಿರೆಂದು ಹೇಳಿದ ಪ್ರಕಾರ ಈಗಿನ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಇಕ್ಕೇರಿ ರಾಜ್ಯಕ್ಕೆ ಬಂದು ನೆಲೆಸಿದಾಗ ಈ ಗೌಡರಿಗೆ ಗ್ರಹಚಾರ ಕೆಟ್ಟದಾಗಿ ಅಲ್ಲಿ

ಬಲಿಷ್ಟ ಜನಾಂಗವಾದ ಲಿಂಗಾಯಿತರು ಇವರನ್ನು ಲಿಂಗಾಯಿತರಾಗಬೇಕೆಂದು ಬಲತ್ಕರಿಸಿದಾಗ ಇಕ್ಕೇರಿ ರಾಜರ ನಿರ್ದೇಶನದ ಮೇರೆಗೆ ಹಾಸನದ ಐಗೂರುಸೀಮೆಗೆ ನೆಲೆಸಿ ಸ್ವಲ್ಪ ಸಮಯವಿದ್ದು ಅಲ್ಲಿಯು ಸರಿ ಬಾರದ ಕಾರಣ ಇಕ್ಕೇರಿ ರಾಜರನ್ನು ಕೇಳಿಕೊಂಡಾಗ ಈಗಿನ ದಕ್ಷಿಣ ಕನ್ನಡ ಜಿಲ್ಲೆ ಇಕ್ಕೇರಿ ವಂಶದ ರಾಜರ ಅಧೀನದಲ್ಲಿದ್ದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಹವೀಕ ಬ್ರಾಹ್ಮಣರು ಈಗಾಗಲೇ ನೆಲೆಸಿದ್ದರಿಂದ ಕೃಷಿಯಲ್ಲಿ ಹಾಗೂ ದನಗಳನ್ನು ಸಾಕುವುದರಲ್ಲಿ ನಿಪುಣರಾದ ಗೌಡರನ್ನು ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟಕ್ಕೆ ಒತ್ತಾಗಿರುವ ಸುಳ್ಯ, ಪುತ್ತೂರು, ಬೆಳ್ತಂಗಡಿ ಹಾಗೂ ಬಂಟ್ವಾಳ ತಾಲ್ಲೂಕುಗಳಲ್ಲಿ ನೆಲಸುವಂತೆ ಮಾಡಿದರು. ಕೆಲವು ಸಮಯದ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಿಂದ ಪಾಣೆ ಮಂಗಳೂರಿನವರೆಗೂ ಬೆಳ್ತಂಗಡಿ ಸುಬ್ರಮಣ್ಯದವರೆಗೂ ನಂತರ ಕೊಡಗು ರಾಜರ ಸ್ವಾಧೀನಕ್ಕೆ ಬಂತು.

ಗೌಡರು ದಕ್ಷಿಣ ಕನ್ನಡ ಜಿಲ್ಲೆಗೆ ಸಾಧಾರಣ 1600ರಲ್ಲಿ ಬಂದಿರಬಹುದೆಂದು ಊಹಿಸಲಾಗಿದೆ. ಇದನ್ನು ನಮ್ಮ ಸಂಶೋಧಕರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕಟ್ಟೆಮನೆಗಳ ಅಥವಾ ಇತರ ಕುಟುಂಬದ ನಿರೂಪ ಯಾ ತಾಮ್ರದ ಪತ್ರ ಮುಂತಾದವುಗಳನ್ನು ಪರಿಶೀಲಿಸಿದರೆ ದೃಢವಾದ ಸಮಯವನ್ನು ಕಂಡುಹಿಡಿಯ ಬಹುದು. ಅದೂ ಅಲ್ಲದೆ ಇಕ್ಕೇರಿ ವಂಶದ ರಾಜಮನೆತನದ ಚರಿತ್ರೆ ಹಾಗೂ ಇಕ್ಕೇರಿ ರಾಜ್ಯಕ್ಕೆ ಸೇರಿದ ಊರುಗಳು ಹಾಗೂ ಇಕ್ಕೇರಿ (ನಾಯಕರು) ರಾಜರು ಯಾವುದೇ ಆಸ್ತಿಗಳನ್ನು ತನ್ನ ಪ್ರಜೆಗಳಿಗೆ ಕೊಟ್ಟ ವಿಷಯವನ್ನು ಪರಿಶೀಲಿಸಿದರೆ ಗೌಡರ ಇತಿಹಾಸಕ್ಕೆ ಹೊಸ ಬೆಳಕನ್ನು ಚೆಲ್ಲಿದಂತಾಗುವುದು ಖಂಡಿತ.

ಈ ರೀತಿ ಗೌಡರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ನೆಲೆಸಿದ ಸ್ವಲ್ಪ ಸಮಯದಲ್ಲಿ ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಗೌಡ ಪ್ರದೇಶದಲ್ಲಿ ಹೆಚ್ಚಿನ ಭಾಗ 1834ರ ಹಿಂದೆ ಕೊಡಗು ರಾಜ್ಯಕ್ಕೆ ಸೇರಿರುವುದು ಚಾರಿತ್ರಿಕ ಸತ್ಯ. ಇತ್ತ ಕೊಡಗಿನಲ್ಲಿ ಇಕ್ಕೇರಿ ವಂಶದವರೇ ಆದ ವೀರರಾಜರಿಂದ ಸ್ಥಾಪಿತವಾದ ಹಾಲೇರಿ ವಂಶದ ರಾಜ್ಯಭಾರವು 1600ನೇ ಇಸವಿಯಿಂದ ಪ್ರಾರಂಭವಾಗಿ 1785ರಲ್ಲಿ ಟಿಪ್ಪು ಸುಲ್ತಾನನು ಕೊಡಗಿಗೆ ದೊಡ್ಡ ಸೈನ್ಯವನ್ನು ತಂದು 80,000 ಕೊಡಗರನ್ನು (ಕೊಡಗು ನಿವಾಸಿ) ಸೆರೆ ಹಿಡಿದು ಶ್ರೀರಂಗ ಪಟ್ಟಣಕ್ಕೆ ಕರೆದೊಯ್ದು ಅವರನ್ನೆಲ್ಲಾ ಮುಸಲ್ಮಾನರನ್ನಾಗಿ ಪರಿವರ್ತಿಸಿದ್ದುದರಿಂದ ಈ ರೀತಿ ಕರೆದುಕೊಂಡು ಹೋದ ಸ್ಥಳಗಳಾದ ನಾಲ್ಕು ನಾಡು, ಪಾಡಿ ನಾಲ್ಕು ನಾಡು, ಕುಡಿಯತ್ ನಾಡು, ತಾವೂ ನಾಡು, ಬೇಂಗ್ ನಾಡು, ಕುಯ್ಯಂಗೇರಿನಾಡು, ಕಾಂತುಮೂರ್ನಾಡು, ಕಗ್ಗೋಡು ನಾಡು, ಹೊರ ಮಲೆ ನಾಡು, ನೂರೊಕ್ಲು ನಾಡು ಮುಂತಾದ ಸ್ಥಳಗಳಲ್ಲಿ ಜನರೇ ಇಲ್ಲದೆ ಭೂಮಿ ಪಾಳು ಬಿದ್ದು ಮಲೇರಿಯಾದ ಕಾಟ ಹೆಚ್ಚಾಗಿ 1788ರಲ್ಲಿ ಟಿಪ್ಪು ಸುಲ್ತಾನನು ಕೊಡಗಿನ ರಾಜನಾದ ದೊಡ್ಡ ವೀರರಾಜೇಂದ್ರ ಒಡೆಯನನ್ನು ಪೆರಿಯ ಪಟ್ಟಣ ಕೋಟೆಯಲ್ಲಿ ಬಂಧಿಸಿಟ್ಟದನ್ನು ತಪ್ಪಿಸಿಕೊಂಡು ಪುನಃ ರಾಜ್ಯವನ್ನು ಗೆದ್ದು ಕೊಂಡ ನಂತರ ರಾಜ್ಯದಲ್ಲಿ ಪಾಳು ಬಿದ್ದ ಭೂಮಿಯನ್ನು ರೂಢಿಸಲು 1799ರಿಂದ 1808ರ ವರೆಗೆ ಕನ್ನಡ ಜಿಲ್ಲೆಯಿಂದ ಒಂದೊಂದು ಗ್ರಾಮದಿಂದ 15 ಜನರಂತೆ ಜನರನ್ನು ಕರೆ ತಂದು ಅವರಿಗೆ ಜಮ್ಮ ಭೂಮಿಯನ್ನು ಕೊಟ್ಟು ನೆಲೆ ನಿಲ್ಲಿಸಿ ಮೊತ್ತ ಮೊದಲು 1799ರಲ್ಲಿ ಈ ರೀತಿ ಆಮಂತ್ರಿಸಿ ಕರೆ ತಂದವರಲ್ಲಿ ಹೆಚ್ಚಿನವರು ಗೌಡರಾಗಿದ್ದರು. ಇವರನ್ನು ತೊಡಿಕಾನಕ್ಕಾಗಿ ಭಾಗಮಂಡಲದ ಮಾರ್ಗವಾಗಿ ದೇವಟು ಪರಂಬಿದಲ್ಲಿ ಸೇರಿಸಿ ಅಲ್ಲಿದ್ದ ಉಳಿದ ಕೊಡವರನ್ನು ಇನ್ನಿತರ ಜನರನ್ನು ಬರಮಾಡಿ ಪರಂಬಿನ ಸುತ್ತಲೂ ಕೂರಿಸಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದವರಿಗೆಲ್ಲಾ ಕುಪ್ಪಸ ದಟ್ಟಿ ರುಮಾಲೆಯನ್ನು ಕೊಟ್ಟು, ಇನ್ನು ಮುಂದೆ ಮಡಿಕೇರಿ ಅರಮನೆಗೆ ಬರುವಾಗ ಕುಪ್ಪಸ, ದಟ್ಟಿ, ರುಮಾಲೆ ಹಾಕಿ ಬರಬೇಕೆಂದು ಬಂದವರಿಗೆ ಜಮ್ಮ ಭೂಮಿಯನ್ನು ಕೊಟ್ಟು ನಿರೂಪವನ್ನು ಕೊಟ್ಟರು. ಎಲ್ಲರೂ ಅಣ್ಣ ತಮ್ಮಂದಿರಂತೆ ಸೌಹಾರ್ದದಿಂದ ನಡೆದು ಕೊಳ್ಳಬೇಕೆಂದು ತಾಕೀತಿ ಮಾಡಿದರು. ಅಂದು 1834ರ ಹಿಂದೆ ವಿಶಾಲ ಕೊಡಗಿನ ವ್ಯಾಪ್ತಿಯು ಪಶ್ಚಿಮಕ್ಕೆ ಈಗಿನ ದಕ್ಷಿಣ ಜಿಲ್ಲೆಯ ಪಾಣೆ ಮಂಗಳೂರಿನತನಕವೂ, ಪೂರ್ವಕ್ಕೆ ಪೆರಿಯಾ ಪಟ್ಟಣ ತಾಲ್ಲೂಕು, ಉತ್ತರಕ್ಕೆ ಅರಕಲಗೋಡು ತಾಲ್ಲೂಕು, ಮಂಜರಾಬಾದ್ ಮತ್ತು ಐಗೂರು ಸೀಮೆಗಳು ಸೇರಿದ್ದವು. ಈ ಪ್ರದೇಶಗಳು ವಿಶಾಲ ಕೊಡಗಿನ ವ್ಯಾಪ್ತಿಯಲ್ಲಿಯೇ ಇದ್ದವರೆಂದು ತಿಳಿಯುವುದು.

ವರ್ಷಂ ಪ್ರತಿ ಭೂಕಂದಾಯವನ್ನು ಅರಮನೆಗೆ ಸಲ್ಲಿಸ ಬೇಕೆಂದೂ ಪ್ರತಿಯೊಬ್ಬ ಜಮ್ಮ ರೈತರು ರಾಜನ ಕಾರ್ಯಗಳಲ್ಲಿ ಸಹಾಯಕರಾಗಬೇಕೆಂದು ಅರಮನೆಗೆ ಬರುವಾಗ ಕುಪ್ಪಸ ದಟ್ಟಿ ಹಾಕಿ ಬರಬೇಕೆಂದು ತಾಕೀತಿ ಮಾಡಲಾಗಿತ್ತು. ಆ ದಿನ ಅಲ್ಲಿ ಬಂದವರಿಗೆಲ್ಲಾ ಕೈಲ್ ಮುಹೂರ್ತ ಹಬ್ಬದ ಅಡಿಗೆಯನ್ನು ಬಡಿಸಿದರು ಎಂಬುದಾಗಿ ನನ್ನ ಮನೆಯ ಹಿರಿಯರು ಹೇಳುತ್ತಿದ್ದರು.

ಆದ್ದರಿಂದ ನಮ್ಮ ಹಿರಿಯರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸಿಂಧೂ ನದೀ ಕಣಿವೆಯಿಂದ ಹಿಡಿದು ಗೌಡ ದೇಶ, (ಬಂಗಾಳ) ದೇವಗಿರಿ, ವಿಜಯನಗರ, ಇಕ್ಕೇರಿ, ಐಗೂರು, ಕನ್ನಡ ಜಿಲ್ಲೆ, ಕೊಡಗು ಪ್ರದೇಶಗಳಿಗೆ ಪಸರಿಸಿ ಬಂದರು. ಓಡೋಡಿ ಹೋಗಿರುವುದು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಗೌಡರ ಸಂಸ್ಕೃತಿ ಈಗ ಸುಮಾರು 50-60 ವರ್ಷಗಳಿಂದ ಪಾಶ್ಚಾತ್ಯ ನಾಗರೀಕತೆಯ ಪ್ರಭಾವದಿಂದಲೋ ಅಥವಾ ವಿದ್ಯಾವಂತರ ನಿರ್ಲಕ್ಷದ ಕಾರಣವೋ ಮುಕ್ಕಾಲು ಭಾಗ ಕೆಟ್ಟು ಹೋಗಿದೆ ಎನ್ನಬಹುದು. ನಿಜವಾಗಿಯೂ ಗೌಡರ ಪದ್ಧತಿಗಳು ಹಲವಾರು ಶತಮಾನಗಳಿಂದ ವಿವಿಧ ಪ್ರದೇಶಗಳ ಜನರ ಮಿಳಿತದಿಂದ ಮಾರ್ಪಾಡಾದ ಸುವ್ಯವಸ್ಥೆಯ ಸಂಸ್ಕೃತಿ ಬೇರೆ ಜಾತಿ ಪದ್ಧತಿ ಗಿಂತಲೂ ಯಾವ ರೀತಿಯಲ್ಲಿ ಕಡಿಮೆ ಇಲ್ಲ. ಹಿಂದೂ ಮತದ ವಿವಾಹ ಪದ್ಧತಿ ಹುಟ್ಟಿನಿಂದ ಸಾವಿನವರೆಗಿರುವ ಎಲ್ಲಾ ಹಂತದ ಪದ್ಧತಿಗಳನ್ನು ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಶಂಕರಾ ಚಾರ್ಯರ ಮಾರ್ಗದರ್ಶನದಲ್ಲಿ ಅವರು ಕಾಲಕಾಲಕ್ಕೆ ಕೊಟ್ಟ

ನಿರೂಪಗಳ ಪ್ರಕಾರ ಕ್ರಮಬದ್ಧವಾಗಿಯೂ, ವೈಜ್ಞಾನಿಕವಾಗಿ ನಡೆದುಕೊಂಡು ಬಂದ ಪದ್ಧತಿಗಳು ಶಾಸ್ತ್ರದ ಸಮಗಟ್ಟುಗಳು ಧರ್ಮವೆಂಬ ಮಧುರ ಲೇಪನದಲ್ಲಿ ಗಂಡು ಹೆಣ್ಣಿನ ಮಧುರ ಸಂಬಂಧ, ಆರೋಗ್ಯ ಕಾಪಾಡಲು ಬೇಕಾದ ಕಟ್ಟು ಪಾಡುಗಳು, ಗುರು ಹಿರಿಯರಿಗೆ, ತಂದೆ ತಾಯಿಗಳಿಗೆ, ಮಾವ ಅತ್ತೆಯರಿಗೆ, ಪ್ರೀತಿ ಗೌರವ ಕಲಿಸುವ ಮಾತುಗಳಿಂದ ಕೂಡಿದ ಸೋಬಾನೆಗಳು ಹಿಂದೂ ವೈದಿಕ ಧರ್ಮದ ಹಿಂದೂ ಧರ್ಮ ಶಾಸ್ತ್ರಜ್ಞರ ಋಷಿಗಳ ಸೂತ್ರಗಳನ್ನು ಈ ಪದ್ಧತಿಗಳಲ್ಲಿ ಅಳವಡಿಸಿದ ಮಾರ್ಗದರ್ಶನ ಮಾಡಿದ ನಮ್ಮ ಗುರುಗಳಾದ ಶ್ರೀ ಶ್ರೀ ಶಂಕರಚಾರ್ಯರಿಗೆ ಗೌಡ ಸಮಾಜ ಚಿರಋಣಿಯಾಗಬೇಕಿದೆ.

ಈ ರೀತಿಯ ಅವನತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋದರೆ ನಮ್ಮ ಮುಂದಿನ ಪೀಳಿಗೆ ದಿಕ್ಕುಗೆಟ್ಟು ತಾವು ಯಾವ ರೀತಿಯ ಪದ್ಧತಿಗಳನ್ನು ಅನುಸರಿಸಬೇಕೆಂಬ ಪ್ರಶ್ನೆ ಅವರಲ್ಲಿ ಉದ್ಭವಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಇದಕ್ಕೆ ಜನಾಂಗದ ಹಿತೈಷಿಗಳು, ಮುಖಂಡರು ಸಮಾಜಗಳು ಹಾಗೂ ಎಲ್ಲಾ ಇತರ ಸಂಸ್ಥೆಗಳು ಮನಸಾ ವಾಚಾ ಪ್ರಯತ್ನ ಪಡಬೇಕಾಗಿದೆ.

## ಗೌಡರ ಚರಿತ್ರೆಯಲ್ಲಿ ಮುಖ್ಯ ಘಟನೆಗಳ ಪಟ್ಟಿ

೧. ದ್ರಾವಿಡ ಜನಾಂಗದವರು ಭಾರತಕ್ಕೆ ವಲಸೆ ಬಂದದ್ದು - ಕ್ರಿ. ಪೂ. 5000 ರಿಂದ 4 ಸಾವಿರ ವರ್ಷಗಳ ಅವಧಿಯಲ್ಲಿ.

೨. ಆರ್ಯರು ಭಾರತಕ್ಕೆ ಬಂದ ಸಮಯ - ಕ್ರಿ. ಪೂ. 3000 ದಿಂದ 2000 ವರ್ಷ.

೩. ದ್ರಾವಿಡರು ಸಿಂಧೂ ನದಿ ಕಣಿವೆಯಲ್ಲಿ ಉನ್ನತ ನಾಗರೀಕತೆಯನ್ನು ಹೊಂದಿದ ಸಮಯ - ಕ್ರಿ. ಪೂ. 4000 ದಿಂದ 3000 ವರ್ಷದವರೆಗೆ.

೪. ತರ್ವಸರು ಸೇರಿದಂತೆ ದ್ರಾವಿಡರು ಯಮುನಾ ನದಿ ಬಯಲಿಗೆ ಸಿಂಧೂ ನದಿ ಬಯಲಿನಿಂದ ವಲಸೆ ಬಂದದ್ದು - ಕ್ರಿ. ಪೂ. 3000 ದಿಂದ 2000 ವರ್ಷದವರೆಗೆ.

೫. ತರ್ವಸರು ಸೇರಿದಂತೆ ದ್ರಾವಿಡರು ಯಮುನಾ ನದಿ ಬಯಲಿನಿಂದ ಗಂಗಾ ನದಿ ಬಯಲಿಗೆ ವಲಸೆ ಬಂದ ಸಮಯ - ಕ್ರಿ. ಪೂ. 2000 ವರ್ಷದಿಂದ 1000 ವರ್ಷದವರೆಗೆ.

೬. ತರ್ವಸರು ದ್ರಾವಿಡರು ಸೇರಿದಂತೆ ಗಂಗಾನದೀ ತೀರದಿಂದ (ಬಂಗಾಳ) ಗೌಡ ದೇಶಕ್ಕೆ ವಲಸೆ ಬಂದ ಸಮಯ - ಕ್ರಿ. ಪೂ. 1000 ದಿಂದ ಕ್ರಿ. ಪೂ. 500 ರವರೆಗೆ.

೭. ತರ್ವಸರು ಗೌಡ ದೇಶಕ್ಕೆ ಬಂದ ಮೇಲೆ ಗೌಡ ಎಂಬ ಹೆಸರಿನಿಂದ ಕರೆಯಲ್ಪಟ್ಟರು - ಕ್ರಿ. ಶ. 500 ರಿಂದ 1000 ವರೆಗೆ.

೮. ಗೌಡ ರಾಜ್ಯದ ಶಶಾಂಕನು ಪ್ರಭಾಕರವರ್ಧನನನ್ನು ಕೊಂದದ್ದು - ಕ್ರಿ. ಶ. 605.

೯. ಹರ್ಷವರ್ಧನನು ಗೌಡ ರಾಜ ಶಶಾಂಕನನ್ನು ಕೊಂದದ್ದು - ಕ್ರಿ. ಶ. 640.

೧೦. ಗೌಡರು ಬೌದ್ಧರ ಮತಾಂತರದ ಹಿಂಸೆಯನ್ನು ತಾಳಲಾರದೆ ದೇವಗಿರಿಗೆ ವಲಸೆ ಹೋದ ಸಮಯ - ಕ್ರಿ. ಶ. 700 ರಿಂದ 1000 ರವರೆಗೆ.

೧೧. ದೇವಗಿರಿಯಲ್ಲಿ ಹಾಲು ಸಂಬಂಧದ ರಾಜರ ಆಶ್ರಯ ಪಡೆದದ್ದು - ಕ್ರಿ. ಶ. 1000 ದಿಂದ 1320-27ರವರೆಗೆ.

೧೨. ರಾಜ ರಾಮಚಂದ್ರನನ್ನು ಮಹಮದ್‌ಬಿನ್ ತೊಗಲಕ್‌ನ ಸೇನಾನಿ ಮಲ್ಲಿಕಾಫರನು ಕೊಂದು ಹಾಕಿದ್ದು - ಕ್ರಿ. ಶ. 1327.

೧೩. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಸಂಗಮರು ಮಾಡಿದ್ದು - ಕ್ರಿ. ಶ. 1300.

೧೪. ಸಂಗಮ ವಂಶದ ಹಕ್ಕನ ರಾಜ್ಯಭಾರ - ಕ್ರಿ. ಶ. 1350.

೧೫. ರಾಮಚಂದ್ರ ರಾಜನು ಸತ್ತ ನಂತರ ಗೌಡರು ತಾವು ಮುಸಲ್ಮಾನರಾಗಬಹುದೆಂಬ ಹೆದರಿಕೆಯಿಂದ - ಕ್ರಿ. ಶ. 1356.

೧೬. ವಿಜಯನಗರದ ಕಡೆ ಹಾಲು ಸಂಬಂಧದ ರಾಜರಾದ ಹಕ್ಕನ ಆಶ್ರಯ - ಕ್ರಿ. ಶ. 1327 ರಿಂದ 1400 ರವರೆಗೆ.

೧೭. ತಾಳಿಕೋಟೆ ಯುದ್ಧದಿಂದ ವಿಜಯನಗರದ ಪತನ - ಕ್ರಿ. ಶ. 1565.

೧೮. ತಾಳಿಕೋಟೆ ಪತನದಿಂದ ಗೌಡರು ಅವರ ಮತವನ್ನು ಮಹಮದೀಯರು ಕೆಡಿಸಬಹುದೆಂದು ಹೆದರಿಕೆಯಿಂದ ಇಕ್ಕೇರಿ ರಾಜ್ಯಕ್ಕೆ ವಲಸೆ ಬಂದದ್ದು - ಕ್ರಿ. ಶ. 1565 ರಿಂದ 1580 ವರೆಗೆ.

೧೯. ಗೌಡರು ಇಕ್ಕೇರಿಯಿಂದ ತಾವು ಲಿಂಗಾಯಿತರ ಪ್ರಭಾವಕ್ಕೆ ಬಿದ್ದು ಲಿಂಗಾಯಿತರಾಗಬಹುದೆಂಬ ಭಯದಿಂದ ಇಕ್ಕೇರಿಯಿಂದ ಐಗೂರಿಗಾಗಿ ಕನ್ನಡ ಜಿಲ್ಲೆಗೆ ಬಂದದ್ದು - ಕ್ರಿ. ಶ. 1600 ರಿಂದ 1650 ರವರೆಗೆ.

೨೦. ಕೊಡಗು ನಾಶವಾದಾಗ ಗೌಡರನ್ನು ದೊಡ್ಡ ವೀರರಾಜೇಂದ್ರ ಒಡೆಯರು ಕೊಡಗಿಗೆ ಆಮಂತ್ರಿಸಿದ್ದು - ಕ್ರಿ. ಶ. 1799

## ಗ್ರಂಥ ಋಣ


೧. ಕರ್ನಾಟಕ ಪೂರ್ವೇತಿಹಾಸ - ಡಾ. ಶಾಂಭಾಜೋಷಿ

೩. Cast and Tribe in South India - 2nd year texts on T. K. Rangachari

೪. Indus Vally civilization - Prof. Ponnu Swamy

೫. ಹಾಲು ಒಕ್ಕಲು ಮಕ್ಕಳು ಯಾನೆ ಗೌಡರ ನಿರೂಪ - ಸಂಗ್ರಹ : ಕಟ್ಟೆಮನೆ, ಕೂಜುಗೋಡು ಪದ್ಮಯ್ಯ ಗೌಡರು.

೬. Ancient History of India - Prof. Neelakanta Shastri

೭. Gazetes of Karnataka State - Depended of Karnataka Gazeteer

೮. ಕೊಡಗಿನಲ್ಲಿ ಗೌಡ ಜನಾಂಗದವರು - ದಿ. ಡಿ. ಯನ್. ಕೃಷ್ಣಯ್ಯ

೯. ಹಿರಿಯರು ಹೇಳಿದ ಮಾತುಗಳು

## ಸಂಗಾತಿ ಭವಿಷ್ಯ : ಜನವರಿ 1 ರಿಂದ 15, 2001

ಜೋತಿಷ್ಯರು : ಗಿರೀಶ್‌ಕುಮಾರ್, ಕೊಯನಾಡು

**ಮೇಷ ರಾಶಿ** : ದೈವಾನುಕೂಲವಿಲ್ಲ. ಸ್ವಜನರಲ್ಲಿ ನಷ್ಟ ನಿಷ್ಠುರಗಳು ಬರಬಹುದು. ವ್ಯವಹಾರ ಉದ್ಯೋಗಗಳಲ್ಲಿ ನಷ್ಟ ಅನುಭವಿಸುವಿರಿ. ಹಣಕಾಸಿನ ವ್ಯವಹಾರದಲ್ಲಿ ಸಾಧಾರಣ ಪ್ರಗತಿ ಇದೆ.

**ವೃಷಭರಾಶಿ** : ದೈವಾನುಕೂಲವಿಲ್ಲ. ಹಣಕಾಸಿನ ವ್ಯವಹಾರದಲ್ಲಿ ಅಡೆತಡೆಗಳಿವೆ. ಕೈ ಹಿಡಿದ ಕೆಲಸ ತಟಸ್ಥವಾಗುವುದು. ಸಂಸಾರದಲ್ಲಿ ನಷ್ಟ ನಿಷ್ಠುರಗಳು, ಶನಿಯಾರಾಧನೆ ಮಾಡಿಕೊಂಡು ಬನ್ನಿ.

**ಮಿಥುನ ರಾಶಿ** : ದೈವಾನುಕೂಲವಿದೆ. ಗೃಹವಲಯದಲ್ಲಿ ದೇವತಾ ಕಾರ್ಯಗಳನ್ನು ಮಾಡುವ ಹವಣಿಕೆಯಲ್ಲಿರುತ್ತಿರಿ. ಸಂಸಾರದಲ್ಲಿ ಅಭಿವೃದ್ಧಿ ಆಗಲಿದೆ. ಆದರೆ ಕೆಲವೊಂದು ಅಡ್ಡಿಗಳು ಬರುವ ಸೂಚನೆ ಇದೆ.

**ಕರ್ಕಾಟಕ ರಾಶಿ** : ಆರೋಗ್ಯವೂ ಹದಗೆಡುವುದು. ಸಂಸಾರ ವಲಯದಲ್ಲಿ ನೆಮ್ಮದಿ ಇಲ್ಲ. ಹಣಕಾಸಿನ ವ್ಯವಹಾರದಲ್ಲಿ ನಷ್ಟವಿದೆ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ ವ್ಯವಹಾರ ಮಾಡಿ.

**ಸಿಂಹರಾಶಿ** : ದೈವಾನುಕೂಲವಿದೆ. ಆದರೆ ಹಣಕಾಸಿನ ವ್ಯವಹಾರದಲ್ಲಿ ಅಡ್ಡಿ ಆತಂಕಗಳು ಬರಬಹುದು. ಕೋಮು ತಕರಾರುಗಳಲ್ಲಿ ನಿಮಗೆ ಜಯವಿದೆ. ಶತ್ರುಗಳ ಕಿರುಕುಳ ಹೆಚ್ಚಾಗಲಿವೆ.

**ಕನ್ಯಾರಾಶಿ** : ದೇಹದಲ್ಲಿ ಮಾನಸಿಕ ವ್ಯಥೆ ಹೆಚ್ಚಾಗುವುದು. ಆರೋಗ್ಯದ ಕಡೆ ಹೆಚ್ಚು ನಿಗಾ ಇರಲಿ. ಶತ್ರುಗಳು ದೂರಾಗುವರು. ಹಣಕಾಸಿನ ವ್ಯವಹಾರದಲ್ಲಿ ಸ್ವಲ್ಪ ಲಾಭವಿದೆ. ಭೈರವಿ ಜಪ ಮಾಡಿಕೊಂಡು ಬನ್ನಿ.

**ತುಲಾರಾಶಿ** : ದೈವಾನುಕೂಲವಿಲ್ಲ. ಅಷ್ಟಮ ಸ್ಥಾನದ ಗುರುವಿನಿಂದಾಗಿ ಪ್ರತಿ ವ್ಯವಹಾರದಲ್ಲಿ ನಷ್ಟ. ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ವಾಹನದಿಂದ ನಷ್ಟವಿದೆ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ ವ್ಯವಹರಿಸಿ. ಗುರು ಜಪ ಮಾಡಿಕೊಂಡು ಬನ್ನಿ.

**ವೃಶ್ಚಿಕ ರಾಶಿ** : ಹಣಕಾಸಿನ ವ್ಯವಹಾರದಲ್ಲಿ ನಷ್ಟ ಅನುಭವಿಸುವಿರಿ. ದೇಹದಲ್ಲಿ ಉಷ್ಣ ಸಂಬಂಧ ರೋಗಗಳು ಬರಬಹುದು. ಗೃಹವಲಯದಲ್ಲಿ ನೆಮ್ಮದಿ ಇಲ್ಲ. ಶತ್ರುಗಳು ವಂಚಿಸಬಹುದು. ನಾಗಾರಾಧನೆ ಮಾಡಿಕೊಂಡು ಬಂದಲ್ಲಿ ಶುಭ.

**ಧನಸ್ಸು ರಾಶಿ** : ಹಣಕಾಸಿನ ವ್ಯವಹಾರದಲ್ಲಿ ಲಾಭ ನಿಮ್ಮ ಪಾಲಿಗಿದೆ. ಆರೋಗ್ಯವು ಉತ್ತಮಗೊಂಡು ಸಂಸಾರದಲ್ಲಿ ನೆಮ್ಮದಿ. ಶತ್ರುಗಳ ಉಪಟಳ ಕಡಿಮೆಯಾಗುವುದು.

**ಮಕರ ರಾಶಿ** : ದೈವಾನುಕೂಲವಿದೆ. ವಿವಿಧ ಕಡೆಗಳಿಂದ ಹಣ ಕೈಗೂಡುವುದು. ಶತ್ರುಗಳಿಂದ ಅಪವಾದ ಕೇಳಲಿದ್ದೀರಿ. ಗೃಹವಲಯದಲ್ಲಿ ನೆಮ್ಮದಿ ಇದೆ. ಸ್ಥಳಾಂತರವಾಗುವ ಯೋಗವಿದೆ. ಶನಿ ಜಪದಿಂದ ಕಾರ್ಯಗಳೆಲ್ಲ ಕೈಗೂಡುವುದು.

**ಕುಂಭ ರಾಶಿ** : ಹಣಕಾಸಿನ ವ್ಯವಹಾರದಲ್ಲಿ ನೆಮ್ಮದಿ. ಶತ್ರುಗಳು ಹತ್ತಿರವಾಗುವರು. ಗೃಹವಲಯದಲ್ಲಿ ದೇವತಾಕಾರ್ಯ ಮಾಡುವಿರಿ. ಕೋರ್ಟು ತಕರಾರುಗಳಲ್ಲಿ ಜಯವಾಗಲಿದೆ. ದೇವತಾರಾಧನೆ ಮಾಡಿಕೊಂಡು ಬನ್ನಿ.

**ಮೀನ ರಾಶಿ** : ಹಣಕಾಸಿನ ವ್ಯವಹಾರದಲ್ಲಿ ಲಾಭವಿದೆ. ಶತ್ರುಗಳಿಂದ ವಂಚನೆಗೆ ಒಳಗಾಗುವಿರಿ. ಉದ್ಯೋಗ ಸಂಬಂಧವಾಗಿ ಸ್ಥಳದಿಂದ ಉಚ್ಚಾಟನೆಯಾಗುವಿರಿ. ಗೃಹವಲಯದಲ್ಲಿ ಕಲಹಗಳು ಏರ್ಪಡುವುದು. ಗುರು ಜಪ ಮಾಡುವುದರಿಂದ ಶಾಂತಿ,

## ಮೈಸೂರಿನಲ್ಲಿ ಹುತ್ತರಿ ಆಚರಣೆ

ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ದಿನಾಂಕ 11-12-2000 ರಂದು ಹುತ್ತರಿ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಸುಮಾರು 250ಕ್ಕಿಂತಲೂ ಹೆಚ್ಚು ಸಮಾಜ ಬಾಂಧವರು ಸಂಜೆ 8 ಗಂಟೆಗೆ ಸೇರಿ ನೆರೆಕಟ್ಟಿ 9 ಗಂಟೆಗೆ ಕದಿರನ್ನು ಕುಯ್ಯಲಾಯಿತು.

ಸಮಾಜದ ಹಿರಿಯರಾದ ನೆಯ್ಯಣ್ಣೀರ ಕುಶಾಲಪ್ಪನವರು ಕುಲಗುರು ವೆಂಕಟರಮಣ, ತಾಯಿ ಕಾವೇರಿ, ಇಗ್ಗುತಪ್ಪನನ್ನು ನೆನೆಯುವುದರ ಮೂಲಕ ಶ್ರೀ ಕುಯ್ಯಮುಡಿ ರಾಮಪ್ಪನವರು ಕದಿರು ಗುತ್ತಿಯನ್ನು ಪಟ್ಟಡ ಪ್ರಭಾಕರನವರ ಹೆಗಲಿಗೇರಿಸಿದರು. ಪಟ್ಟಡ ದಿವ್ಯ ಜಯರಾಂನವರು ಕಂಚಿಮಿ ಹಿಡಿದು ಮುನ್ನಡೆದರು. ಪೊಲಿ ಪೊಲಿಯೇ ಬಾ ಅನ್ನುವ ವೇದಘೋಷದೊಂದಿಗೆ ನೆಟ್ಟ ಬೆಳೆಗೆ ನೆರೆಕಟ್ಟಿ ದೇವರನ್ನು ನೆನೆದು ಅಕ್ಕಿ ಹಾಕಿ ಪ್ರಾರ್ಥಿಸಿ ಕದಿರು ಕುಯ್ಯಲಾಯಿತು. ಆಕಾಶಕ್ಕೆ ಗುಂಡನ್ನು ಹೊಡೆಯಲಾಯಿತು. ಪಟಾಕಿಗಳ ಆರ್ಭಟ ಗಗನ ಮುಟ್ಟುವಂತಿತ್ತು.

ಒಲೆಗೆರಡರಂತೆ ನೆರೆಯನ್ನು ಮತ್ತು ಕದಿರನ್ನುಹಂಚಲಾಯಿತು. ಕೊಡಗಿನ ಪದ್ಧತಿಯಂತೆ ತಂಬಿಟ್ಟು ಮತ್ತು ಅವಲಕ್ಕಿಯನ್ನು ಪ್ರಸಾದವಾಗಿ ಹಂಚಲಾಯಿತು. ಕೆಲವರಿಗೆ ನೆರೆ ಸಿಗದಿದ್ದದ್ದು ಗೋಚರಿಸಿತು. ಪ್ರಚಾರವಿಲ್ಲದೆ ಜನ ಸೇರಿರುವುದು ನಿಜಕ್ಕು ವಿಶೇಷವಾಗಿತ್ತು.

ವರದಿ : ಮಂಞ್ಞಾಪುರ ಗಣಪತಿ, ಹಿನಕಲ್ಲ್.

# ಸೇಬು ಮೇಲೋ, ಸೀಬೆ ಮೇಲೋ?
## 21ನೇಯ ಶತಮಾನದ ವಿಟಮಿನ್ನುಗಳು !

"ದಿನಕ್ಕೊಂದು ಸೇಬು ತಿಂದರೆ ವೈದ್ಯರನ್ನು ದೂರವಿಡಬಹುದು" ಎಂಬುದು ಹಳೆಯ ಮಾತಾಯಿತು. ಇತ್ತೀಚಿನ ವೈಜ್ಞಾನಿಕ ಮತ್ತು ವೈದ್ಯಕೀಯ ಸಂಶೋಧನೆಗಳ ಪರಿಣಾಮವಾಗಿ ಸೇಬಿಗಿಂತಲೂ ಇತರ ಹಣ್ಣುಗಳಲ್ಲಿ ಅಧಿಕ ಪೋಷಕಾಂಶಗಳಿರುವುದು ವ್ಯಕ್ತವಾಗಿದೆ. 'ಫೈಟೋಕೆಮಿಕಲ್ಸ್' ಎಂದರೆ, ಸಸ್ಯವರ್ಗದಲ್ಲಿನ ರಾಸಾಯನಿಕಗಳು, ಜೈವಿಕ ಕ್ಷೇತ್ರದಲ್ಲಿ ಹೊಸ ಬೆಳಕನ್ನು ಚೆಲ್ಲಿವೆ. ಇದರ ಪರಿಣಾಮವಾಗಿ ಸಾವಿರಾರು ಬಗೆಯ ಪೋಷಕಾಂಶಗಳು ಹಣ್ಣು ತರಕಾರಿಗಳಲ್ಲಿ ಪತ್ತೆಯಾಗಿವೆ. ಇವು ನಮ್ಮ ಸಾಮಾನ್ಯ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯಕವಲ್ಲದೆ ಅನೇಕ ಮಾರಕ ರೋಗಗಳಿಗೆ, ಉದಾಹರಣೆಗೆ - ಹೃದಯಾಘಾತ, ಕ್ಯಾನ್ಸರ್, ಮಧುಮೇಹ, ಅಲ್ಸರ್ ಮುಂತಾದವುಗಳಿಗೆ ರಾಮ ಬಾಣವಾಗಿ ಕೆಲಸ ಮಾಡುತ್ತವೆಂಬ ಅಂಶ ಸುಸ್ಪಷ್ಟವಾಗಿದೆ. ಈ ಫೈಟೋಕೆಮಿಕಲ್‌ಗಳನ್ನು 21ನೆಯ ಶತಮಾನದ ವಿಟಮಿನ್‌ಗಳೆಂದು ಕರೆಯುತ್ತಾರೆ.

### ಸೀಬೆಯ ಹೆಚ್ಚುಗಾರಿಕೆ

ಇವುಗಳ ಪೈಕಿ ಕ್ಯಾರೊಟಿನಾಯ್ಡ್, ಫ್ಲೇವೋ ನಾಯ್ಡ್, ಸಾಪೋನಿನ್ಸ್ ಪ್ರಮುಖವಾದುವು. ವಿಜ್ಞಾನಿಗಳು ಹಣ್ಣು ತರಕಾರಿಗಳಲ್ಲಿ ಸುಮಾರು 5,000 ಬಗೆಯ 'ಫ್ಲೇವೋನಾಯ್ಡ್'ಗಳನ್ನು ಮತ್ತು 600 ಬಗೆಯ 'ಕ್ಯಾರೊಟಿನಾಯ್ಡ್'ಗಳನ್ನು ಗುರುತಿಸಿದ್ದು, ಇವೆಲ್ಲವೂ ಮಾನವನ ಆರೋಗ್ಯ ರಕ್ಷಣೆಯಲ್ಲಿ ಬಹು ಅನುಕೂಲಕರವೆಂದು ವರದಿ ಮಾಡಿದ್ದಾರೆ. ಹೀಗಾಗಿ ನಾವು ಕೇವಲ ಸೇಬಿನಲ್ಲಿರುವ ಪೋಷಕಾಂಶಗಳ ಮೇಲೆ ಅವಲಂಬಿತರಾಗುವುದು ತಪ್ಪಾಗುತ್ತದೆ.

ಈ ದಿಸೆಯಲ್ಲಿ ಸೇಬಿಗಿಂತ ಸೀಬೆಹಣ್ಣು ಬಹಳಷ್ಟು ಉತ್ತಮವೆಂದು ಅಂಕಿ ಅಂಶಗಳಿಂದ ಸ್ಪಷ್ಟಪಡಿಸಿದ್ದಾರೆ. ಸೀಬೆಹಣ್ಣಿನಲ್ಲಿ ಸೇಬಿಗಿಂತ ಅಧಿಕ ವಿಟಮಿನ್ 'ಸಿ' ಇರುವುದು ಪ್ರಯೋಗ ಸಿದ್ಧವಾಗಿದೆ. ಅಷ್ಟೇ ಅಲ್ಲದೆ ಮೇಲೆ ಹೇಳಿದ 'ಫೈಟೋಕೆಮಿಕಲ್ಸ್‌ಗಳು' ಸೇಬಿಗಿಂತ ಸೀಬೆಹಣ್ಣಿನಲ್ಲಿ ಅಧಿಕವಾಗಿವೆಯೆಂದೂ ತಿಳಿದುಬಂದಿದೆ.

ಒಂದುನೂರು ಗ್ರಾಮ್ ಸೇಬಿನಲ್ಲಿ 0.2 ಗ್ರಾಮ್ ಪ್ರೊಟೀನ್ ಅಂಶವಿದ್ದರೆ, ಅದೇ ಒಂದುನೂರು ಗ್ರಾಮ್ ಸೀಬೆಹಣ್ಣಿನಲ್ಲಿ 0.9 ಗ್ರಾಮ್ ಪ್ರೊಟೀನ್ ಅಂಶ ಇದೆ ಎಂದು ತಿಳಿದುಬಂದಿದೆ. ಇದೇ ರೀತಿ ಸೇಬಿನಲ್ಲಿ ಶೇಕಡಾ ಒಂದರಷ್ಟು ಕಬ್ಬಿಣದ ಅಂಶವಿದ್ದರೆ, ಸೀಬೆಹಣ್ಣಿನಲ್ಲಿ ಶೇಕಡಾ 1.4 ರಷ್ಟು ಕಬ್ಬಿಣ ಇದೆ. ಸೀಬೆಹಣ್ಣಿನಲ್ಲಿ ಸೇಬಿಗಿಂತ ಅಧಿಕ ಪೊಟ್ಯಾಷಿಯಂ ಮತ್ತು ನಾರಿನ ಅಂಶಗಳಿವೆ. ಇದರ ಪರಿಣಾಮವಾಗಿ ರಕ್ತದಲ್ಲಿನ ಕೊಲೆಸ್ಟರಾಲ್ ಅಂಶವನ್ನು ನಿಯಂತ್ರಿಸುವಲ್ಲಿ ಸೇಬಿಗಿಂತ ಸೀಬೆಹಣ್ಣು ಹೆಚ್ಚು ಪರಿಣಾಮಕಾರಿ. ಕ್ರಮವಾಗಿ ಸೀಬೆಹಣ್ಣು ಸೇವಿಸುವವರಲ್ಲಿ ಅಧಿಕ ರಕ್ತದ ಒತ್ತಡ ಸಾಮಾನ್ಯ ಮಟ್ಟಕ್ಕೆ ಬಹುಬೇಗ ಬರುವುದೆಂದೂ ಸಲಹೆ ಮಾಡಿದ್ದಾರೆ. ಹೃದಯ ರೋಗ ಮತ್ತು ಅಧಿಕ ರಕ್ತದ ಒತ್ತಡ ಇದ್ದ 120 ರೋಗಿಗಳಿಗೆ ಪ್ರತಿ ದಿನ ಒಂದು ಸೀಬೆಹಣ್ಣನ್ನು ಸೇವಿಸುವಂತೆ ಹೇಳಿ ಪ್ರಯೋಗ ಮಾಡಿದಾಗ 12ವಾರಗಳ ಅನಂತರ ಅವರಲ್ಲಿ ಕೊಲೆಸ್ಟರಾಲ್ ಅಂಶ ಶೇಖಡಾ 12ರಷ್ಟು ಮತ್ತು ಟ್ರೈಗ್ಲಿಸರೈಡ್ ಅಂಶ ಶೇ. 11ರಷ್ಟು ಕಡಿಮೆಯಾದುದು ಕಂಡು ಬಂದಿತೆಂದು ಸಂಶೋಧಕರು ಹೇಳಿದ್ದಾರೆ. 'ಟ್ರೈಗ್ಲಿಸರೈಡ್ - ಕೊಬ್ಬಿಗೆ ಸಂಬಂಧ ಪಟ್ಟ ಅಂಶ). ಹಾಗೆಯೇ ಅವರ ಅಧಿಕ ಮತ್ತು ಲಘು ರಕ್ತದೊತ್ತಡ ಸಮಸ್ಯೆಯೂ ಕಡಿಮೆಯಾಯಿತು ಎನ್ನಲಾಗಿದೆ. ಆದರೆ ಸೀಬೆಹಣ್ಣು ತಿನ್ನದವರಲ್ಲಿ ಈ ಬದಲಾವಣೆಗಳು ಕಂಡುಬಂದಿಲ್ಲ ಎಂದಿರುವ ಸಂಶೋಧಕರು, ದಿನಕ್ಕೊಂದು ಸೇಬಿಗಿಂತ ಸೀಬೆಹಣ್ಣು ಹೃದಯ ಸಂಬಂಧಿ ರೋಗಗಳನ್ನು ದೂರವಿಡಲು ಹೆಚ್ಚು ಸಹಕಾರಿ ಎಂಬುದನ್ನು ಸ್ಪಷ್ಟ ಪಡಿಸಿದ್ದಾರೆ.

ಜಿ. ಅನಂತನಾರಾಯಣ ಸ್ವಾಮಿ.

---

## ಬಡಂವನ ಸುಖ ಸಂಸಾರ

ಕೋಟಿ ರೂಪಾಯಿ ಸರದಾರ
ಅಲ್ಲಾ ಇವು ನನ್ನ ಗಂಡ
ಮುತ್ತೇ ಸುರ್‌ದ್ ಸಾಂಕಿವೆ ನನ್ನ
ಇದ್ದ ಮೂರೇ ಕಾಸ್‌ಲೇ
||ಕೋಟಿ ರೂಪಾಯಿ||

ಅಕ್ಕಿ ಬೇಳೆ ಡಬ್ಬಿ ಎಲ್ಲಾ
ಹುಡುಕಿರೆ ಒಂಚೂರು ಇಲ್ಲೇ
ಬಾಯಿ ತುಂಬಾ ತುಂಬಿದ ಅಕ್ಕರೆ
||ಕೋಟಿ ರೂಪಾಯಿ||

ಗದ್ದೆ ತೋಟ ಎಂಬುದಿಲ್ಲೆ
ಕೈಯಿ ತುಂಬಾ ಕೆಲಸ ಉಟ್ಟು
ಕೊಸ್ಲಕ್ಕಿ ಗಂಜಿ ಕಾಸಿ ಕೊಟ್ಟರೆ
ಮಕ್ಕಳ ಒಟ್ಟೆಗೆ ಕುಡ್ದವೆ ಕುಸೀಲಿ
||ಕೋಟಿ ರೂಪಾಯಿ||

ಬಣ್ಣ ಬಂಗಾರ ಕಾಣೆ ನಾನ್
ಮಾನಲಿ ಬಾಳಿಕೆ ಬೇಕಷ್ಟುಟ್ಟು
ಕಷ್ಟ ಸುಖಲಿ ಸಮ ಸಮ ಪಾಲ್
ಹಂಚಿಕಂಡ್ ಬಾಳುವೆ ನಾವು
||ಕೋಟಿ ರೂಪಾಯಿ||

ಸಣ್ಣ ಗೂಡ್ ನಮ್ಮ ಈ ಮನೆ
ನೆಂಟರ್ ಬಂಟರ್ ಕಮ್ಮಿ ಇಲ್ಲೆ
ಇದ್ದದ್ದ್ ಬೇಸಿ ಇಕ್ಕಿವೆ ನಾವು
ತುಂಬಾ ಪ್ರೀತಿಲಿ ಸತ್ಕಾರ ಮಾಡಿ
||ಕೋಟಿರೂಪಾಯಿ||

ಬಿಟ್ಟೀರ ಚೋಂದಮ್ಮ ಶಂಭು.

---

ರಾಜ್ಯಾಂಗದಲ್ಲಿ ಉಲ್ಲೇಖಿತವಾದ 18 ಭಾಷೆಗಳ ಜೊತೆಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಒಪ್ಪಿರುವ ಭಾಷೆಗಳು
ಇಂಗ್ಲೀಷ್, ಟಿಬೆಟಿಯನ್, ಡೋಗ್ರಿ, ದೇವನಗರಿ, ನೇಪಾಳಿ, ಪಾಲಿ, ಮೈಥಿಲಿ, ರಾಜಸ್ಥಾನಿ.

8ನೇ ಪುಟದಿಂದ

ಆಗಿತ್. ಯಾಕೆತ್ತೇರೆ ಇದ್‌ಹೆಬ್ಬಾಳ್ ಮೆಯಿನ್ ರೋಡಿಗೆ ಹತ್ರ ಇದ್ದ್‌ದರಂದ ಈ ಜಾಗನ ಹೆಂಗಾದ್ರ್ ಮಾಡಿ ಸ್ವಾಧೀನಕ್ಕೆ ತಕಂಡ್ರೆ ಒಳ್ಳೆದ್‌ತಾ ಗ್ಯಾನ ಮಾಡಿತ್ತ್. ಆದ್ರೂ ತನ್ನ ಆಸೆನ ತೋರ್‌ಸ್ರಿಕಣದೆ ಹೇಳ್ತ್. ಆತ್‌ರ ರಾಜು. ನೀನ್ ಹೇಳ್ದ ಮೇಲೆ ಇನ್ನ್ ನಾನ್ ನಿಂಗೆ ಹೆಚ್ಚಿಗೆ ಹೇಳೋಕುತ್ತೇಳಿಲ್ಲಾ? ಎಲ್ಲಾ ನಿಂಗೇ ಗೊತ್ತುಟಲ್ಲಾ? ಸರಿ ಈಗ ಈ ಮನೆ ವ್ಯವಹಾರನ ನೀನ್ ನಿಂತ್‌ಕಂಡ್ ಪೂರ್ತಿ ಮಾಡಿಕೊಡ್‌ತಾ ಹೇಳ್ರೊ. ಮಿ. ರಾಜು ಮನೆ ಮಾಲೀಕ ಜಯದೇವನ ಹತ್ರ ಹೋಗಿ ಮಾತಾಡಿ ಹೇಳ್ತ್. ಆತ್ ಈ ವ್ಯವಹಾರನ ಇಂದೇ ಮುಗ್ಸಿಕೊಡುವ ಏರ್ಪಾಡ್‌ನ ಮಾಡಿನೆ. ನೀವು ನಿಮ್ಮ ಮನೆಗೆ ಸಮ್ಮಂದ ಪಟ್ಟಂತಹ ಎಲ್ಲಾ ಒರಿಜಿನಲ್ ಡಾಕ್ಯುಮೆಂಟ್ಸ್‌ಗಳ ತಕಂಡ್‌ತಾಲೋಕು ಆಫೀಸ್‌ಗೆ ಬಂದುಬುಡಿ. ನಾನ್ ಈ ಪಾರ್ಟಿನೆ ಕರ್ಕಂಡ್ ಹಣಸಮೇತ ಅಲ್ಲಿಗೆ ಕರ್ಕಂಡ್ ಬನ್ನೆ. ಎಲ್ಲಾ ವ್ಯವಹಾರನ ಚಕ ಚಕತಾ ಮುಗ್ಸಿಕೊಟ್ಟನೆ ತಾ ಹೇಳಿ ಅಲ್ಲಿಂದ ಮೆ. ಸುಬ್ಬಯ್ಯ ಅಂಕಲ್‌ನ ಕರ್ಕಂಡ್ ಪುನಃ ಹಿನ್‌ಕಲ್ ಕಡೆಗೆ ಹೊರಟತ್.

(ಮುಂದ್‌ವರ್ದದೆ)

---

13ನೇ ಪುಟದಿಂದ

ತಾಯಿ ಜಿಂಕೆ ತಾನು ಬಿದ್ದ ಜಾಗದಲ್ಲೇ ತಲೆ ಎತ್ತಿ ಇಳಿಜಾರಿನಿಂದ ಆ ದಿಬ್ಬದ ಕಡೆಗೆ ತನ್ನ ಮರಿಯ ಕಡೆ ನೋಡಿತು. ಹತ್ತು ಅಡಿಯ ಆಚೆ ಸತ್ತ ಕಂದನ ಕಡೆಗೆ ತೆವಳುತ್ತಾ ಸಾಗಿತು. ಆ ದಿಬ್ಬವನ್ನು ತೆವಳಲಾರದೆ ತೆವಳುತ್ತಾ ಕತ್ತೆತ್ತಿ ಮರಿಯ ಕಡೆ ನೋಡುತ್ತಾ ಮತ್ತೆ ತೆವಳುತ್ತಾ ಇದೆ. ಬೇಟೆಗಾರನಿಗೆ ಆ ತಾಯಿ ಜಿಂಕೆ ಎದ್ದು ಓಡಿಯಾತು ಎನಿಸಿತು. ಕೋವಿಗೆ ಮತ್ತೊಂದು ತೋಟ ಇಳಿದು ಕೋವಿ ರೆಡಿಯಾಯಿತು......

ಆದರೆ ಆ ತಾಯಿ ತೆವಳಿ ತೆವಳಿ ತನ್ನ ಮರಿಯನ್ನು ತಲುಪಿ ಆ ಕಂದನ ಸತ್ತ ಕೊರಳಿನ ಮೇಲೆ ತನ್ನ ಕೊರಳಿಟ್ಟು ಆ ಕ್ಷಣವೆ ಕಣ್ಣು ಮುಚ್ಚಿತು. ಬೋಪಯ್ಯನ ಕೋವಿ ತಲೆಕೆಳಗಾಯಿತು. ಮನಸ್ಸು ನಿಟ್ಟುಸಿರು ಬಿಡುತ್ತಾ ನಿಂತಿತು.

ಆ ಬೇಟೆಗಾರ ಆ ತಾಯ ಮುಖ ಮುಟ್ಟಿ ಸವರಿದ. ಆ ಕಂದನ ಮುಖ ಸವರಿದ. ಅವರೆಡರ ರಕ್ತ ನೆಲದಲ್ಲಿ ಕೂಡಿ ಹರಿದಿತ್ತು. ತಲೆಗೆ ಕೈ ಹೊತ್ತು ಕೂತಿದ್ದ ಬೋಪಯ್ಯನ ಕಣ್ಣುಗಳು ಆ ಕಡೆ ಈ ಕಡೆ ಹುಡುಕಿದವು. ಅಲ್ಲೊಂದು ಗುಂಡಿ ಕಂಡಿತು. ಆ ಜಿಂಕೆ ಮರಿಯನ್ನು ಮೇಲೆತ್ತಿ ಆ ಗುಂಡಿಯೊಳಗೆ ಮೆಲ್ಲನೆ ಇಟ್ಟ. ಮತ್ತೆ ಬಂದು ಆ ತಾಯನ್ನ ಎತ್ತಲಾರದೆ ಎತ್ತಿಕೊಂಡು ಕಷ್ಟ ಪಡುತ್ತಾ ಆ ಗುಂಡಿಯೊಳಗೆ ಆ ಮರಿಯ ಪಕ್ಕದಲ್ಲಿ ಮಲಗಿಸಿದ.

ಕಡ್ಡಿ ಕಸ ತಂದು ಆ ಗುಂಡಿಯನ್ನು ಮುಚ್ಚುತ್ತಾ ಆ ಗುಂಡಿಯನ್ನು ಮತ್ತೊಮ್ಮೆ ನೋಡುತ್ತಾ ನಿಟ್ಟುಸಿರುಬಿಟ್ಟ. ಆ ನಿಟ್ಟುಸಿರು "ಈ ಜೀವ ಇರೋವರೆಗೆ ಈ ಬೇಟೆ ಬೇಡ" ಎಂದಿತು.

# ಕುಷ್ಠರೋಗ ಗುಣವಾಗಬಲ್ಲ ರೋಗ

ದೇಹದ ಮೇಲಿನ ಸ್ಪರ್ಶಜ್ಞಾನ, ನವೆ ಇಲ್ಲದ ತಿಳಿ ತಾಮ್ರ ಬಿಳುಪಾದ ಮಚ್ಚೆಗಳು ಅಥವಾ ಕೈ, ಕಾಲು ಜೋಮು ಹಿಡಿಯುವುದು ಮತ್ತು ಮುಖ ಅಥವಾ ಕಿವಿಯ ಚರ್ಮದ ಮೇಲೆ ಗಂಟುಗಳು ಕಾಣಿಸಿಕೊಳ್ಳುವುದು. ಎಣ್ಣೆ ಸವರಿರುವಂತೆ ಚರ್ಮ ಕಾಣಿಸುವುದು ಕುಷ್ಠರೋಗದ ಚಿಹ್ನೆಯಾಗಿರಬಹುದು.

ಈ ರೋಗವು ಪಾಪ, ಶಾಪಗಳಿಂದ ಬರುವುದಿಲ್ಲ. ವಂಶಪಾರಂಪರ್ಯವಾಗಿಯೂ ಬರುವುದಿಲ್ಲ. ಈ ರೋಗವು ಮೈಕ್ರೋ ಬ್ಯಾಕ್ಟೀರಿಯಂಲೆಪ್ರೆ ಎಂಬ ರೋಗಾಣುವಿನಿಂದ ಬರುತ್ತದೆ.

ಎಲ್ಲಾ ಮಚ್ಚೆಗಳು ಕುಷ್ಟರೋಗದ ಮಚ್ಚೆಗಳಾಗಿರುವುದಿಲ್ಲ. ಈ ರೋಗವನ್ನು ಕೇವಲ 6 ಅಥವಾ 12 ತಿಂಗಳು ಮನೆಯಲ್ಲಿದ್ದು ಕೊಂಡೇ ವಾಸಿ ಮಾಡಿಕೊಳ್ಳಬಹುದು ಅಲ್ಲದೆ; ಒಂದು ಮಚ್ಚೆ ಇದ್ದರೆ ಕೇವಲ ಒಂದು ದಿನದ ಚಿಕಿತ್ಸೆಯೇ ಸಾಕು !!

ಕುಷ್ಠ ರೋಗದ ಬಗ್ಗೆ ಸರಿಯಾದ ಮಾಹಿತಿಯನ್ನು ತಿಳಿದು ಜನ ಸಾಮಾನ್ಯರಿಗೆ ತಿಳಿಸುವುದು ವಿದ್ಯಾವಂತರ ಕರ್ತವ್ಯವಾಗಿದೆ.

ನಿಮ್ಮ ದೇಹದ ಯಾವುದೇ ಭಾಗದಲ್ಲಿ ಸ್ಪರ್ಶಜ್ಞಾನ ವಿಲ್ಲದ ಮಚ್ಚೆ ಅಥವಾ ಕಲೆ ಇದ್ದರೆ ಅದು ಕುಷ್ಠರೋಗವಿದ್ದರೂ ಇರಬಹುದು ! ಇದರ ಬಗ್ಗೆ ಅನುಮಾನವೇ ಬೇಡ !! ಆದ್ದರಿಂದ ನಿಮ್ಮ ಊರಿಗೆ ಹತ್ತಿರವಿರುವ ಸ್ವಯಂಪ್ರೇರಿತ ದಾಖಲಾತಿ ಕೇಂದ್ರಕ್ಕೆ (ವಿ.ಆರ್.ಸಿ.) ಭೇಟಿಕೊಟ್ಟು ವೈದ್ಯರಿಂದ ಪರೀಕ್ಷಿಸಿ ಅನುಮಾನ ಪರಿಹರಿಸಿಕೊಳ್ಳಿ.

ಹೆಚ್ಚಿನ ಮಾಹಿತಿ ಬೇಕಾದರೆ ಆರೋಗ್ಯ ಇಲಾಖೆಯ ಸಿಬ್ಬಂದಿ ಅಥವಾ ಅಂಗನವಾಡಿ ಕಾರ್ಯಕರ್ತೆಯರಲ್ಲಿ ಅಥವಾ ಹತ್ತಿರದ ಆಸ್ಪತ್ರೆಗೆ ಭೆಟಿ ನೀಡಿ ಪಡೆದುಕೊಳ್ಳಬಹುದು.

ರೋಗದ ಬಗ್ಗೆ ತಪ್ಪು ಕಲ್ಪನೆ ಬೇಡ ! ಭಯ, ಗಾಬರಿ ಬೇಡ !! ಎಚ್ಚರಿಕೆ ಮಾತ್ರ ಸಾಕು !!!

ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣಾಧಿಕಾರಿಗಳು

---

12ನೇ ಪುಟದಿಂದ

ಉ : ಪುಸ್ತಕದ ಚಂದದಾರರನ್ನ, ಜಾಹಿರಾತ್‌ದಾರನ್ನ ಮತ್ತೆ ನವೀಕರಿಸುವವರನ್ನ ಮತ್ತೆ ಓದುವವರನ್ನ ನಂಬಿ ನಡ್ಸ್‌ತೊಳೆ.

ಪ್ರ : ನಿಮ್ಮ ಪುಸ್ತಕಪೂರ್ತಿ ಅರೆಭಾಷೆಲೇ ಮಾಡಿಕೆ ಸಾಧ್ಯ ಇಲ್ಲೆನಾ?

ಉ : ಸಾಧ್ಯ ಉಟ್ಟು. ಆದರೆ ಗೌಡರಲ್ಲಿ 50% ಕ್ಕಿಂತ ಹೆಚ್ಚಿನವು ಭಾಷಾ ಅಭಿಮಾನ್ಯ ಶೂನ್ಯರಾದ್ದರಿಂದ ಸದ್ಯಕ್ಕೆ ಕಷ್ಟ. ಹೆಚ್ಚಿನವುಕೆ ಅರೆಭಾಷೆಕ್ಕಿಂತ ಇಂಗ್ಲೀಷ್, ಕನ್ನಡ ಮಾತಾಡ್ದು ದೊಡ್ಡ ವಿಷ್ಯ.

---

ಜೀವನ ಒಂದುಯಾತ್ರೆ - ಪೂರ್ಣಗೊಳಿಸು

## ಶುಭಾಶಯಗಳು



ನಮ್ಮನೇಲಿರ್ವ ಹೂ ಗಿಡಕ್ಕೆಲ್ಲಾ ನಾನೇ ನೀರ್ ಹಾಕುದು ಅಂಕಲ್. ಹೆಂಗುಟ್ಟುತ ಹೇಳ್ತ್‌ಲಿರ್ವ

ಮೊಟ್ಟನ ಮೋನಿಷ್ ಸುಬ್ಬಯ್ಯ, ಮೈಸೂರು

# ಭಯದ ನೆರಳಲ್ಲಿ "ಕೊಡಗು ಸಂಗಾತಿ"

ದಿನಾಂಕ 9-4-1997ರ ಯುಗಾದಿಯ ಶುಭದಿನದಂದು ಜನಾಂಗದ ಮತ್ತು ನಾಡಿನ ಏಳಿಗೆಯನ್ನು ಬಯಸಿ ಪತ್ರಿಕೆ ಹೊರಬಂದರೂ ಹೆಚ್ಚಿನ ಚಂದದಾರರು ನವೀಕರಿಸದೆ ಇರುವುದರಿಂದ ಭಯದ ನೆರಳಿನಲ್ಲಿ ಸಂಗಾತಿ ಇರುತ್ತದೆ.

ಈಗ ನವೀಕರಿಸದೆ ಇರುವ ಸನ್ಮಾನ್ಯ ಚಂದದಾರರು ಕೂಡಲೇ ನವೀಕರಿಸಿಕೊಳ್ಳುವುದು ಅಲ್ಲದೆ, ದಿನಾಂಕ 8-4-2001ರಲ್ಲಿ ಎತ್ತಲಾಗುವ ಲಾಟರಿ ಯೋಜನೆಯ ಸೌಲಭ್ಯವನ್ನು ಪಡೆದುಕೊಳ್ಳುವಂತೆ ನನ್ನ ವಿನಮ್ರ ಕೋರಿಕೆ.

**ಪಟ್ಟಡ ಪ್ರಭಾಕರ**
ಗೌರವ ಸಂಪಾದಕರು

## ದಟ್ಟಡವಿಯ ತೂಂಗ್‌ಕೊಲ್ಲಿಯಲ್ಲಿ ಹಾಲುಹೊಳೆ ಜಲಪಾತ



ದಟ್ಟ ಹಸುರಿನ ರಾಶಿಯ ನಡುವೆ ಸುಯ್ ಗುಡುವ ಸಪ್ಪಳ ದೊಂದಿಗೆ ಬಿಳಿ ಸೀರೆಯಂತೆ ಕಂಗೊಳಿಸುವ ಜಲಪಾತಗಳು ಹಳ್ಳ, ತೊರೆ, ಕಲ್ಲು ಕಣಿವೆಗಳಲ್ಲಿ ಬಳುಕುತ್ತಾ, ಜಿಗಿಯುತ್ತಾ ಮೈಲುಗಟ್ಟಲೆ ದೂರ ಸಾಗುವ ನೋಟ ರಮಣೀಯ. ಆದರೆ ಎಲ್ಲಾ ಜಲಪಾತಗಳ ಸೌಂದರ್ಯ ಸವಿಯುವುದು ಅಷ್ಟು ಸುಲಭದ ಕೆಲಸವಲ್ಲ. ಚಾರಣ ಪ್ರಿಯರು, ಸಾಹಸಿಗರಾದಲ್ಲಿ ಮಾತ್ರ ನೋಡಬಹುದಾದಂತಹ ಅನೇಕ ಜಲಪಾತಗಳಿಗೇನೂ ಕರ್ನಾಟಕದಲ್ಲಿ ಕೊರತೆಯಿಲ್ಲ. ಅದರಲ್ಲೂ ಕೊಡಗಿನಲ್ಲಿ ಜಲಪಾತಗಳ ಸಮೂಹವೇ ಅಡಗಿದೆ.

ಸೆಪ್ಟಂಬರ್‌ನ ಮೊದಲ ವಾರ ಜಿಟಿ ಜಿಟಿ ಮಳೆಯಲ್ಲಿ ಐದು ಜನರ ನಮ್ಮ ತಂಡವು ಕೊಡಗಿನ ಅಜ್ಞಾತ 'ಹಾಲುಹೊಳೆ' ಜಲಪಾತದೆಡೆಗೆ ಚಾರಣ ಹೊರಟಿತು. ಕೊಡಗಿನ ಅತ್ಯಂತ ಎತ್ತರವಾದ ತಡಿಯಂಡಮೋಳು ಶಿಖರದ ಸರಹದ್ದಿನಲ್ಲಿರುವ ಇಗ್ಗುತಪ್ಪ ಬೆಟ್ಟದಿಂದ ಬಲ್ಲಿಯಟ್ರ ನದಿ ಹರಿದು ಬರುತ್ತದೆ. ಇದು ವೀರಾಜಪೇಟೆ ತಾಲ್ಲೂಕಿನ ಚೆಯ್ಯಂಡಾಣೆ ಬಳಿ ಚೇಲಾವರಗ್ರಾಮದ 'ತೂಂಗ್ ಕೊಲ್ಲಿ' ಎಂಬಲ್ಲಿ 'ಹಾಲು ಹೊಳೆ' ಜಲಪಾತವಾಗಿ ಧುಮುಕುತ್ತದೆ. ಮುಂದೆ ಹರಿದು ಇದು ಕಾವೇರಿ ನದಿಯನ್ನು ಸೇರುತ್ತದೆ. ಸುಮಾರು 40 ಅಡಿ ಎತ್ತರ ಮತ್ತು 150 ಅಡಿಗಳ ಅಗಲವಿರುವ ಈ ಜಲಪಾತ ನೋಡುವುದಕ್ಕೆ ಎರಡು ಕಣ್ಣುಗಳು ಸಾಲದು. ನಿಜಕ್ಕೂ ಹಾಲಿನಂತೆ ಮೆಟ್ಟಿಲು ಮೆಟ್ಟಿಲಾಗಿ ಬೀಳುವ ಈ ಜಲಪಾತವು ಕಣ್ಮನ ತಣಿಸುತ್ತದೆ. ಜಲಪಾತದ ಸುತ್ತಲೂ ಇರುವ ಕಾಫಿ ತೋಟಗಳು ಜಲಪಾತಕ್ಕೆ ವಿಶೇಷ ಮೆರುಗನ್ನು ನೀಡಿವೆ. ಇದಲ್ಲದೆ ಜಲಪಾತ ಹೋಗುವ ಹಾದಿಯಲ್ಲಿ ಅನೇಕ ಪುಷ್ಪಸುಂದರಿಯರನ್ನು ಕಾಣಬಹುದು. ಇವುಗಳಲ್ಲಿ ಕಾಡು ರೋಜಾ, ಲಂಟಾನಾ ಪ್ರಮುಖವಾದವು. ಇವು ಹಸಿರು ಸೀರೆಗೆ ಬಣ್ಣ ಬಣ್ಣದ ಚಿತ್ತಾರವಿಟ್ಟಂತೆ ಮೋಹಕವಾಗಿ ಕಾಣುತ್ತವೆ. ಇದಕ್ಕೆ ಪೂರಕವೇನೋ ಎಂಬಂತೆ ಆಗಾಗ ಆವರಿಸಿಕೊಳ್ಳುವ ಮಂಜು ಅದ್ಭುತ ರಸಾನುಭವವನ್ನು ಕೊಡುತ್ತದೆ.

ಕೊಡಗಿನ ಕೇಂದ್ರ ಸ್ಥಳ ಮಡಿಕೇರಿಯಿಂದ ಚೆಯ್ಯಂಡಾಣೆಗೆ 40 ಕಿ. ಮೀ. ದೂರವಿದೆ. ವೀರಾಜಪೇಟೆಯಿಂದ 28 ಕಿ. ಮೀ. ದೂರವಿದೆ. ಚೆಯ್ಯಂಡಾಣೆಯಿಂದ ಚೇಲಾವರ ಗ್ರಾಮಕ್ಕೆ ಸುಮಾರು ನಾಲ್ಕು ಕಿ. ಮೀ. ದೂರವಿದೆ. ರಸ್ತೆಯಲ್ಲಿ ಜೀಪು ಮಾತ್ರ ಓಡಾಡಬಹುದಾಗಿದೆ.

ಈ ಜಲಪಾತವನ್ನು ನೋಡಲು ಮಳೆಗಾಲ ಅತ್ಯುತ್ತಮ. ಮಳೆ ಅಬ್ಬರಕ್ಕೆ ಬೆದರುವವರಿಗೆ ಈಗ ಸಕಾಲ. ಜಿಗಣೆಗಳು ವಿಪರೀತವಾಗಿದ್ದರೂ ಕೊಂಚ ಸುಣ್ಣ ಅಥವಾ ಉಪ್ಪು ಅಥವಾ ಹೊಗೆಸೊಪ್ಪು ಇಟ್ಟುಕೊಂಡರೆ ಹೆಚ್ಚೇನೂ ರಕ್ತದಾನ ಮಾಡದೆ ಪಾರಾಗಬಹುದು. ಜಲಪಾತದ ಸುತ್ತಲೂ ಕಲ್ಲುಗಳು ನುಣುಪಾಗಿದ್ದು ಪಾಚಿ ಕಟ್ಟಿ ಕಾಲಿಟ್ಟರೆ ಜಾರುತ್ತದೆ. ಎಚ್ಚರ ತಪ್ಪಿದರೆ ಅಪಾಯವೇ.

ಈ ರಸ್ತೆಯನ್ನು ದುರಸ್ತಿಗೊಳಿಸಿ ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಿದರೆ ಹೆಚ್ಚಿನ ಸಂಖ್ಯೆಯಲ್ಲಿ ಜಲಪಾತ ಪ್ರವಾಸಿಗರನ್ನು ಸೆಳೆಯಬಹುದು. ಪ್ರವಾಸೋದ್ಯಮವು ಒಂದು ಮುಖ್ಯ ಆದಾಯವಾಗಿರುವ ಕೊಡಗಿಗೆ ಇದು ಇನ್ನೊಂದು ಸೇರ್ಪಡೆಯಾದೀತು. ಆದರೆ, ಈ ರೀತಿಯ ಯೋಜನೆಗಳು ಪ್ರಕೃತಿಯ ಮೇಲೆ ಅಟ್ಟಹಾಸವೆಸಗದಂತೆ ನೋಡಿಕೊಳ್ಳಬೇಕಾದುದು ಪ್ರತಿಯೊಬ್ಬ ಪರಿಸರ ಪ್ರೇಮಿಯ ಕರ್ತವ್ಯ. ಇಲ್ಲದಿದ್ದರೆ ಇಲ್ಲೂ ಪರಿಸರ ಮಾಲಿನ್ಯವಾಗುವುದು ಖಂಡಿತ.

**ಗಿರಿಧರ್ ಚಕ್ರವರ್ತಿ**

**Reg. No. KA/SK/MYS-88** **Registered : 10-01-96 TCI Kar. 09592**

*With best wishes to Kodagu Sangathi mooving towards 5th year 2001 "Keep it up" & "Good Luck"*

*From :*

**Kallu Muttlu Family**

**Kallumuttlu Ramappa Basappa (Jaya)**

**Managar / Accounts :**

**Samitan Electro Powers Pvt. Ltd.**

**&**

**Roopa Basappa**

*D. A. R. Office, Rajajinagar, Bangalore*

*also Daughter :*

**Jayashree Basappa**

**Residence Address :**

*No. 37, 3rd Main, Nanjappa Block, Kempe Gowda Nagar,*
*Bangalore - 560 019 ✆ : 650 0946*

**Kallumuttlu M. Ramappa**

*Rtd. Head Constable , Kanthur Village*

*&*

**Ammavva Ramappa**
**R. Somaiah (Nani)**
**R. Jamuna (Jasmi) Somaiah**
**S. Neshik Somaiah**

**Address :**

*Kallumuttlu House*
*Kanthur Village, Murnad Post*
*Madikeri Taluk, Kodagu Dist. Pin : 571252*

**Kodagu Sangathi** Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.